University of Mysore

Oriental Research Institute Publications

KANNADA SERIES No. 31

GENERAL EDITOR

H. DEVEERAPPA, M.A.,

Superintendent in Charge,

Oriental Research Institute, Mysore

ಕುಮಾರವ್ಯಾಸ ಮಹಾಕವಿ ವಿರಚಿತ

ಕರ್ಣಾಟಕ ಮಹಾಭಾರತ

ಆರನೆಯ ಸಂಪುಟ

ಉದ್ಯೋಗಪರ್ವ

THE

KARNĀTAKA MAHĀBHĀRATA

BY

KUMĀRA VYĀSA

Vol. VI

UḌYOGA PARVA

EDITED BY

Vidvan S. N. KRISHNA JOIS

MYSORE:

PRINTED BY THE SENIOR ASST. DIRECTOR, GOVT. BRANCH PRESS

1955

ಪ್ರಸ್ತಾವನೆ

ಗದುಗಿನ ಭಾರತದ 'ಉದ್ಯೋಗಪರ್ವ'ದ ಪ್ರತಿಗಳು ಮುಗಿದು ಹೋಗಿದ್ದುದರಿಂದಲೂ ಅನೇಕ ವಿದ್ಯಾಸಂಸ್ಥೆಗಳಲ್ಲಿ ಈ ಕಾವ್ಯವು ಪಠ್ಯ ಪುಸ್ತಕವಾಗಿರುವುದರಿಂದಲೂ ಇದನ್ನು ಪರಿಷ್ಕರಿಸಿ ಎರಡನೆಯ ಬಾರಿ ಪ್ರಕಟಿಸಲಾಗಿದೆ. 'ಆದಿಪಂಚಕ' ದ ಉಳಿದ ಪರ್ವಗಳೂ ಪುನರ್ಮುದ್ರಣ ಕ್ಕಾಗಿ ಸಿದ್ಧವಾಗುತ್ತಿವೆ.

ಈ ಎರಡನೆಯ ಆವೃತ್ತಿಯಲ್ಲಿ ಕೆಲವು ಮಾರ್ಪಾಟುಗಳನ್ನು ಮಾಡ ಲಾಗಿದೆ. ಅವುಗಳಲ್ಲಿ ಮುಖ್ಯವಾದುದು ಸಂಧಿಗಳ ಪುನರ್ವಿಂಗಡಣೆ. ಈ ವಿಷಯದಲ್ಲಿಯೂ ಸಂಪ್ರತಿಗಾಗಿ ಬಳಸಿಕೊಂಡಿರುವ ಮಾತೃಕೆಗಳ ವಿಷಯ ದಲ್ಲಿಯೂ ಸಂಪೂರ್ಣ ವಿವರಗಳನ್ನು ಪೀಠಿಕೆಯಲ್ಲಿ ಕೊಡಲಾಗಿದೆ.

ಈಗಾಗಲೇ ಅನೇಕ ಕಡೆಗಳಲ್ಲಿ ಅನೇಕ ವಿಧಗಳಲ್ಲಿ ಚರ್ಚಿಸಲ್ಪಟ್ಟಿ ರುವ ಈ ಕವಿಯ ಕಾಲ, ದೇಶ, ಮತಗಳ ವಿಷಯಕ್ಕೆ ಅತ್ಯಲ್ಪ ಪ್ರಾಧಾನ್ಯ ಕೊಡಲಾಗಿದೆ. ಉದ್ಯೋಗಪರ್ವದ ಕಥೆಯನ್ನೂ, ಪ್ರಕೃತಪರ್ವಕ್ಕೆ ಸಂಬಂಧಪಟ್ಟಂತೆ ವ್ಯಾಸಭಾರತ–ಕುಮಾರವ್ಯಾಸಭಾರತಗಳಿಗೂ, ಪಂಪ ಭಾರತ–ನಾರಣಪ್ಪನ ಭಾರತಗಳಿಗೂ, ದೂತವಾಕ್ಯ–ಗದುಗಿನ ಭಾರತ ಗಳಿಗೂ ಇರುವ ಸಾಮ್ಯವೈಷಮ್ಯಗಳನ್ನೂ ತೋರಿಸಲಾಗಿದೆ.

ಅಚ್ಚಿಗಾಗಿ ಹಸ್ತಪ್ರತಿಯನ್ನು ಸಿದ್ಧಪಡಿಸುವಲ್ಲಿ ಮೈಸೂರು ಅರಮನೆ ಸರಸ್ವತೀಭಂಡಾರದಲ್ಲಿರುವ ಮೂರು ಮಾತೃಕೆಗಳನ್ನು ಬಳಸಿಕೊಳ್ಳ ಲಾಯಿತು. ಈ ಪ್ರತಿಗಳನ್ನು ಎರವಲಾಗಿ ಕೊಟ್ಟ ಅರಮನೆಯ ಸರಸ್ವತೀ ಭಂಡಾರದ ಅಧಿಕಾರಿಗಳಿಗೆ ನಮ್ಮ ಅಭಿವಂದನೆಗಳು.

ಎಚ್. ದೇವೀರಪ್ಪ.

ವಿಷಯಾನುಕ್ರಮಣಿಕೆ

ಸಂಧಿ ವಿಷಯ ಪುಟ

ಪೀಠಿಕೆ

ಗದುಗಿನ ಭಾರತವೆಂದೂ, ಭಾರತಕಥಾಮಂಜರಿಯೆಂದೂ ಪ್ರಸಿದ್ಧವಾಗಿರುವ ಈ ಷಟ್ಪದೀಕಾವ್ಯವು ಕನ್ನಡ ನಾಡಿನ ಎಲ್ಲ ರಸಿಕರ ಮನವನ್ನೂ ಸೂರೆಗೊಂಡಿರುತ್ತದೆ. ಈ ಕಾವ್ಯಕುಸುಮಮಂಜರಿಯು ಎಂದೆಂದಿಗೂ ಬಾಡದ ಚೆಲುವುಳ್ಳುದು, ಎಂದೆಂದಿಗೂ ಅಳಿಯದ ಕಂಪುಳ್ಳುದು ಎಂದು ಹೇಳಿದರೆ ಸಾಲದು. ಇದು ದಿನದಿನಕ್ಕೂ ಹೊಸತುಹೊಸತಾಗಿ ಹೆಚ್ಚುಹೆಚ್ಚಾಗಿ ರಸಿಕರಿಗೆ ಆನಂದವೀಯುತ್ತಿದೆ. ಅಷ್ಟೇ ಅಲ್ಲ, ಅರಸುಗಳಿಗೆ ವೀರವಾಗಿಯೂ ದ್ವಿಜರಿಗೆ ಪರಮವೇದದ ಸಾರವಾಗಿಯೂ ಕಂಗೊಳಿಸುತ್ತಿದೆ.

ಈ ಕವಿಯ ಹೆಸರು ಕುಲ ಗೋತ್ರ ಯಾವುದೂ ಗೊತ್ತಾಗುವುದಿಲ್ಲ ಶ್ರೇಷ್ಠತಮ ಕಲಾಕೃತಿಯನ್ನು ರಚಿಸಿ ಕನ್ನಡಿಗ ರಸಿಕರ ಗೌರವಾದರಗಳಿಗೆ ಪಾತ್ರನಾಗಿರುವ ಈ ಮಹಾಕವಿ 'ನಮ್ಮವನು' ಎಂದು ಹೇಳಿಕೊಳ್ಳುವುದಕ್ಕೆ ಯಾವ ಕನ್ನಡಿಗನಿಗೆ ತಾನೆ ಹೆಮ್ಮೆಯಾಗುವುದಿಲ್ಲ? ಆದುದರಿಂದಲೇ ಈಕವಿ ಕೆಲವರಿಗೆ ವೈಷ್ಣವನಂತೆ, ಕೆಲವರಿಗೆ ವೀರಶೈವನಂತೆ, ಕೆಲವರಿಗೆ ಶೈವನಂತೆ ಕಂಡಿದ್ದಾನೆ. ಕನ್ನಡ ಜಾಣರೆಲ್ಲ ಈ ಕೃತಿಯನ್ನು ಮೆಚ್ಚಿಕೊಂಡಿರುವರೆನ್ನುವುದಕ್ಕೆ ಇನ್ನೇನು ಸಾಕ್ಷಿ ಬೇಕು. 'ವೀರ ನಾರಾಯಣನೆ ಕವಿ*', 'ಲಿಪಿಗಾರ ಕುಮರವ್ಯಾಸ' ಎಂದು ಹೇಳಿ ಕೊಂಡಿರುವ ಕವಿಯ ನಿರ್ಮಮತೆ ಅನುಕರಣೀಯವಾದುದು.

ಈ ಮಹಾಕವಿಯ ಕನ್ನಡ ಮಹಾಭಾರತದ ಉದ್ಯೋಗಪರ್ವವು ಶ್ರೀ ರಾಮಾಯಣದ ಸುಂದರಕಾಂಡದಂತೆ ಸಾರವಾದದ್ದು. ಈ ಪರ್ವದ ಕಥಾಭಾಗವು ಸೇನೆಯ ಉದ್ಯೋಗದಿಂದ [ಯುದ್ಧಕ್ಕಾಗಿ ಸೇನೆಯ ಶೇಖರಣೆಯಿಂದ] ಆರಂಭವಾಗುತ್ತದೆ. ಅಲ್ಲದೆ ಕೌರವ ಪಾಂಡವರ ಸಂಧಿಗಾಗಿ ಕೃಷ್ಣನು ಉದ್ಯೋಗಿಸುತ್ತಾನೆ. ಆದಕಾರಣ ಈ ಪರ್ವಕ್ಕೆ ಉದ್ಯೋಗಪರ್ವವೆಂದು ಹೆಸರುಬಂದಿದೆ.

ಗದುಗಿನ ಭಾರತವು ಕನ್ನಡದೇಶದ ಮನೆಮನೆಯನ್ನೂ ಬೆಳಗಬಲ್ಲ ಬೆಳಗಬೇಕಾಗಿರುವ ನಂದಾದೀಪವೆಂದರೆ ಆ ದೀಪದ ಕುಡಿ ಉದ್ಯೋಗಪರ್ವ ಎಂದು ಹೇಳಬೇಕಾಗುತ್ತದೆ.

---

*ಈ ಕವಿಯನ್ನು ನಾರಣಪ್ಪನೆಂದು ಕರೆಯುವುದು ರೂಢಿಯಲ್ಲಿದೆ. ಈತನ ಕಾಲ ಸುಮಾರು ಕ್ರಿ. ಶ. 1230–35 [ಕುಮಾರವ್ಯಾಸ ಪ್ರಶಸ್ತಿ, ಪುಟ ೨೧].

ಕಥಾಸಾರ

೧ನೆಯ ಸಂಧಿ

ಅಭಿಮನ್ಯುವಿನ ಮದುವೆಯು ವಿಜೃಂಭಣೆಯಿಂದ ನಡೆದಮೇಲೆ ಪಾಂಡವರು ಮದುವೆಯ ಉತ್ಸವದಿಂದಲೂ, ಕೃಷ್ಣನ ದರ್ಶನದಿಂದಲೂ ಸಂತುಷ್ಟರಾಗಿ ಉಪಪ್ಲಾವ್ಯನಗರದಲ್ಲಿ ವಾಸಿಸುತ್ತಿದ್ದರು. ಒಂದು ದಿವಸ ಕೃಷ್ಣನು ಯುಧಿಷ್ಠಿರನ ಒಡ್ಡೋಲಗಕ್ಕೆ ಬಂದು ಎಲ್ಲ ರಾಜರ ಎದುರಿನಲ್ಲಿ "ಜೂಜಿನ ವ್ಯಾಜದಿಂದ ಪಾಂಡವರು ಅರಣ್ಯದಲ್ಲಿ ಬಹಳ ನೊಂದಿರುತ್ತಾರೆ. ಇವರು ತಮ್ಮ ರಾಜ್ಯವನ್ನು ಸೇರುವುದು ಎಂದು? ಇವರ ಸ್ಥಿತಿ ಏನು?" ಎಂದು ರಾಜಕಾರ್ಯವನ್ನು ನುಡಿದನು. ಇದನ್ನು ಕೇಳಿ ದ್ರುಪದರಾಜನು "ದೇವ! ನಿನ್ನನ್ನೇ ನಂಬಿರುವ ಧರ್ಮರಾಜಾದಿಗಳನ್ನು ಕಾಪಾಡುವ ಭಾರ ನಿನ್ನದು. ಅದು ನಿನಗೆ ತಿಳಿದೇ ಇದೆ. ನೀನು ಹೇಳುವುದನ್ನು ತಲೆಯಲ್ಲಿ ಆಂತು ನಡೆಸುವುದು ಮಾತ್ರ ನಮಗೆ ಗೊತ್ತಿದೆ" ಎಂದು ಹೇಳಿದನು. ಆಗ ಕೃಷ್ಣನು "ಧರ್ಮರಾಜ! ಭೀಷ್ಮಾದಿಗಳ ಸಮೀಪಕ್ಕೆ ಶಿಷ್ಟರನ್ನು ಕಳುಹಿಸಿ ರಾಜ್ಯವನ್ನು ಪಡೆಯಲು ಸಾಮವನ್ನು ಬಳಸಬೇಕು. ಕೊಡಲು ಸಮ್ಮತಿಸದಿದ್ದರೆ ಅವರೊಡನೆ ಯುದ್ಧಮಾಡಬೇಕು. ಇದೇ ನನ್ನ ಮತ" ಎಂದನು. ಕೂಡಲೇ ಬಲರಾಮನು "ಎಲೆ ಮರುಳು ಮಾಧವ! ಧರ್ಮರಾಜನು ಜೂಜಿನಲ್ಲಿ ರಾಜ್ಯವನ್ನು ಕಳೆದುಕೊಂಡಿರುತ್ತಾನೆ. ಪುನಃ ಇವನು ಪಣವನ್ನು ಒಡ್ಡಿ ಜೂಜಿನಿಂದಲೇ ರಾಜ್ಯವನ್ನು ಪಡೆಯಲಿ; ಇಲ್ಲದಿದ್ದರೆ ಯುದ್ಧಮಾಡಲಿ; ಗೆದ್ದು ರಾಜ್ಯವನ್ನು ತೆಗೆದುಕೊಳ್ಳಲಿ. ಈ ವಿಚಾರದಲ್ಲಿ ದುರ್ಯೋಧನನು ತಪ್ಪುಮಾರ್ಗದಲ್ಲಿ ನಡೆದಿಲ್ಲ." ಎಂದು ಹೇಳಲು, ಸಾತ್ಯಕಿಯು ಬಿರುಸಾಗಿ ಮಾತನಾಡಿ "ಯುದ್ಧದಲ್ಲಿ ಶತ್ರುಗಳನ್ನು ನಾಶಮಾಡಿ ಕ್ಷತ್ರಿಯರು ರಾಜ್ಯವನ್ನು ತೆಗೆದುಕೊಳ್ಳುವುದು ನ್ಯಾಯವಾದುದೇ ಸಹಜ. ಬೇಡುವುದು ಸಮ್ಮತವಲ್ಲ" ಎಂದನು.

ಇದನ್ನು ಕೇಳಿ ದ್ರುಪದನು ನಕ್ಕು "ಈ ಸಾತ್ಯಕಿಯ ಅಭಿಪ್ರಾಯವೇ ನನಗೂ ಸಮ್ಮತವು. ಕೌರವನು ಯುದ್ಧದಿಂದಲ್ಲದೆ ರಾಜ್ಯವನ್ನು ಕೊಡುತ್ತಾನೆಯೆ? ಆದರೂ, ಸಾತ್ಯಕಿಯೇ! ಕೇಳು; ಮೊದಲು ಒಬ್ಬ ದೂತನನ್ನು ಕೌರವನ ಬಳಿಗೆ ಕಳುಹಿಸಿ ಸಾಮವನ್ನು ಬಳಸಿ ನೋಡೋಣ" ಎಂದನು.

"ದ್ರುಪದನ ಅಭಿಪ್ರಾಯವು ಸರಿಯಾದುದು; ಯುದ್ಧವನ್ನು ಸೂಚಿಸಿ ನಮ್ಮ ಪಕ್ಷಕ್ಕೆ ರಾಜರನ್ನು ಕರೆಸಿ ಯುದ್ಧಕ್ಕೆ ಸನ್ನದ್ಧರಾಗಿ; ಕೌರವನಲ್ಲಿಗೆ ರಾಜ್ಯಬೇಡಲು ಒಬ್ಬ ದೂತನನ್ನು ಕಳುಹಿಸಿ. ನಾನು ಅಭಿಮನ್ಯುವಿನ ಮದುವೆಗಾಗಿ ಬಂದವನು; ರಾಜಕಾರ್ಯದ ಸ್ಥಿತಿಗಳನ್ನೆಲ್ಲಾ ತಿಳಿದು ಕರೆಸಿದಾಗ ನಾನು ಬರುತ್ತೇನೆ. ನೀವು ಸೌಖ್ಯದಿಂದಿರಿ"

ಎಂದು ಕೃಷ್ಣನು ಹೇಳಿ ಪಾಂಡವರು, ದ್ರೌಪದಿ, ಅಭಿಮನ್ಯು ಮತ್ತು ಸುಭದ್ರೆ ಇವರನ್ನು ಹರಸಿ ದ್ವಾರಕಿಗೆ ಪ್ರಯಾಣಮಾಡಿದನು.

ದ್ರುಪದನು ಒಂದು ದಿನ ಮಂತ್ರಾಲೋಚನೆಮಾಡಿ, ಸಾಮೋಪಾಯದಿಂದ ರಾಜ್ಯವನ್ನು ಕೊಡುವಂತೆ ಕೇಳಲು ತನ್ನ ಪುರೋಹಿತನನ್ನು ಕೌರವನ ಪಟ್ಟಣಕ್ಕೆ ಕಳುಹಿಸಿದನು. ಬಳಿಕ ಯುದ್ಧಕ್ಕೆ ನೆರವಾಗಬೇಕೆಂದು ಪಾಂಡವರು ರಾಜರಿಗೆ ಓಲೆಯನ್ನು ಕಳುಹಿಸಲು, ಅವರಲ್ಲಿ ಕೆಲವರು ಪಾಂಡವರ ಪಕ್ಷಕ್ಕೂ ಮತ್ತೆ ಕೆಲವರು ಕೌರವರ ಪಕ್ಷಕ್ಕೂ ಸಹಾಯಕ್ಕಾಗಿ ಸೈನ್ಯದೊಡನೆ ತಂಡೋಪತಂಡವಾಗಿ ಬಂದರು. ಇದನ್ನು ನೋಡಿ ದುರ್ಯೋಧನನು "ಶತ್ರುಗಳು ಬಲಿಷ್ಠರಾಗುತ್ತಿದ್ದಾರೆ; ನಾವು ಮೈಮರೆತು ಕುಳ್ಳಿರದೆ ಜಾಗ್ರತೆಯಿಂದಿರಬೇಕು"ಎಂದು ಯೋಚಿಸಿ, ಆಪ್ತರಿಗೆ ಈ ಸಮಾಚಾರವನ್ನು ತಿಳಿಸಿ, ಕೃಷ್ಣನನ್ನು ಒಳಗುಮಾಡುವುದಕ್ಕಾಗಿ ದ್ವಾರಕಿಗೆ ಗುಪ್ತವಾಗಿ ಪ್ರಯಾಣಮಾಡಿದನು.

ಗೂಢಚಾರರು ಈ ಸುದ್ದಿಯನ್ನು ಬೇಗನೆ ಕುಂತೀಸುತರಿಗೆ ತಿಳಿಸಿದರು. ಧರ್ಮರಾಜನು ಹೆದರಿ, ಅರ್ಜುನನನ್ನು ಕೂಡಲೇ ದ್ವಾರಕಿಗೆ ಅದೇ ಕಾರ್ಯಕ್ಕಾಗಿ ಕಳುಹಿಸಿದನು.

ಅರ್ಜುನನು ದ್ವಾರಕಿಗೆ ಪ್ರಯಾಣಮಾಡಿದಾಗ ಶುಭಶಕುನಗಳು ಆದುವು. ಆತನು "ದ್ವಾರಕಿಯು ಸಾಮಾನ್ಯವಾದ ನಗರಿಯಲ್ಲ. ಇಲ್ಲೇ ಅಲ್ಲವೇ ಹರಿಯು ಶ್ರುತಿಗಳಿಗೆ ಪ್ರತ್ಯಕ್ಷವಾದುದು ಮತ್ತು ತಾಪಸರನ್ನು ಬದುಕಿಸಿದುದು! ಮುಕ್ತಿಯು ಕರತಳಾಮಲಕವಾಗಿರುವುದು ಇಲ್ಲೇ; ತರ್ಕತಂತ್ರದ ಯುಕ್ತಿಯು ಇಲ್ಲಿ ಯಾವ ಪ್ರಯೋಜನಕ್ಕೂ ಬಾರದು" ಎಂದು ದ್ವಾರಕಾಪುರಿಯನ್ನು ಸ್ತುತಿಸುತ್ತ ಪಟ್ಟಣಕ್ಕೆ ಬಂದು, ಕೃಷ್ಣನ ಅರಮನೆಯನ್ನು ಪ್ರವೇಶಿಸಿದನು. ಆಗ ಕೃಷ್ಣನು ಮಂಚದ ಮೇಲೆ ನಿದ್ರಾಕೇಳಿಯಲ್ಲಿ ಇರುವುದನ್ನು ಅರ್ಜುನನು ಕಂಡು, ಆತನನ್ನು ಎಚ್ಚರಗೊಳಿಸದೆ ಭಕ್ತಿಯಿಂದ ಕೈಮುಗಿದು ಆತನ ಚರಣಗಳ ಸಮೀಪಕ್ಕೆ ಹೋದನು. ಬಳಿಕ ದುರ್ಯೋಧನನು ಕೃಷ್ಣನ ತಲೆಯ ಪಾರ್ಶ್ವಕ್ಕೆ ಹೋಗಿ ಕುಳಿತುಕೊಂಡನು.

ಸ್ವಲ್ಪ ಹೊತ್ತಿನಲ್ಲೇ ಕೃಷ್ಣನು ಮೈಮುರಿದು ಮೇಲಕ್ಕೆದ್ದು ಮುಗುಳ್ನಗೆಯಿಂದ ಎದುರಿನಲ್ಲಿದ್ದ ಅರ್ಜನನನ್ನು ನೋಡಿದನು. ಮತ್ತೆ ಹಿಂದಿರುಗಿ ನೋಡಿ ತಲೆಯ ಪಾರ್ಶ್ವದಲ್ಲಿ ಮ[illegible]ವಿಕಾರದಿಂದ ಕೂಡಿ ಕುಳಿತಿದ್ದ ದುರ್ಯೋಧನನನ್ನೂ ಕಂಡು ಆಶ್ಚರ್ಯಚಕಿತನಾದನು. ಇವರಿಬ್ಬರಿಗೂ ವೀಳೆಯವನ್ನು ಕೊಟ್ಟು ಸತ್ಕರಿಸಿ "ನೀವಿಬ್ಬರೂ ಏಕಕಾಲದಲ್ಲಿ ಇಲ್ಲಿಗೆ ಬಂದಿರುತ್ತೀರಿ. ಇದು ಆಶ್ಚರ್ಯವಲ್ಲವೇ! ಮಾನ್ಯರಾದ ನೀವು ನಮ್ಮಲ್ಲಿಗೆ ಬಂದ ಕಾರ್ಯವೇನು?" ಎಂದು ಕೃಷ್ಣನು ಕೇಳಿದನು. ಅದಕ್ಕೆ ದುರ್ಯೋಧನನು "ಯಾದವ ಕೌರವರಲ್ಲಿ ಭೇದವೇ? ನಾವು ಈ ರೀತಿ ಬಂದುದರಿಂದ ಆದ ಲಾಘವವೇನು? ನಮಗೆ ನಿಮಗಿಂತ ಸ್ನೇಹಿತರು

ಮತ್ತಾರು? ಸೋದರರಾದ ನಮಗೂ ಪಾಂಡವರಿಗೂ ವೈಮನಸ್ಯ ಉಂಟಾಗಿದೆ. ನಾವಿಬ್ಬರೂ ರಾಜ್ಯಕ್ಕಾಗಿ ಯುದ್ಧಮಾಡುತ್ತೇವೆ; ನೀವು ಇಬ್ಬರಿಗೂ ಸಹಾಯ ಮಾಡಬೇಕು" ಎಂದನು.

ಇದನ್ನು ಕೇಳಿ ಕೃಷ್ಣನು "ಕೌರವೇಶ್ವರ! ಕೇಳು; ಭೂರಮಣಿ ಯಾವ ದೊರೆಯೊಡನೆ ಒಕ್ಕಲುತನವಿರುತ್ತಾಳೆ? ಯಾರನ್ನು ಮೆಚ್ಚಿರುತ್ತಾಳೆ? ಯಾರೊಡನೆ ಸಹಗಮನ ಮಾಡಿರುತ್ತಾಳೆ? ದೊರೆಗಳು ಈ ವಿಷಯವನ್ನು ಸ್ವಲ್ಪವೂ ವಿಮರ್ಶಿಸದೆ ಭೂಮಿಯನ್ನು ತಮ್ಮವಳೆಂದೇ ಭಾವಿಸಿ ನರಕ ಸಾಮ್ರಾಜ್ಯಕ್ಕೆ ಹೋಗುತ್ತಾರೆ. ರಾಜ್ಯಕ್ಕಾಗಿ ಸೋದರರು ಯುದ್ಧಮಾಡಿ ಹಾಳಾದರೆಂದು ಬ್ರಹ್ಮನಾಯುಃಪರಿಯಂತರವೂ ಲೋಕವು ನಿಮ್ಮನ್ನು ಆಡಿಕೊಳ್ಳುವುದಿಲ್ಲವೆ? ನಿಮ್ಮಲ್ಲಿ ಪರಸ್ಪರ ಜಗಳಬೇಡ. ನೀವುಗಳು ಕೂಡಿ ಬದುಕುವುದು ಒಳ್ಳೆಯದು. ಅದನ್ನು ನೋಡಿ ನಾವು ಸಂತೋಷಪಡು ತ್ತೇವೆ. ಟಗರನ್ನು ಹುರಿದುಂಬಿಸಿ ಕಾಳಗಮಾಡುವುದನ್ನು ನೋಡು ವಂತೆ, ನೀಚರು ನಿಮ್ಮನ್ನು ಯುದ್ಧಕ್ಕಾಗಿ ಹುರಿಮಾಡುತ್ತಿದ್ದಾರೆ. ಹುರಿಮಾಡುವ ಈ ನೀಚರು ಕೊನೆಯಲ್ಲಿ ನಿಮ್ಮ ಸ್ಥಿತಿಯನ್ನು ನೋಡಿ ಹಿಂದೆ ನಗುತ್ತಾರೆ. ನೀವಿಬ್ಬರೂ ಅಪಕೀರ್ತಿಯನ್ನು ಪಡೆಯುತ್ತೀರಿ" ಎಂದನು.

ಅದಕ್ಕೆ ದುರ್ಯೋಧನನು "ಮುರವೈರಿ! ಅವಧರಿಸು ; ಈಗ ಧರ್ಮ ಶ್ರವಣಕ್ಕಾಗಿ ನಿಮ್ಮಲ್ಲಿಗೆ ನಾವು ಬಂದಿಲ್ಲ. ದೊರೆಗಳಿಗೆ ತಕ್ಕಂತೆ ನಮಗೆ ಯುದ್ಧದಲ್ಲಿ ಆಸಕ್ತಿಯುಂಟಾಗಿದೆ. ನೀವು ನಮ್ಮಿರ್ವರಿಗೂ ಸಮಾನ. ಆದುದರಿಂದ ನೀವು ಇಬ್ಬರಿಗೂ ಸಹಾಯಮಾಡಬೇಕು" ಎಂದು ಹೇಳಲು, ಕೃಷ್ಣನು ತಂಬುಲಸೂಸುವಂತೆ ನಕ್ಕು, ಅರ್ಜುನನನ್ನು ನೋಡಿ, ಅವನ ಅಭಿಪ್ರಾಯವನ್ನು ಕೇಳಲು, ದುರ್ಯೋಧನನ ಅಭಿಪ್ರಾಯವನ್ನೇ ತಾನೂ ಒಪ್ಪಿರುವೆನೆಂದು ಅರ್ಜುನನು ಹೇಳಿದನು. ಆಗ ಕೃಷ್ಣನು "ಅದನ್ನೇ ನೀನೂ ಒಪ್ಪಿರುವೆಯಾದರೆ ಅರ್ಜುನ! ಕೇಳು ; ಯುದ್ಧ ಮಾಡದ ನಾನು ಒಂದು ಕಡೆ, ಯುದ್ಧ ಮಾಡುವ ನಮ್ಮ ಅಪರಿಮಿತ ನಾರಾಯಣಸೇನೆ ಕೃತವರ್ಮ ಮತ್ತು ಬಲರಾಮನೇ ಆದಿಯಾದ ಯಾದವರೆಲ್ಲ ಒಂದು ಕಡೆ. ಈ ಎರಡರಲ್ಲಿ ನಿನಗೆ ಮೆಚ್ಚಿಗೆಯಾದುದನ್ನು ವರಿಸು" ಎಂದು ಹೇಳಿದನು. ಅದನ್ನು ಕೇಳಿ ಅರ್ಜುನನು ಕೈಮುಗಿದು "ಮುರಹರ! ಕೌರವನು ಸಿರಿ ವಂತ. ಈ ಯಾದವ ಸೈನ್ಯವನ್ನು ಕಾಪಾಡಲು ಸಮರ್ಥ. ರಾಜ್ಯಶ್ರೀ ಇಲ್ಲದ ಅಡವಿಯ ತಿರಿಕರಾದ ನಮಗೆ ಇಷ್ಟು ಸೇನೆಯನ್ನೂ ರಕ್ಷಿಸಲು ಸಾಧ್ಯವೇ? ನಾವು ಬಡವರು ; ನೀನು ದಿಟವಾಗಿಯೂ ಬಡವರಿಗೆ ಬೆಂಬಲನೆಂದು ಕೇಳಿರುತ್ತೇನೆ, ನಮಗೆ ನೀನೊಬ್ಬನೆ ಸಾಕು" ಎಂದನು.

ಬಳಿಕ ದುರ್ಯೋಧನನು "ಮರೆಯ ಮಾತುಗಳು ಏತಕ್ಕೆ? ಪಾಂಡ ವರಿಗಾಗಿ ನೀವು ಬಹಳ ಮರುಗುತ್ತೀರಿ ; ಸುಖವಾಗಿ ಪಾಂಡವರನ್ನೇ

ಉದ್ಧರಿಸಿ. ನನಗೆ ಯಾದವ ಸೈನ್ಯವನ್ನೇ ಕೃಪೆಮಾಡಿ. ನೀವು ಇದನ್ನು ಬದಲಾಯಿಸಬಾರದು. ನಾನೂ ಇದನ್ನೇ ಬೇಡಿಕೊಳ್ಳುತ್ತೇನೆ" ಎಂದು ಕೃಷ್ಣನಿಗೆ ಹೇಳಿದನು.

ಅದಕ್ಕೆ ಕೃಷ್ಣನು "ಕೌರವ! ಹಸುಳೆತನ ಮೊದಲುಮಾಡಿ ಇಲ್ಲಿಯ ವರೆಗೂ ಅನೇಕ ರಾಕ್ಷಸರೊಡನೆ ಹೊಡೆದಾಡಿ ಅವರನ್ನು ಕೊಂದಿರುತ್ತೇನೆ. ಈಗ ಆ ಯೌವನದ ಪರಾಕ್ರಮವೂ ಇಲ್ಲ. ನನ್ನ ಚಕ್ರವೂ ಮೊಂಡಾಗಿದೆ. ನಾನು ಉಂಡಾಡಿಭಟ್ಟನಾಗಿದ್ದೇನೆ" ಎಂದನು.

ದುರ್ಯೋಧನನು ಶ್ರೀಕೃಷ್ಣನನ್ನು ಬೀಳ್ಕೊಂಡು ಯಾದವಬಲ ದೊಡನೆ ಹಸ್ತಿನಾನಗರಿಗೆ ತೆರಳಿದನು. ಬಳಿಕ ಕೃಷ್ಣನು ನಸುನಕ್ಕು "ಮರುಳು ಧನಂಜಯನೇ, ಕತ್ತಿಯನ್ನು ಬಿಟ್ಟು ಒರೆಯನ್ನು ತೆಗೆದುಕೊಳ್ಳುವ ದಡ್ಡನಂತೆ, ಯುದ್ಧಮಾಡದ ಕೆಲಸಕ್ಕೆ ಬಾರದ ನನ್ನನ್ನು ಬಯಸಿದೆಯಲ್ಲ! ಇದನ್ನು ಕೇಳಿದರೆ ನಿನ್ನ ಸಹೋದರರು ನಿನ್ನನ್ನು ಮರುಳನೆನ್ನದೆ ಬಿಡು ವರೇ?" ಎನಲು, ಅರ್ಜುನನು ಗಹಗಹಿಸಿ ನಕ್ಕು "ದೇವ! ನಿಮ್ಮ ಮನಸ್ಸನ್ನು ಯಾರಲ್ಲಿ ಮುಚ್ಚಿಡುತ್ತಿದ್ದೀರಿ? ನಿಮ್ಮ ಶಿಷ್ಯನಲ್ಲೇ ಈ ಇಂದ್ರ ಜಾಲ? ನಿಮ್ಮ ಗರುಡಿಯಲ್ಲಿ ನನಗೂ ಶ್ರಮವುಂಟು. ಅದಿರಲಿ; ನನ್ನ ಸಹೋದರರು ನಿಮ್ಮ ಮಹಿಮೆಯನ್ನು ಅರಿಯರೇ?" ಎಂದನು.

ಅದಕ್ಕೆ ಕೃಷ್ಣನು "ನಾನು ಬರಿಗೈಯವನು. ನನಗೆ ನಿಮ್ಮಲ್ಲಿ ಕೆಲಸವೇನು? ಬೀಡಾರದಲ್ಲಿ ಊಟಮಾಡಿ ಸುಮ್ಮನೆ ಕುಳಿತುಕೊಂಡು ನಿಮ್ಮ ಹಂಗಿಗನಾಗಲಾರೆ. ನನ್ನನ್ನು ನೀವು ದೇವರೆಂದೇ ತಿಳಿದಿರು ತ್ತೀರಿ. ಎನ್ನಲ್ಲಿ ದೇವತನವಿಲ್ಲವೆಂಬುದನ್ನು ನಾನು ಬಲ್ಲೆ. ಬಂದು ಮಾಡುವುದೇನು? ಹೇಳು" ಎಂದನು.

ಇದನ್ನು ಕೇಳಿ ಅರ್ಜುನನು "ನೀವು ಕೇವಲ ದೇವರಲ್ಲ. ದೇವರ ದೇವರೊಡೆಯರು; ನಿಮ್ಮನ್ನು ಹೊಗಳಲು ವೇದಗಳಿಗೂ ಸಾಧ್ಯವಿಲ್ಲ. ಆ ಮಾತಿರಲಿ. ನಾವು ನಿಮ್ಮ ಭಕ್ತರು, ನೀವು ಭಕ್ತರ ಭೃತ್ಯರು; ಸಾರಥಿಯಾಗಿ ನಮ್ಮನ್ನು ಕಾಪಾಡಬೇಕು" ಎಂದು ಕೃಷ್ಣನಿಗೆ ನಮಸ್ಕರಿ ಸಿದನು. ಆಗ ಕೃಷ್ಣನು ಅರ್ಜುನನನ್ನೆತ್ತಿ ಸಾರಥಿತನವನ್ನು ಕೈಗೊಂಡೆ ನೆಂದು ತಿಳಿಸಿ ಆತನೊಡನೆ ಹೊರಟನು.

೨ನೆಯ ಸಂಧಿ

ಧರ್ಮರಾಜನು ಅರ್ಜುನನನ್ನು ದ್ವಾರಕಿಗೆ ಕಳುಹಿಸಿದಮೇಲೆ "ಅರ್ಜುನ ದುರ್ಯೋಧನರಲ್ಲಿ ಕೃಷ್ಣನು ಯಾರಿಗೆ ಒಳಗಾಗುತ್ತಾ ನೆಯೋ" ಎಂದು ಯೋಚಿಸುತ್ತಿರಲು ಅವನ ಬಲಗಣ್ಣು ಅದಿರಿತು. ಎದುರಿನಲ್ಲಿ ಮಾರ್ಗಾಯಾಸದಿಂದ ಬಳಲಿದ ಒಬ್ಬನು ಬಂದು "ರಾಜನೇ! ಏಳು; ಪರದೈವನಾದ ಕೃಷ್ಣನು ಬಿಜಯಂಗೈಯ್ಯುತ್ತಿದ್ದಾನೆ; ತಳಿರು

ತೋರಣಗಳನ್ನು ಕಟ್ಟಿಸು; ಇನ್ನು ನಿನಗೆ ಸುರನರೋರಗರಲ್ಲಿ ಯಾರು ತಾನೆ ಸಮಾನರು? ಇನ್ನು ನೀನು ಶತ್ರುಗಳನ್ನು ಸದೆದಂತೆಯೇ. ಕೃಷ್ಣನು ನಿನ್ನ ಸಹೋದರನ ಸಾರಥಿಯಾಗಲು ಒಪ್ಪಿರುತ್ತಾನೆ. ರಾಜ್ಯವು ಇನ್ನು ನಿನ್ನದೇ. ಇದಕ್ಕಾಗಿ ಚಿಂತಿಸಬೇಡ" ಎಂದು ತಿಳಿಸಲು, ಶಿಥಿಲಸಂಶಯ ನಾದ ಧರ್ಮರಾಜನು ಆತನನ್ನು ಬಹುಮಾನಿಸಿದನು. ಬಳಿಕ ಕೃಷ್ಣ ನನ್ನು ಎದುರುಗೊಂಡು ಕರೆತರಲು ಧರ್ಮರಾಜನು ಸಕಲದಳದೊಡನೆ ಹೋಗಿ ಆತನ ಚರಣಗಳಿಗೆ ಅಡ್ಡಬಿದ್ದು "ದೇವ! ಮುನಿಗಳಿಗೂ ಗೋಚರಿ ಸಲು ಸಮಯವಿಲ್ಲದ ಪರಾತ್ಪರನಾದ ನೀನು ನಮಗೆ ಒಲಿದು ಬಿಜಯ ಮಾಡಿರುತ್ತೀಯೆ" ಎಂದು ಹೇಳಲು, ಕೃಷ್ಣನು ನಕ್ಕು ಅವನನ್ನೆತ್ತಿ "ಧರ್ಮರಾಜ! ನಾನು ಅರ್ಜುನನ ಸಾರಥಿಯಲ್ಲದೆ ಎಲ್ಲಿಯು ವಸ್ತು ಹೇಳು" ಎಂದನು. ಆಗ ಧರ್ಮರಾಜನು "ಎಲ್ಲರೆದುರಿನಲ್ಲೂ ನಮ್ಮನ್ನು ನಾಚಿಸಬೇಡ" ಎಂದು ಹೇಳಿ ಕೃಷ್ಣನನ್ನು ಅರಮನೆಗೆ ಕರೆತಂದನು.

ಇತ್ತ ಧರ್ಮರಾಜನ ಓಲೆಯಂತೆ ಶಲ್ಯನು ಸಹಾಯಮಾಡಲು ಸೈನ್ಯದೊಡನೆ ಹೊರಟನು. ಇವನು ಬರುತ್ತಿರುವುದನ್ನು ಕೌರವನು ತಿಳಿದು ಪರಾಕ್ರಮಿಯಾದ ಈತನನ್ನು ತನ್ನ ಪಕ್ಷಕ್ಕೆ ತಿರುಗಿಸಿದರೆ ಯುದ್ಧ ದಲ್ಲಿ ತಾನು ಗೆಲ್ಲುವುದು ಖಂಡಿತವೆಂದು ಮನಸ್ಸಿನಲ್ಲಿ ನಿಶ್ಚೈಸಿ, ಶಲ್ಯನ ಸೈನ್ಯವು ಬೀಡು ಬಿಡುವ ಕಡೆಗಳಲ್ಲೆಲ್ಲಾ ಬೀಡಾರಗಳನ್ನು ಹಾಕಿಸಿ, ಊಟ ಉಪಚಾರಗಳಿಗೆ ಅಳವಡಿಸಿದ್ದುದನ್ನು ಕಂಡು ಶಲ್ಯನು ಸಂತುಷ್ಟನಾದನು. ಬಳಿಕ ಶಲ್ಯನು "ನಮ್ಮ ಸೈನ್ಯವನ್ನೆಲ್ಲ ಸಂತೈಸಿದವನು ಕೌರವನೋ? ಧರ್ಮರಾಜನೋ? ಯಾರೇ ಆಗಲಿ ನಾನು ಮೆಚ್ಚಿರುತ್ತೇನೆ; ಸಂತೈಸಿ ದವನು ಎದುರಿಗೇ ಬರಲಿ; ನನ್ನ ಶರೀರವನ್ನೇ ಆತನಿಗೆ ಸಮರ್ಪಿಸು ತ್ತೇನೆ" ಎಂದು ಡಂಗುರ ಹೊಡಿಸಿದನು. ಇದನ್ನು ಕೇಳಿ ಕೌರವನು ಅವ ನಲ್ಲಿಗೆ ಬರಲು ಆತನನ್ನು ಎದುರುಗೊಂಡು ಸಂತೋಷದಿಂದ ಆಲಿಂಗಿಸಿ, ಕುಶಲಪ್ರಶ್ನೆ ಮಾಡಿದನು. "ಬಳಿಕ, ದುರ್ಯೋಧನ! ಈ ಬೀಡಾರಗಳನ್ನು ರಚಿಸಿದವನು ನೀನೇ ಅಲ್ಲವೆ? ನಾನು ನಿನಗೆ ಹಂಗಿಗ. ನಿನಗೆ ಇಷ್ಟ ವಾದುದನ್ನು ಕೇಳು" ಎಂದು ಶಲ್ಯನು ಹೇಳಲು, ದುರ್ಯೋಧನನು "ಮಾವ! ಬಿನ್ನಹ. ನೀವು ಕುಂತೀತನಯರನ್ನು ಬಿಡಿ. ನನಗೆ ಬೆಂಬಲ ವಾಗಿ ಹಸ್ತಿನಾಪುರಕ್ಕೆ ಮರಳಿ" ಎಂದನು. ಇದನ್ನು ಕೇಳಿ ಶಲ್ಯನ ಮನಸ್ಸು ಅಳುಕಿತು. ಆದರೂ ಅವನು "ದುರ್ಯೋಧನ! ಧರ್ಮ ರಾಜನು ಸೋದರಳಿಯ. ನೀನೂ ನಮ್ಮವನೇ. ನನಗೆ ನೀವಿಬ್ಬರೂ ಸಮಾನ. ನಿನ್ನ ಮನಸ್ಸಿನಂತೆ ನಿನ್ನಲ್ಲಿಗೇ ಬರುತ್ತೇನೆ. ಸಂಸಾರವೆಂಬ ಮರಕ್ಕೆ ಬಂಧುದರ್ಶನವು ಫಲವಲ್ಲವೇ? ಪಾಂಡವರೈವರನ್ನೂ ನೋಡಿ ಬಹುದಿನಗಳಾದವು. ಅವರನ್ನು ಈಗ ಹೋಗಿ ನೋಡಿ ನಾನು ಹಿಂತಿರುಗಿ ಬರುತ್ತೇನೆ. ಸೇನೆಯೊಡನೆ ನೀನು ವಾರಣಾವತಿಗೆ ಹೋಗು" ಎಂದು

ಹೇಳಿ, ತಾನು ಉಪಪ್ಲಾವ್ಯ ನಗರಿಗೆ ಬಂದನು. ಶಲ್ಯನನ್ನು ಕಂಡೊಡನೆಯೇ ಪಾಂಡವರು ಆತನಿಗೆ ಕಾಣಿಕೆಯಿತ್ತು ಆಲಿಂಗಿಸಿ ಹರ್ಷಿಸಿದರು. ಕುಶಲ ಪ್ರಶ್ನೆಯಾದಮೇಲೆ ಶಲ್ಯನು ದುಃಖಿಸಿ, ತಾನು ದುರ್ಯೋಧನನಿಗೆ ವಶವಾದ ರೀತಿಯನ್ನೆಲ್ಲ ಅವರಿಗೆ ವಿವರಿಸಿದನು.

"ಮಕ್ಕಳಿರಾ! ರಾಜ್ಯಶ್ರೀಯು ನಿಮ್ಮದೇ ಆಗುತ್ತದೆ. ನೀವು ಸತ್ಯಕ್ಕಾಗಿ ಹದಿಮೂರು ವರ್ಷಗಳು ನವೆದಿರುತ್ತೀರಿ. ಮುಂದೆ ನಿಮಗೆ ಅನುಕೂಲ್ಯವುಂಟು. ಇಂದ್ರನು ವೃತ್ರಾಸುರನನ್ನು ಕೊಂದ ಕಾರಣ ರಾಜ್ಯಸಂಪತ್ತನ್ನು ಕಳೆದುಕೊಂಡು ದುಃಖಿತನಾದ. ಕೊನೆಗೆ ಶಚಿಯು ದೆಸೆಯಿಂದಲೂ, ಋಷಿಗಳ ಮಹಿಮೆಯಿಂದಲೂ ನಹುಷನನ್ನು ಇಂದ್ರ ಪದವಿಯಿಂದ ಕೆಳಕ್ಕೆ ನೂಕಿ ಪುನಃ ರಾಜ್ಯಲಕ್ಷ್ಮಿಯನ್ನು ಪಡೆಯಲಿಲ್ಲವೇ? ಅಂತೆಯೇ ನೀವೂ ಈಗ ರಾಜ್ಯವನ್ನು ಮತ್ತೆ ಪಡೆಯುವಿರಿ" ಎಂದನು.

ಇದನ್ನು ಕೇಳಿ ಧರ್ಮರಾಜನು "ಮಾವ! ನೀವು ಕರ್ಣನಿಗೆ ಸಾರಥಿಯಾದರೆ ಯುದ್ಧ ಭೂಮಿಯಲ್ಲಿ ಅವನನ್ನು ನಿಂದಿಸಿ ತೇಜೋವಧೆ ಮಾಡಿ, ನಾವು ಗೆಲ್ಲುವಂತೆ ಪ್ರಯತ್ನಿಸಬೇಕು" ಎಂದು ಕೇಳಿಕೊಂಡು ಶಲ್ಯನನ್ನು ಸತ್ಕರಿಸಿ ಕಳುಹಿಸಿಕೊಟ್ಟನು. ಶಲ್ಯನು ಹಸ್ತಿನಾವತಿಗೆ ತೆರಳಿದನು.

ಎರಡು ಕಡೆಗೂ ಬರುವ ದೊರೆಗಳ ಗುಂಪನ್ನು ನೋಡಿದವರ ಕಣ್ಣು ಜೊಂಪಿಸುತ್ತಿತ್ತು. ಕಾದುವವನ ಮನಸ್ಸು ಒಡೆದು ಮೂರು ಕವಲಾಗುತ್ತಿತ್ತು. ರಾಜರ ಕತ್ತಿಗಳ ಕಾಂತಿ ಆಕಾಶದಲ್ಲಿ ಝಗಝಗಿಸುತ್ತಿತ್ತು. ದಿಗಂತಗಳನ್ನು ದಾಟಿ ಸೇನೆಯು ಪ್ರಸರಿಸಿರುವಂತೆ ಕಾಣುತ್ತಿತ್ತು. ಈವಿಧವಾದ ನೂತನಸೃಷ್ಟಿ ಆ ಹಳೆ ಬ್ರಹ್ಮನಿಗೆ ಸಾಧ್ಯವೇ! ಎನ್ನುವಂತಿತ್ತು. "ಸೇನೆಯ ಭಾರಕ್ಕೆ ಆದಿಕೂರ್ಮನು ಕುಸಿಯನೇ? ಆದಿಶೇಷನು ನಾಶವಾಗದಿರುವನೇ? ದಿಗ್ಗಜಗಳು ಜೀವಂತವಾಗಿರುವುವೇ?" ಎಂದು ಸಂಶಯವನ್ನುಂಟುಮಾಡುವಂತೆ ಸೇನೆಯು ಬರುತ್ತಿತ್ತು. ಚೋಳ, ಪಾಂಡ್ಯ, ಕೇರಳ, ಶಿಶುಪಾಲನಂದನನಾದ ಧೃಷ್ಟಕೇತು, ವರಾಳ, ಮಾಗಧ, ಚೀನ, ಭೋಟಕ, ಬರ್ಬರ ಮೊದಲಾದ ದೇಶದ ರಾಜರು ತಮ್ಮ ತಮ್ಮ ಬಲದೊಡನೆ ಭೀಮನನ್ನು ಬಂದು ಕಂಡರು. ಭಗದತ್ತನೇ ಮೊದಲಾದ ರಾಜರು ಕೌರವರ ಕಡೆಗೆ ಬಂದು ಸೇರಿದರು.

ಬುದ್ಧಿವಂತನಾದ ದ್ರುಪದರಾಜಪುರೋಹಿತನು ಹಸ್ತಿನಾಪಟ್ಟಣಕ್ಕೆ ಹೋಗಿ ಕೌರವನನ್ನು ಕಂಡು ಅವನೊಡನೆ ರಾಜಕಾರ್ಯವನ್ನು ಮಾತಾಡಿದನು. ದ್ರೋಣಕೃಪಭೀಷ್ಮರುಗಳ ಮಾತನ್ನೂ ಲೆಕ್ಕಿಸದೆ ದುರ್ಯೋಧನನು ಚಪಳಕರ್ಣನೊಡನೆ ಯೋಚಿಸಿ ಪಾಂಡವರೊಡನೆ ಯುದ್ಧಮಾಡಲು ನಿಶ್ಚೈಸಿದನು. ಹರ್ಷದಿಂದ ಆತನು ಕೂಡಲೆ ಸಂಜಯನನ್ನು ಕರೆಸಿ "ಸಂಜಯ! ನೀನು ಶತ್ರುಪಾಳಯಕ್ಕೆ ಹೋಗು. ಅಲ್ಲಿ ಪಾಂಡವರನ್ನು ಕುರಿತು, ನೀವು ರಾಜ್ಯವನ್ನು ಬೇಡಿಸಿ ಕಳುಹಿಸಿರು

ತ್ತೀರಿ. ಅದನ್ನು ಯುದ್ಧದಲ್ಲಿ ಅಸಿಧಾರೆಯಲ್ಲಿ ಕೊಡುತ್ತೇವೆ. ಸುಮ್ಮನೆ ಕೊಟ್ಟರೆ ಅದು ಕ್ಷತ್ರಿಯರಿಗೆ ಅಧರ್ಮವು. ಎಂಬುದನ್ನು ಅವರಿಗೆ ತಿಳಿಸಿ ಬಾ" ಎಂದು ಹೇಳಿಕಳುಹಿಸಿದನು.

ಮಂತ್ರಿಯಾದ ಸಂಜಯನು ಪಾಂಡವರ ಪಾಳಯಕ್ಕೆ ಪ್ರಯಾಣ ಮಾಡಿದನು. ಧರ್ಮರಾಜನು ಸಂಜಯನು ಬಂದಿರುವುದನ್ನು ಕೇಳಿ ಒಡ್ಡೋಲಗವನ್ನು ರಚಿಸಿದನು.

ಧರ್ಮರಾಜನ ಬಲಗಡೆ ಕೃಷ್ಣ ವಿರಾಟ ದ್ರುಪದ ಕೈಕೆಯರೂ, ಎಡಗಡೆ ಭೀಮ ಅರ್ಜುನ ನಕುಲ ಸಹದೇವರೂ, ಮಂತ್ರಿಗಳೂ, ಹಿಂದೆ ರಾಜಸ್ತ್ರೀಯರೂ, ಪರಿವಾರದವರೂ, ಮುಂದೆ ಕರಣಿಕರೂ, ವೈದ್ಯರೂ ಕವಿಗಳೂ ತಾರ್ಕಿಕರೂ, ಭರತಶಾಸ್ತ್ರನಿಪುಣರೂ, ಪಾಠಕರೂ, ವಾದಿಗಳೂ, ಕರಿತುರಗಶಿಕ್ಷಕರೂ, ಉಪಹಾಸಕರೂ, ವೈತಾಳಿಕರೂ, ಚಿತ್ರಕಾರರೂ, ಮಲ್ಲರೂ, ಮಾವತರೂ, ರಾವುತರೂ, ಶಿಲ್ಪಿಗಳೂ, ಮಾಯಾವಿಗಳೂ, ಮೂಕರೂ, ವಾಮನರೂ ಮೃಗಜೀವಿಗಳೂ, ಶಕುನಜ್ಞರೇ ಮೊದಲಾದವರೂ, ಸಾಮಂತರಾಜರೂ ಸಾಲುಸಾಲಾಗಿ ಕುಳಿತಿದ್ದರು.

ಧರ್ಮರಾಜನ ಈ ಓಲಗವು ಇಂದ್ರನ ಸಭೆಗೆ ಮಿಗಿಲಾಗಿದ್ದಿತು. ಕಂಚುಕಿಗಳು ಎಚ್ಚರಿಸಲು ಸಭೆಯು ನಿಶ್ಶಬ್ದವಾಯಿತು. ಬಳಿಕ ಕೃಷ್ಣನು ಸಭೆಗೆ ಸಂಜಯನನ್ನು ಕರೆಸಿದನು. ಸಂಜಯನು ಬಂದು ರಾಜನಿಗೆ ಕಾಣಿಕೆ ಇತ್ತು ಹರ್ಷದಿಂದ ಆತನಿಗೆ ನಮಸ್ಕರಿಸಿ, ಅಕ್ಕಪಕ್ಕದಲ್ಲಿದ್ದ ರಾಜರನ್ನೂ, ಆಯುಧಧಾರಿಗಳಾದ ಯುದ್ಧಪ್ರಚಂಡರನ್ನೂ ಕಂಡು ಹೆದರಿ ಬೆರಗಾದನು. "ರಾಜ್ಯ ಹೋಗಿ ಪಾಂಡವರು ಹನ್ನೆರಡು ವರ್ಷಗಳ ಕಾಲ ಕಾಡಿನಲ್ಲಿ ಕಷ್ಟಪಟ್ಟರು. ಎಷ್ಟು ಕ್ಷಿಪ್ರಕಾಲದಲ್ಲಿ ಭೂಮಂಡಲದ ರಾಜರೆಲ್ಲ ಇಲ್ಲಿ ನೆರೆದಿರುತ್ತಾರೆ!" ಎಂದು ಆಶ್ಚರ್ಯಚಕಿತನಾಗಿ, ಸಂಜಯನು "ಕೃಷ್ಣನಿಗೆ ದೊರೆಯದಿರುವುದು ಏನುಂಟು? ಮುರರಿಪು ಕೋಪಿಸಿದರೆ ಯಾರನ್ನು ತಾನೆ ಮುರಿಯಲಾರ?" ಎಂದು ಮನಸ್ಸಿನಲ್ಲೇ ಯೋಚಿಸಿ, ಕೌರವನು ಕಳುಹಿಸಿದ್ದ ಉಡುಗೊರೆಗಳನ್ನು ಆತನು ಕೊಡಲು ಧರ್ಮರಾಜನು ಅವನ್ನು ಸ್ವೀಕರಿಸಿದನು. ಬಳಿಕ ಧರ್ಮರಾಜನು, "ದೊಡ್ಡಪ್ಪನು ಮಕ್ಕಳನ್ನು ಮರೆಯಲಾರ; ಆತನಿಗೆ ನಮ್ಮಲ್ಲಿ ಪ್ರೀತಿಯಿಲ್ಲವೇ? ಎಂದು ಹೇಳಿ, ಸಂಜಯ! ಧೃತರಾಷ್ಟ್ರ, ಗಾಂಧಾರೀದೇವಿ, ಭೀಷ್ಮ, ದ್ರೋಣ, ಕೃಪ ಇವರೆಲ್ಲರೂ ಕುಶಲರೇ? ಗುರುಸುತನು ಕ್ಷೇಮಿಯೇ? ಕುರುಪತಿಯು ಹೇಗಿದ್ದಾನೆ? ಆತನ ಸಹೋದರರು, ಮಕ್ಕಳು, ಭಾನುಮತಿ ಉಳಿದ ಅರಸಿಯರು ಕರ್ಣ ಮೊದಲಾದವರು ಹೇಗಿದ್ದಾರೆ?" ಎಂದು ಪ್ರಶ್ನಿಸಿದನು. ಅದಕ್ಕೆ ಸಂಜಯನು, "ಜೀಯ! ಎಲ್ಲರೂ ಸುಖಿಗಳು. ಕೌರವ ಭೀಷ್ಮ ದ್ರೋಣ ಗೌತಮರು, ನಿಮ್ಮ ಬಾಂಧವ ಪರಿಜನರೇ ಆದಿಯಾಗಿ ಎಲ್ಲರ ಕುಶಲವನ್ನೂ ವಿಚಾರಿಸುವಂತೆ ತಿಳಿಸಿ ನನ್ನನ್ನು ಕಳುಹಿಸಿರು

ತ್ತಾರೆ" ಎಂದನು. ಇದನ್ನು ಕೇಳಿ ಧರ್ಮರಾಜನು ನಗುತ್ತ "ಭೀಷ್ಮ ದ್ರೋಣ ಗೌತಮರ ಕಾರುಣ್ಯಾತಿಶಯದಿಂದ ಮೊದಲು ನಾವು ಬಲಯುತ ರಾಗಿದ್ದೇವೆ, ಮತ್ತು ಧರ್ಮವನ್ನೂ ಆಚರಿಸಿದ್ದೇವೆ. ಇನ್ನು ಧೃತರಾಷ್ಟ್ರನು ತನ್ನ ಮಕ್ಕಳ ಬಾಂಧವ್ಯವನ್ನು ಚೆನ್ನಾಗಿ ಕಾಯುತ್ತಾನೆ" ಎಂದು ಹೇಳಿ ದನು.

ಬಳಿಕ ಕೃಷ್ಣನು "ಸಂಜಯ! ನೀನು ಬಂದ ಕಾರ್ಯವೇನು? ಕೌರವರು ಏನೆಂದರು? ಕೌರವೇಶ್ವರನು ಏನನ್ನು ಹೇಳಿಕಳುಹಿಸಿದ್ದಾನೆ? ಅವರ ಮಾತುಗಳು ವಿನಯದಿಂದ ಕೂಡಿದ್ದರೂ ಇರಲಿ, ಶೌರ್ಯಯುತ ವಾಗಿದ್ದರೂ ಆಗಲಿ, ಸ್ವಲ್ಪವೂ ಬಿಡದೆ ಹೇಳು" ಎಂದು ಕೇಳಿದನು. ಆಗ ಸಂಜಯನು "ಪಾಂಡವರಿಗೆ ರಾಜ್ಯಾಭಿಲಾಷೆ ಇದ್ದರೆ ನಮ್ಮೊಡನೆ ಯುದ್ಧ ಮಾಡಲಿ; ಸಂಧಿಗೆ ಮನಸ್ಸು ಮಾಡದಿರಲಿ. ಸಂಧಿಯು ವೀರಕ್ಷತ್ರಿಯರಿಗೆ ಮತವೇ? ಯಾಚಿಸುವವರು ದೊರೆಗಳೇ? ಅದನ್ನು ನಾವು ಹೇಳಬಾರದು. ಪಾಂಡವರು ತಮ್ಮ ಜನನವನ್ನು ನೋಡಿ ಮಾತಾಡಲಿ. ಅವರು ಪಾಂಡು ವಿನ ಸುತರಲ್ಲ. ಮೊದಲು ಬ್ರಹ್ಮಚರ್ಯಾಶ್ರಮ; ಮದುವೆಯಾದಮೇಲೆ ಗೃಹಸ್ಥಾಶ್ರಮ; ಬಳಿಕ ಕಾಡಿನಲ್ಲಿ ವಾನಪ್ರಸ್ಥಾಶ್ರಮ; ಕೊನೆಗೆ ಸನ್ಯಾ ಸಾಶ್ರಮವನ್ನು ಸ್ವೀಕರಿಸಿದ ಧರ್ಮರಾಜನು, ಈಗ ರಾಜ್ಯಕ್ಕಾಗಿ ಅಭಿ ಲಾಷೆಪಡುವುದು ಅನುಚಿತ. ಯೌವನಮದದಿಂದಿರುವ ಭೀಮಾರ್ಜುನ ರಲ್ಲಿ ನಮ್ಮ ಮೇಲೆ ವೈರವನ್ನು ಬಿತ್ತಿ ಬೆಳೆಸುವ ಕೃಷ್ಣ ನಮಗೆ ಶತ್ರು; ಉಳಿದ ದ್ರುಪದ ವಿರಾಟರಾದಿಯಾದ ರಾಜರು ಹುಳುಗಳಂತೆ ನಶಿಸಿ ಹೋಗುವವರು. ನಾನು ಮಾತ್ರ ಕೊನೆಗೆ ಕೆಡದಿರುವವನು." ಎಂದು ದುರ್ಯೋಧನನು ಹೇಳಿ ಕಳುಹಿಸಿದಂತೆ ತಿಳಿಸಿದನು.

ಇದನ್ನು ಕೇಳಿ ಭೀಮನು "ಸಾಕು; ಆ ಕೌರವನಾಯಿಯ ಮಾತನ್ನು ಏಕೆ ಕೇಳುತ್ತೀರಿ. ದೂತನನ್ನು ತಳ್ಳಿ ತಳ್ಳಿ, ತಡವೇಕೆ? ಆ ಕೇಡಿಗ ದುರ್ಯೋಧನನ್ನು ಕೊಂದು ಶಾಕಿನಿಯರಿಗೆ ಆತನ ರಕ್ತದಿಂದ ಓಕುಳಿಯಾಡಿಸುತ್ತೇನೆ". ಎಂದು ಘುಡುಘುಡುಸಿ ಕಿಡಿಕಿಡಿಯಾದ.

"ಧರ್ಮದ ದೆಸೆಯಿಂದ ಹಿಂದೆ ನಮಗೆ ಜೂಜಿನಿಂದಾದ ತೊಂದ ರೆಯೇ ಸಾಕು. ನಮಗೆ ಅಪ್ಪಣೆಕೊಟ್ಟು ಕಳುಹಿಸಿ. ಕೌರವಕುಲವನ್ನೇ ದಿಕ್ಕುದಿಕ್ಕಿನ ದೇವತೆಗಳಿಗೆ ಉಪಹಾರಕೊಡುತ್ತೇವೆ." ಎಂದು ಅಭಿಮನ್ಯು ಸಾತ್ಯಕಿ ಘಟೋತ್ಕಚರು ಗರ್ಜಿಸಿದರು.

"ಹಗೆಗಳನ್ನು ಹಲ್ಲುಗಳು ಉದುರುವಂತೆ ಹೊಡೆಯುತ್ತೇವೆ. ಕಿಬ್ಬೊಟ್ಟೆಯನ್ನು ಸೀಳಿ, ಶತ್ರುಗಳ ಕರುಳನ್ನು ಎಳೆದು ಚರ್ಮವನ್ನು ಸುಲಿಯುತ್ತೇವೆ. ಅಪ್ಪಣೆ ಕೊಡು" ಎಂದು ಅತಿರಥರೇ ಮೊದಲಾದ ರಾಜರು ತಾವು ತಾವೇ ಎದ್ದುನಿಂತು ಘೋಷಿಸಿದರು. ಈ ಧ್ವನಿಯಿಂದ ಆಸ್ಥಾನವು ಅಲ್ಲಾಡಿತು. ಇದನ್ನು ಕೇಳಿದ ಧರ್ಮರಾಜನು ಆತನಿಂದ

ನಮಗೆ ಒಳ್ಳೆಯದು ಏನಾಗುತ್ತದೆ? ಕೆಟ್ಟದ್ದು ತಾನೆ ಏನಾಗುತ್ತದೆ? ಹಿಂದೆ ನಾವು ಅನುಭವಿಸಿದ ವನವಾಸವು ಆತನಿಂದಲೇ ಬರಲಿ, ಯಾತನೆಯನ್ನು ಅನುಭವಿಸಿಯೇ ಸ್ಥೈರಣೆಯಿಂದಿರುವ ನಮಗೆ ಆತನು ನುಡಿದ ಮಾತ್ರಕ್ಕೆ ಹಾನಿಯೇ ? ತವಕಪಡಬೇಡಿ ; ಸೈರಿಸಿ" ಎಂದು ಅವರನ್ನು ಸಮಾಧಾನ ಪಡಿಸಿದನು.

ಆ ದಿವಸ ಸಂಜಯನನ್ನು ಬಿಡಾರಕ್ಕೆ ಕಳುಹಿಸಿ ಮಾರನೆಯ ದಿನ ಆತನನ್ನು ಕೃಷ್ಣಪಾರ್ಥರು ಸಭೆಗೆ ಕರೆಸಿದರು. ಓಲಗಕ್ಕೆ ಬಂದ ಸಂಜಯನನ್ನು ಧರ್ಮರಾಜನು "ಸಂಜಯ ! ದೊಡ್ಡಪ್ಪ, ಗಾಂಧಾರಿ, ದುರ್ಯೋಧನ, ಆತನ ಸಹೋದರರು, ರಾಣಿಯರು, ದುಶ್ಶಳೆ, ಸೈಂಧವ, ಕರ್ಣ, ಶಕುನಿ, ಬಾಹ್ಲಿಕ, ಶಲ್ಯ, ಭಗದತ್ತ, ಭೀಷ್ಮ, ದ್ರೋಣ, ಕೃಪ, ಅಶ್ವತ್ಥಾಮ ಇವರನ್ನು ಮನ್ನಿಸಿದೆವೆಂದೂ, ಪುರೋಹಿತರು, ಸಾವಂತರು, ವೈದ್ಯರು, ವಿದುರ, ಅರಮನೆಯ ವಿಶ್ವಾಸಿಗಳು, ಆಸ್ಥಾನಗಣಿಕೆಯರು, ಗಜವಾಜಿಶಾಲಾಧ್ಯಕ್ಷರು, ಬಾಹತ್ತರ ನಿಯೋಗದವರು, ಪ್ರತಿಹಾರರು, ಪೌರರು ಇವರೆಲ್ಲರ ಕುಶಲವನ್ನು ಕೇಳಿದೆವೆಂದೂ ಹೇಳು"; ಎಂದು ತಿಳಿಸಿ ಸವಿಮಾತುಗಳಿಂದಲೂ, ಕನಕಾಭರಣ, ಭೋಜನ, ಉಡುಗೊರೆ ಗಳಿಂದಲೂ, ಆತನನ್ನು ಸತ್ಕರಿಸಿ ಬೀಳ್ಕೊಟ್ಟನು.

ಸಂಜಯನು "ಪನ್ನಗಶಾಯಿಯಾದ ಕೃಷ್ಣನು ಬೆಂಗಾವಲಾಗಿರಲು, ಪಾಂಡವರಿಗೆ ಇನ್ನು ಮಂಗಳವು ಖಂಡಿತ" ಎಂದು ಹೇಳುತ್ತ ಹಸ್ತಿ ನಾವತಿಗೆ ಹಿಂತಿರುಗಿಬಂದು ಧೃತರಾಷ್ಟ್ರನ ಅರಮನೆಗೆ ಹೋಗಿ, ಸಂಗ್ರಹವಾಗಿ ಒಂದೆರಡು ಮಾತಿನಲ್ಲಿ ರಾಜನಿಗೆ ನಡೆದ ಸಮಾಚಾರವನ್ನು ಸೂಚಿಸಿ ತನ್ನ ಮನೆಗೆ ಹೋದನು.

೩ನೆಯ ಸಂಧಿ

ಆ ದಿನ ರಾತ್ರಿ ಧೃತರಾಷ್ಟ್ರನಿಗೆ ನಿದ್ರೆ ಬರಲಿಲ್ಲ. ಆತನು ವಿದುರನನ್ನು ಕರೆಸಿ, ನಿಟ್ಟುಸಿರು ಬಿಟ್ಟು "ವಿದುರ! ನಾಳೆ ಸಂಜಯನು ಸಭೆಯಲ್ಲಿ ಸುದ್ದಿಯನ್ನು ಹೇಳುತ್ತಾನೆ; ಮುಂದಾಗುವುದು ಸಂಧಿಯೋ ? ಯುದ್ಧವೋ ? ತಿಳಿಯಲಾಗದೆ ನನಗೆ ಚಿಂತೆಯಾಗಿದೆ. ಸತ್ಯಾಂಶವನ್ನು ತಿಳಿಸು; ಈ ರಾತ್ರಿ ನನಗೆ ನಿದ್ರೆ ಬರುವುದಿಲ್ಲ" ಎಂದು ಕೇಳಿದನು. ಅದಕ್ಕೆ ವಿದುರನು "ಬಲಿಷ್ಠನೊಡನೆ ವ್ಯವಹರಿಸುವ ದುರ್ಬಲನು, ಅರ್ಥ ಕಾಮ ಚೌರ್ಯ ಈ ಚಿಂತೆಗಳಿಂದ ಮರುಗುವವನು, ದೈವದ ನೆಲೆಯನ್ನು ತಿಳಿಯ ದವನು, ಇವರಿಗೆ ನಿಶ್ಚಯವಾಗಿಯೂ ನಿದ್ರೆ ಬರುವುದಿಲ್ಲ" ಎಂದು ಹೇಳಿ ಧೃತರಾಷ್ಟ್ರನಿಗೆ ನಯನೀತಿ ಧರ್ಮಗಳ ವಿಚಾರವನ್ನು ತಿಳಿಸಿದನು.

"ಧೃತರಾಷ್ಟ್ರನೆ ! ಕೇಳು. ಹಾವು ಹೆಚ್ಚು ಮರಿಗಳನ್ನು ಪಡೆದು ಲೋಕಕ್ಕೆ ಸಾವನ್ನು ತರುವಂತೆ, ನೀನು ಭೂಭಾರರಾದ ನೂರು

ಮಕ್ಕಳನ್ನು ಪಡೆದು ಅವರನ್ನು ಕೆಡಿಸಿರುತ್ತೀಯೆ. ಯೋಚಿಸಿದರೆ, ಸುಗುಣನಾದ ಅರ್ಜುನನಂತಹ ಮಗನೊಬ್ಬನು ಸಾಲದೇ? ನಾಡನಾಯ್ಗಳಾದ ನಿನ್ನ ಮಕ್ಕಳಿಂದ ಏನು ಪ್ರಯೋಜನ ?

ದ್ವೀಪದ್ವೀಪಗಳಲ್ಲಿ ಹುಟ್ಟಿ ಕರ್ಮಾನುಗುಣವಾದ ಫಲಗಳನ್ನು ಅನುಭವಿಸಿ, ನಾನಾರೂಪಗಳಿಂದ ಆರ್ಜಿಸಿದ ಸುಕೃತದ ವಿಚಾರವೇತಕ್ಕೆ ?

ರಾಜನೇ! ಕೇಳು. ಸ್ವರ್ಗಕ್ಕೆ ಸತ್ಯವೇ ಸೋಪಾನ. ಜನ್ಮಸಮುದ್ರಕ್ಕೆ ಸತ್ಯವೇ ನಾವೆ.

ಈ ಭೂಮಂಡಲದಲ್ಲಿ ರಾವಣ ದುರ್ಯೋಧನರಿಬ್ಬರೇ ಮೂರ್ಖರು. ರಾವಣನು ಅಶೋಕವನಭಂಗದಿಂದಲೂ, ದುರ್ಯೋಧನನು ಉತ್ತರಗೋಗ್ರಹಣದ ಪರಾಜಯದಿಂದಲೂ ಶತ್ರುರಾಜರ ಸತ್ವಾತಿಶಯವನ್ನು ತಿಳಿದೂ ಎಚ್ಚರಗೊಳ್ಳದೆ ಮರುಳರಾಗಿದ್ದಾರೆ. ಇದು ನ್ಯಾಯವೇ? ಹೇಳು.

ತನ್ನ ಸುಖದುಃಖಗಳಲ್ಲಿ ಭಾಗಿಗಳಾಗುವ ಬಂಧುಗಳನ್ನು ಬಿಟ್ಟು, ಮೋಸದಿಂದ ಸ್ವಾರ್ಥವನ್ನು ಸಾಧಿಸಿ, ಕಷ್ಟಕಾಲದಲ್ಲಿ ಜಾರುವ ದುಷ್ಟರೊಡನೆ ಕೂಡಿ ಅವರನ್ನು ಬಹುಮಾನಿಸುವುದು ತನ್ನನ್ನು ತಾನೇ ಕೊಂದುಕೊಂಡಂತಲ್ಲವೇ?

ತಂದೆ ಇರಲು ಮಗನಿಗೆ ಸ್ವಾತಂತ್ರ್ಯವಿಲ್ಲ; ಯಜಮಾನನಿರಲು ದಾಸನಿಗೆ ಸ್ವಾತಂತ್ರ್ಯವಿಲ್ಲ; ಗಂಡನಿರಲು ಹೆಂಡತಿಗೆ ಸ್ವಾತಂತ್ರ್ಯವಿಲ್ಲ.

ನಿಂದ್ಯಕಾರ್ಯಗಳನ್ನು ಬಿಟ್ಟು ಲೋಕಕ್ಕೆ ಹಿತವಾದ ಕೆಲಸಗಳನ್ನು ಮಾಡುವವನು ಭೂಲೋಕದಲ್ಲಿ ಉತ್ತಮನು.

ಐಶ್ವರ್ಯ ಸ್ಥಿರವೇ? ಯೌವನ ಸ್ಥಿರವೇ? ಶರೀರಕಾಂತಿ ಸ್ಥಿರವೇ? ದೇಹವು ಸ್ಥಿರವೇ? ನೀನು ರಾಜನಾಗಿರುವವರೆಗೂ ನೀತಿಯಿಂದ ರಾಜ್ಯವನ್ನು ಕಾಪಾಡು. ಬಂಧುಗಳನ್ನು ಆದರಿಸು. ಧರ್ಮದಿಂದಿರು. ಇದೇ ರಾಜರಿಗೆ ನೀತಿ.

ಈಗ ಭೂಮಂಡಲದಲ್ಲಿ ಐಶ್ವರ್ಯ, ಮಕ್ಕಳು, ಒಡಹುಟ್ಟಿದವರು, ಸಪ್ತಾಂಗ, ಸತಿಯರು, ಗುರು, ಪಿತಾಮಹ, ಬಂಧುಗಳು ಮತ್ತು ಮಿತ್ರರುಗಳಲ್ಲಿ ನಿನಗೆ ಕೊರತೆಯಾವುದು? ನೀನು ಕೌಂತೇಯರನ್ನು ಈ ರೀತಿ ಅಸಹಾಯರನ್ನಾಗಿ ಮಾಡುವುದು ನ್ಯಾಯವಲ್ಲ.

ಸನ್ಯಾಸಿಗೆ ದುಷ್ಟಸಹವಾಸ, ರಾಜನಿಗೆ ದುರ್ಮಂತ್ರಿ, ಮಗನಿಗೆ ಲಾಲನೆ, ಕೃಷಿಗೆ ಉಪೇಕ್ಷೆ, ಬುದ್ಧಿಗೆ ಮದ್ಯಪಾನ, ಸದ್ಗತಿಗೆ ದುರ್ವ್ಯಸನ, ಸತಿಗೆ ಸ್ವಾತಂತ್ರ್ಯ ಇವು ಕೆಡಲು ಕಾರಣ.

ಸೂರ್ಯನಾದರೂ ಪಶ್ಚಿಮದಲ್ಲಿ ಉದಿಸಬಹುದು; ಬೆಂಕಿಯಾದರೂ ಶೀತಲವಾಗಬಹುದು. ಮೇರುಪರ್ವತವಾದರೂ ಅಲ್ಲಾಡಬಹುದು. ಪರ್ವತಶಿಖರದಲ್ಲಾದರೂ ಕಮಲವು ಅರಳಬಹುದು. ಸತ್ಪುರುಷರು ಎಂದೂ ಆಡಿದ ಮಾತಿಗೆ ತಪ್ಪುವುದಿಲ್ಲ.

ನಾಯಿಗಳ ಮಾತನ್ನು ಕೇಳಿ ನೀನು ಸುಮ್ಮನೆ ಕೆಡಬೇಡ. ಯುಧಿಷ್ಠಿರನನ್ನು ಕರೆಸು. ಭೀಷ್ಮಾದಿಗಳನ್ನು ಮುಂದಿಟ್ಟುಕೊಂಡು ನ್ಯಾಯವಾಗಿ ಅವನಿಗೆ ಸಲ್ಲಬೇಕಾದ ಅರ್ಧರಾಜ್ಯವನ್ನು ಕೊಟ್ಟು ನೀನು ಮಕ್ಕಳೊಡನೆ ಬದುಕುವುದು ಮಂಗಳಕರವು.

ಶಿವನ ಕೊರಳಿನಲ್ಲಿ ಆಭರಣವಾಗಿದ್ದರೂ ಹಾವಿಗೆ ಹೇಗೆ ಗಾಳಿಯೇ ಆಹಾರವೋ, ಅಂತೆಯೇ ನಿನ್ನ ವಂಶದಲ್ಲಿ ಹುಟ್ಟಿದ್ದರೂ ಪಾಂಡವರು ನಿನ್ನೆದುರಿನಲ್ಲೇ ವನವಾಸಮಾಡಿ ಜೀವಿಸುತ್ತಿರುವುದು ನ್ಯಾಯವೇ? ಹೇಳು.

ಭೂಮಂಡಲದಲ್ಲಿ ಚಕ್ರವರ್ತಿಗಳು ಆರು ಜನ. ಅವರಿಗೆ ಕೃಷ್ಣನ ಚಕ್ರವೇ ಸಹಾಯ. ಈಗ ಶ್ರೀಕೃಷ್ಣನೇ ಬಂದು ಪಾಂಡವರ ಸೇನೆಯಲ್ಲಿರುವಾಗ ಯುಧಿಷ್ಠಿರನಿಗೆ ಸರಿಸಮಾನನು ಯಾರು?

ದಮಯಂತಿ–ನಳಮಹಾರಾಜ, ಸೀತೆ–ರಾಮ, ದ್ರೌಪದಿ–ಯುಧಿಷ್ಠಿರ, ಈ ಆರು ಜನರು ಉತ್ತಮ ಕೀರ್ತಿವಂತರು. ಹೀಗಿರುವಾಗ ನೀವು ಧರ್ಮರಾಜನನ್ನು ಜಯಿಸುವ ವಿಧಾನವಾದರೂ ಯಾವುದು?

ರಾಜನೇ! ಕೇಳು. ಸ್ಕಂದ, ರಾಮ, ಹನುಮಂತ, ಭೀಮಸೇನ, ಗರುಡ ಈ ಐವರನ್ನು ಸ್ಮರಿಸುವುದರಿಂದಲೇ ಕಷ್ಟಗಳು ನಿವಾರಣೆಯಾಗುವಾಗ, ನೀವು ಭೀಮನನ್ನು ಯುದ್ಧದಲ್ಲಿ ಹೇಗೆತಾನೆ ಜಯಿಸುತ್ತೀರಿ? ಭೀಮಸೇನನು ಈಶ್ವರಭಕ್ತ. ಈ ಮೃತ್ಯುಂಜಯನೊಡನೆ ನಿನಗೆ ಸರಸವೇ? ನಿನ್ನ ಶಕ್ತಿಯನ್ನು ತಿಳಿಯದೆ ನೀನು ಮರಳಾಗಬಹುದೇ? ಭೀಮನಿಗೆ ನೀನು ಸಮಾನನೇ? ಅರ್ಜುನನು ಸುಲಭನೇ? ಆತನು ಬಲಿ ವಿಭೀಷಣ ಭೀಷ್ಮ ನಾರದರಂತೆ ಕೃಷ್ಣನ ಭಕ್ತನಲ್ಲವೇ? ಅರ್ಜುನನ ಪರಾಕ್ರಮ ನಿನಗೆ ತಿಳಿಯದೇ? ತಿಳಿದೂ ತಿಳಿಯದವನಂತೆ ನೀನು ಮರುಳಾಗುವೆಯಾ? ಕೃಷ್ಣಾರ್ಜುನರು ಎಲ್ಲಿರುವರೋ ಅಲ್ಲಿ ಜಯ ಖಂಡಿತ. ಪಾಂಡವರಿಗೆ ನೀನು ಸಮನಲ್ಲ ಎನ್ನುವುದು ತಿಳಿದವರಿಗೆ ಗೊತ್ತೇ ಇದೆ. ಹಿಂದೆ ಬಂದ ವಿಪತ್ಪರಂಪರೆಗಳ ಅರಿವು ನಿಮಗೆ ಇದ್ದೇ ಇದೆ. ಗೋಗ್ರಹಣ, ದ್ರೌಪದೀವಿವಾಹ, ಘೋಷಯಾತ್ರೆ ಇವುಗಳಲ್ಲಿ ಬಂದ ಭಂಗಗಳನ್ನು ತಿಳಿದೂತಿಳಿದು ಪಾಂಡವರೊಡನೆ ಯುದ್ಧಸನ್ನಾಹ ಮಾಡುವೆಯಾ?" ಎಂದಿವೇ ಮೊದಲಾದ ಸಕಲನೀತಿರಹಸ್ಯಗಳನ್ನು ವಿದುರನು ವ್ಯಕ್ತವಾಗಿ ತಿಳಿಸಿ, "ರಾಜನೇ! ಕೇಳು; ತತ್ತ್ವಜ್ಞಾನವನ್ನು ತಿಳಿಯುವ ಆಸಕ್ತಿ ಇದ್ದರೆ ಸನತ್ಸುಜಾತನನ್ನು ನೆನೆ. ಆತನು ಮುಕ್ತಿಪ್ರದಾಯಕವಾದ ಅಮಲಬ್ರಹ್ಮವಿದ್ಯೆಯನ್ನು ನಿನಗೆ ಉಪದೇಶಿಸಿ ನಿನ್ನ ಮನಸ್ಸಿನ ವ್ಯಾಕುಲತೆಯನ್ನು ಹೋಗಲಾಡಿಸಿ ನಿನ್ನನ್ನು ರಕ್ಷಿಸುತ್ತಾನೆ" ಎಂದನು.

೪ನೆಯ ಸಂಧಿ

ವಿದುರನು ಬೋಧಿಸಿದ ನೀತಿಯಿಂದ ಧೃತರಾಷ್ಟ್ರನ ಮನಸ್ಸು ಶುದ್ಧವಾಯಿತು. ಬಳಿಕ ಆತನು ಆತ್ಮವಿದ್ಯೆಯನ್ನು ತಿಳಿಯಲು, ವಿದುರನು ತಿಳಿಸಿದಂತೆ ಸನತ್ಸುಜಾತನನ್ನು ನೆನೆದು ಭಜಿಸಲು, ಆ ಮುನಿಯು ಕೃಪೆ ಮಾಡಿ ಬಂದನು. ಆಗ ಧೃತರಾಷ್ಟ್ರನು ಎದ್ದು ಆತನಿಗೆ ನಮಸ್ಕರಿಸಿ ಆತ್ಮವಿದ್ಯೆಯನ್ನು ಉಪದೇಶ ಮಾಡಬೇಕೆಂದು ಪ್ರಾರ್ಥಿಸಲು ಆತನು ಪರಲೋಕಸಾಧನವನ್ನು ಧೃತರಾಷ್ಟ್ರನಿಗೆ ತಿಳಿಸಿದನು.

"ಧೃತರಾಷ್ಟ್ರ ! ಕೇಳು. ಈ ಶರೀರವು ಸ್ಥಿರವಲ್ಲ. ಸಿರಿಯು ಮೃತ್ಯು ದೇವತೆಯ ಮಾಯಾಸ್ವರೂಪ. ಆ ದೇವತೆಯು ಮಾನವನ ಕಾಲಗತಿಗಾಗಿ ಬಾಯಿಬಿಟ್ಟು ಎದುರು ನೋಡುತ್ತಿದ್ದಾಳೆ. ಇದನ್ನು ತಿಳಿದ ಮಹಾತ್ಮರೂ ಇದಕ್ಕೇ ಸಹಾಯಕರು. ಆದಕಾರಣ ಧರ್ಮಮಾಡಿ ಮುಕ್ತಿರಾಜ್ಯವನ್ನು ಪಡೆಯಬೇಕು.

ಹಸುಗಳ ಮೈಬಣ್ಣ ಬೇರೆಬೇರೆಯಾದರೂ, ಅವುಗಳ ಹಾಲಿನ ಬಣ್ಣ ಮಾತ್ರ ಒಂದೇ. ಅಂತೆಯೇ ಕ್ರಮವಾದ ದಾರಿಯನ್ನು ಬಿಟ್ಟು ಚರಾಚರಗಳ ಸುಳಿವಿನಲ್ಲಿ ಸುಳಿದು ಮರೆಯಾಗಿ ಕೊನೆಯಲ್ಲಿ ನಿಲ್ಲುವುದು ನಿಜವೊಂದಲ್ಲದೆ ಮತ್ತೊಂದಿಲ್ಲ.

ಲೋಕವು ಕೆಟ್ಟವರಿಗೆ ಹೆದರುತ್ತದೆ, ಸಜ್ಜನರನ್ನು ಲೆಕ್ಕಿಸುವುದಿಲ್ಲ. ಈ ಕಾರಣದಿಂದಲೇ ಗರುಡನನ್ನೂ, ವಿಷ್ಣುವಿನ ಶಯ್ಯೆಯಾದ ಹಾವನ್ನೂ ಜನರು ಅರ್ಚಿಸುತ್ತಾರೆ.

ಜ್ಞಾನಿಗಳನ್ನು ಒಪ್ಪಿಸಬಹುದು. ಅಜ್ಞಾನಿಗಳನ್ನಾದರೂ ಒಮ್ಮೆ ಸಮ್ಮತಿಸುವಂತೆ ಮಾಡಬಹುದು. ಅಲ್ಪಜ್ಞನಿಗೆ ತಿಳಿಸುವುದು ದೇವರಿಗೂ ಸಾಧ್ಯವಾಗದಿರುವಾಗ ಮನುಷ್ಯರ ಪಾಡೇನು ? ಈ ದೇಹದಲ್ಲಿ ಜೀವವಿರುವವರೆಗೂ, ರಾಜ, ಒಡೆಯ, ದಂಡನಾಥ, ಗುರು, ಹಿರಿಯ, ದೈವಾಪರ, ಸತ್ಪುರುಷ ಎಂದು ವಿವಿಧ ಹೆಸರುಗಳಿಂದ ಜನರು ಅಹಂಕಾರಪಡುತ್ತಾರೆ. ಜೀವ ಹೋದಮೇಲೆ ಎಲ್ಲರ ಶರೀರವನ್ನೂ ಹೆಣವೆಂದೇ ಕರೆಯುತ್ತಾರಲ್ಲವೇ ?

ಭೂಮಿಯು ಮಧುಕೈಟಭರ ಮೇದಸ್ಸಿನಿಂದ ಆಗಿದೆ. ಇದನ್ನು ಪುಣ್ಯಕೀರ್ತಿಗಳಾಗಿ ಅನುಭವಿಸಬೇಕು. ಇಲ್ಲದಿದ್ದರೆ ರಾಕ್ಷಸಮಾಂಸವನ್ನು ಭಕ್ಷಿಸಿದ ಫಲವುಂಟಾಗುತ್ತದೆ.

ಮುಂದೆ ಬರುವುವು ಕಷ್ಟದ ದಿನಗಳು. ನೀನು ಮೈಮರೆಯದೆ ಎಚ್ಚರದಿಂದ ಮುಂದುವರಿ. ನಿನ್ನ ಮಕ್ಕಳ ವೈರದ ದೆಸೆಯಿಂದ ಈ ಬ್ರಹ್ಮಾಂಡವೇ ಬರಿದಾಗುತ್ತದೆ.

ಕೃಷ್ಣನು ಮನುಷ್ಯನಲ್ಲ. ಆತನು, ಭೂಲೋಕದಲ್ಲಿ ಸಂದಣಿಸಿರುವ ದೈತ್ಯಸಹಸ್ರಕೋಟಿಯನ್ನು ಸಂಹರಿಸಿ ಭೂಭಾರವನ್ನು ಇಳಿಸಿ, ದೇವತೆಗಳ

ದುಃಖವನ್ನು ಪರಿಹರಿಸಿ ಭಕ್ತರನ್ನು ಕಾಪಾಡಲು ಬಂದಿರುವ ಸಾಕ್ಷಾತ್ ವಿಷ್ಣುವೇ ಎಂದು ತಿಳಿ. ಆತನು ಪಾಂಡವರ ಪಕ್ಷಕ್ಕೆ ಸೇರಿ ಅರ್ಜುನನ ಸಾರಥಿಯಾಗಿದ್ದಾನೆ ; ಇನ್ನು ನಿಮಗೆ ಹೇಗೆತಾನೇ ಜಯವಾಗುತ್ತದೆ? ಕೃಷ್ಣನನ್ನು ಮರೆಹೊಕ್ಕು ಈ ಕ್ಷಣದಲ್ಲೇ ರಾಜ್ಯವನ್ನೊಪ್ಪಿಸು. ಇಲ್ಲದಿದ್ದರೆ ನೀವು ಕೆಡುವುದು ಖಂಡಿತ.

ಸಮುದ್ರದಲ್ಲಿ ಕ್ಷೀರಾಬ್ಧಿಯೂ, ತೀರ್ಥಗಳಲ್ಲಿ ಗಂಗೆಯೂ, ಮುನೀಶ್ವರರಲ್ಲಿ ವೇದವ್ಯಾಸನೂ, ವ್ರತಿಗಳಲ್ಲಿ ಹನುಮಂತನೂ, ದೇವರಲ್ಲಿ ಕೃಷ್ಣನೂ ಹೇಗೋ, ಹಾಗೆಯೇ ರಾಜರಲ್ಲಿ ಧರ್ಮರಾಜನು ಶ್ರೇಷ್ಠನು." ಎಂದಿವೇ ಮೊದಲಾದ ಬೋಧೆಯಿಂದ, ಧೃತರಾಷ್ಟ್ರನು ಕುಬುದ್ಧಿವ್ಯಾಪಕನೆಂಬ ಅಪಕೀರ್ತಿಯನ್ನು ನೀಗಿ, ವಿಮಲಜ್ಞಾನ ಸೂರ್ಯೋದಯವನ್ನು ಕಾಣಿಸಿ, ಆತನನ್ನು ಸಂತೈಸಿ ಸನತ್ಸುಜಾತಮುನಿಯು ತನ್ನಾಶ್ರಮಕ್ಕೆ ಹಿಂತಿರುಗಿದನು. ಧೃತರಾಷ್ಟ್ರನು ಆನಂದಭರಿತನಾಗಿ ಲಕ್ಷ್ಮೀರಮಣನನ್ನು ನೆನೆದನು.

೫ನೆಯ ಸಂಧಿ

ಬೆಳಗಾದಕೂಡಲೆ ಕೌರವನು, ಸಭಿಕರು ಆಪ್ತರು ಮತ್ತು ಮಂತ್ರಿಗಳು ಇವರನ್ನು ಸಭೆ ಸೇರಿಸಿ, ಪಾಂಡವರ ಓಲಗದ ಸೊಬಗನ್ನು ಕೇಳಿ ತಿಳಿದುಕೊಳ್ಳಲು ಸಂಜಯನನ್ನು ಸಭೆಗೆ ಕರೆಸಿದನು.

ಸಂಜಯನು ಬಂದು ಧೃತರಾಷ್ಟ್ರನಿಗೂ ದುರ್ಯೋಧನನಿಗೂ ಕೈಮುಗಿದು "ದೇವ! ಕುಂತೀನಂದನನು ಹರ್ಷದಿಂದ ಕಾಣಿಕೆಕೊಟ್ಟು ನಮಸ್ಕರಿಸಿ ಉಚಿತವಚನವನ್ನಾಡಿ ನನ್ನನ್ನು ಕಳುಹಿಸಿರುತ್ತಾನೆ, ಚಿತ್ತೈಸಬೇಕು" ಎಂದು ರಾಜಕಾರ್ಯವನ್ನು ಅವನಿಗೆ ವಿಜ್ಞಾಪಿಸಿದನು. "ಜೀಯ! ಬಿನ್ನಹ. ಈಗ ಪಾಂಡವರ ಸಂಪತ್ತನ್ನೂ, ಅವರ ನಾಯಕರ ಪರಾಕ್ರಮವನ್ನೂ, ಅವರ ಬಲವನ್ನೂ ಸಾವಿರಬಾಯಿಯ ಆದಿಶೇಷನಿಗೂ ಹೊಗಳಲು ಸಾಧ್ಯವಿಲ್ಲ ಎಂದಮೇಲೆ ನನ್ನ ಪಾಡೇನು ? ಅಷ್ಟು ಜನರಿಗೂ ಕೃಷ್ಣನ ಕರುಣದಳತೆ ವಿಚಿತ್ರವಾಯ್ತು. ಸಭೆಯಲ್ಲಿ ಎಲ್ಲ ರಾಜರೂ ಗರ್ಜಿಸಿ ತಮತಮಗೆ ತೋರಿದಂತೆ ಮಾತಾಡಿ ನನ್ನನ್ನು ಜರೆದರು; ಗುಂಪೆದ್ದು ಯುದ್ಧಸನ್ನದ್ಧರಾಗಲು ಓಡಾಡಿದರು. ಆಗ ಧರ್ಮರಾಜನು ಎಲ್ಲರನ್ನೂ ಸಮಾಧಾನ ಪಡಿಸಿದನು. ಬಳಿಕ ಅರ್ಜುನನು ಕೃಷ್ಣನ ಮನೆಗೆ ನನ್ನನ್ನು ಕರೆಸಿದನು. ಅಲ್ಲಿ ಕೃಷ್ಣನು ಸತ್ಯಭಾಮೆಯನ್ನು ಒರಗಿಕೊಂಡು ಅರ್ಜುನನ ತೊಡೆಯಮೇಲೆ ತನ್ನ ಕಾಲನ್ನು ನೀಡಿಕೊಂಡಿದ್ದನು. ನಾನು ಅಲ್ಲಿಗೆ ಹೋಗಲು ನನ್ನನ್ನು ಯಥೋಚಿತವಾಗಿ ಉಪಚರಿಸಿದರು. 'ನನಗೆ ಅಪ್ಪಣೆ ಏನು' ಎಂದು ಕೇಳಲು ಕೃಷ್ಣನು—

"ನನಗೆ ಎರಡು ಪಕ್ಷಗಳಲ್ಲೂ ಮಮತೆ ಸಮಾನ. ನಾನು ಯಾರೊಬ್ಬರಲ್ಲೂ ಪಕ್ಷಪಾತಮಾಡುವುದಿಲ್ಲ. ಕೌರವಪಾಂಡವರೆರಡುವಂಶಕ್ಕೂ

ಹಿತವನ್ನೇ ಬಯಸುತ್ತೇನೆ. ಆದರೆ, ಸಂಜಯ! ಕೇಳು, ಸೀರೆಯನ್ನು ಎಳೆದಾಗ ದ್ರೌಪದಿಯು 'ಲಕ್ಷ್ಮೀರಮಣ, ಲಕ್ಷ್ಮೀರಮಣ, ಲಕ್ಷ್ಮೀರಮಣ' ಎಂದು ಒರಲಿದಳು. ಆಗ ನಾನು ನೊಂದೆ. 'ಪತಿಗಳೈವರ ಮನಸ್ಸೂ ಕಲ್ಲಾಗಿದೆ; ಕಾವುದೈ ಗೋವಿಂದ, ಸಲಹೈ ದೇವಕೀಸುತ. ದೇಸಿಗರಿಗೆ ದೇವನು ನೀನೇ ಅಲ್ಲವೇ? ದೇವ! ಕೆಟ್ಟೆ, ಕೆಟ್ಟೆ. ಕೃಪಾದೃಷ್ಟಿಯಿಂದ ಜೀವನವನ್ನು ಕಾಪಾಡು' ಎಂದು ಒರಲಿದಾಗ ಅವಳಿಗೆ ನಾನು ಹುಂಗಿಗನಾಗಿದ್ದೇನೆ. ನಾನು ಭಕ್ತರ ಭಂಟ. ನೆನೆವವರ ನಂಟ. ನನ್ನನ್ನು ಪ್ರೀತಿಸಿದರೆ ನಾನು ಅವರನ್ನು ಮೆಚ್ಚುತ್ತೇನೆ. ತರ್ಕಸಾಧಕರನ್ನು ಮೆಚ್ಚುವುದಿಲ್ಲ. ಪಾಂಡವರೈವರಲ್ಲಿ ನನಗೆ ಹೆಚ್ಚು ನಂಟತನವುಂಟು. ಮುಚ್ಚುಮರೆ ಏಕೆ? ಇವರಿಗೆ ಕಂಟಕರಾದವರು ನಮಗೂ ಕಂಟಕರೇ" ಎಂದು ಹೇಳಿಕಳುಹಿಸಿರುತ್ತಾನೆ.

"ವನದಲ್ಲಿ ಗಂಧರ್ವನಿಂದಾದ ಬಂಧನವನ್ನೂ, ಗೋಗ್ರಹಣದಲ್ಲಾದ ಪರಾಭವವನ್ನೂ ದುರ್ಯೋಧನನು ನೆನೆಯಲಿ. ದ್ರೌಪದಿಯನ್ನು ಬಯಸಿದಾಗ ಪಡೆದ ಬಿಲ್ಲಿನೇಟನ್ನು ಮರೆತಿರಬಾರದೆಂದು ಹೇಳು. ಭೀಮನ ಗದೆಯ ಏಟನ್ನೂ, ಮಳೆಗಾಲದ ಮಹಾಧ್ವನಿಯಂತೆ ಅದ್ಭುತವಾದ ನಮ್ಮ ಬಾಣಗಳ ಬಿರುಸನ್ನೂ, ನಕುಲಸಾತ್ಯಕಿಯರ ಹರಿತವಾದ ಕತ್ತಿಯನ್ನೂ, ಸಹದೇವಮತ್ಸ್ಯರ ಉದಾರತೆಯನ್ನೂ ನಿಮ್ಮ ರಾಜನು ಮೊದಲು ತಿಳಿದುಕೊಳ್ಳಲಿ. ಜೂಜಿನ ಸಭೆಯಲ್ಲಿ ಹಿಂದೆ ನಾವು ಪ್ರತಿಜ್ಞೆ ಮಾಡಿದ್ದುಂಟು. ಅದನ್ನು ಕರ್ಣ ಶಕುನಿ ಜಯದ್ರಥಾದಿಗಳು ಈಗ ನೆನೆಯಲಿ, ಮುಂದೆ ನೋಡಲಿ. ಕ್ಷಿಪ್ರದಲ್ಲೇ ಅದನ್ನು ಆಗುಮಾಡುತ್ತೇನೆ." ಎಂದು ಅರ್ಜುನನು ಹೇಳಿಕಳುಹಿಸಿರುತ್ತಾನೆ.

"ನಿನ್ನ ಒಡೆಯನ ತೊಡೆಗಳು ಕ್ಷೇಮವೇ? ದುಶ್ಶಾಸನನ ಮೈ ಬಲಿತಿದೆಯೇ? ಆತನನ್ನು ರಕ್ಷಿಸಿದರಲ್ಲವೇ ಅಷ್ಟುಮಂದಿಗೂ ರಕ್ತಜಲ ದೊರೆಯುವುದು? ಆ ನೂರು ಸಹೋದರರಿಗೂ ಸಾವು ಖಂಡಿತ. ಹೆದರದೆ ನಿನ್ನೊಡೆಯನಿಗೆ ಎಲ್ಲವನ್ನೂ ಹೇಳು" ಎಂದು ಭೀಮನು ಹೇಳಿಕಳುಹಿಸಿರುತ್ತಾನೆಂದು ಸಂಜಯನು ಸಭೆಯಲ್ಲಿ ತಿಳಿಸಿದನು.

ಇದನ್ನು ಕೇಳಿ ಕರ್ಣನು ಕೋಪದಿಂದ "ಸಂಜಯ! ಸಾಕು. ಹರಟಬೇಡ. ಆರಲ್ಲಿ? ಇವನನ್ನು ನೂಕಿ. ಈತನನ್ನು ಕಳುಹಿಸಿದವರು ಯಾರು? ಆ ಕುಠಾರಪಾಂಡವರ ಪೊಳ್ಳು ಗೃಹಗರ್ಜನೆಯ ಗ್ರಹ ಹೊಡೆದು ತಲೆಕೆಳಗಾದ ಇವನು ಅವಿವೇಕಸಾಗರನಲ್ಲವೇ? ರಾಜನೇ! ಜಗದೇಕವೀರನಾದ ಕರ್ಣ ನಾನಿರಲು ಸಂಧಿ ಏತಕ್ಕೆ? ಶತ್ರುಗಳು ಮೈಮರೆತು ತಮ್ಮವರೆದುರಿನಲ್ಲಿ ಹರಟಿದ ಮಾತನ್ನು ತಂದು ಈ ರಾಜಸಭೆಯಲ್ಲಿ ಹೇಳುವ ಇವನು ಶಿಷ್ಟನೇ? ಜಗತ್ತಿನ ಭಂಡನಲ್ಲವೇ? ಒಂದೇ

ಬಾರಿಗೆ ಈಶ್ವರನನ್ನೇ ತಲೆಕೆಳಕು ಮಾಡಲು ಶಕ್ತನಾದ ನನಗೆ ಈ ಕೌಂತೇಯರು ಎದುರೇ ?" ಎಂದು ಹೇಳಿದನು.

ಅದಕ್ಕೆ ಭೀಷ್ಮನು "ಎಲವೋ ಕರ್ಣ ! ಸಂಜಯನು ಭಂಡನೇ? ಲೋಕದಲ್ಲಿ ಭಂಡ ನೀನು. ನಿನಗೆ ಪಾಂಡವರು ಏತಕ್ಕೆ ? ಅವರ ಸೇನೆಯಲ್ಲಿರುವ ಪುಂಡನೊಬ್ಬನೇ ಸಾಕು. ನೀನು ಪೌರುಷದ ಮಾತುಗಳನ್ನು ಮಾತ್ರ ಆಡುತ್ತೀಯೆ. ಅರ್ಜುನನಿಗೆ ಕೋಪ ಬಂದರೆ ನಿನ್ನ ಪರಾಕ್ರಮವನ್ನು ಮುರಿಯುತ್ತಾನೆ. ದುರ್ಯೋಧನ! ಈ ಕರ್ಣನು ದುಷ್ಟ. ಹಿಂದೆ ನಡೆದ ಯುದ್ಧದಲ್ಲಿ ಇವನು ನಿಜವಾಗಿಯೂ ಪರಾಕ್ರಮಿ ಆಗಿದ್ದನಲ್ಲವೇ ? ಮರುಳೇ ! ನಿನಗೆ ಇವನಲ್ಲಿ ಇನ್ನೂ ನಂಬಿಕೆಯುಂಟೇ ? ಹೇಳಿ ಫಲವೇನು ? ಅರ್ಜುನನಿಗೆ ಸಮಾನರು ಮೂರುಲೋಕದಲ್ಲಿ ಯಾರೂ ಇಲ್ಲ. ನಾವು ಹೊಗಳಿದರೆ ಹೊಗಳುಭಟ್ಟರಾಗುತ್ತೇವೆ" ಎಂದನು.

ಬಳಿಕ ದ್ರೋಣನು 'ದುರ್ಯೋಧನ! ಭೀಷ್ಮನ ಮಾತು ಪರಮತತ್ತ್ವವು. ಅದನ್ನು ಮುರಿಯಬೇಡ. ಯುದ್ಧದಲ್ಲಿ ಅರ್ಜುನನನ್ನು ಎದುರಿಸಲು ದೇವದಾನವರಲ್ಲಿ ಸಮರ್ಥರಾರೂ ಇಲ್ಲ. ದುಷ್ಟರಾಡುವ ಹರಟೆಮಾತುಗಳು ಹಿರಿಯರಿಗೆ ಅಭಿಮತವಲ್ಲ. ನೀನು ಸಂಧಿಮಾಡಿಕೊಳ್ಳುವುದು ನ್ಯಾಯವಾಗಿದೆ' ಎಂದು ತಿಳಿಸಿದನು.

ಇದನ್ನು ಕೇಳಿ ದುರ್ಯೋಧನನು "ನೀವು ನಮ್ಮ ಮಾತನ್ನು ಪೊಳ್ಳುನುಡಿ ಎಂದು ಅಲ್ಲಗಳೆಯುತ್ತೀರಿ. ಕೌಂತೇಯರೆಂದರೆ ಮನಕರಗಿ ಹಿಗ್ಗುತ್ತೀರಿ. ಡಿಂಬ ನಮ್ಮಲ್ಲಿ. ಜೀವ ಅವರಲ್ಲಿ. ಭರತಸಂತತಿಯಲ್ಲಿ ಮನುಷ್ಯರು ಕೆಲವರು, ದೇವತೆಗಳು ಕೆಲವರೇ ? ಸಾಕು ಆ ಮಾತಿರಲಿ. ನಮ್ಮ ಪರಾಕ್ರಮವನ್ನು ಯುದ್ಧದಲ್ಲಿ ನೋಡಿ" ಎಂದನು.

ಆಗ ಧೃತರಾಷ್ಟ್ರನು ಹೆದರಿ "ಮಗನೇ ! ಬೇಡ. ಕೃಷ್ಣನು ಪ್ರಖ್ಯಾತನಾದ ಪರಾಕ್ರಮಿ. ಕೆಲವರು ಆತನನ್ನು ಹರಿಯೆಂದೇ ಹೇಳುತ್ತಾರೆ. ಆತನು ಪಾಂಡವರ ಪಕ್ಷಕ್ಕೆ ಸೇರಿರುತ್ತಾನೆ. ಅವರಿಗೆ ಕೇಡನ್ನು ಬರಗೊಡುವುದಿಲ್ಲ. ರಾಜ್ಯವನ್ನು ಅವರಿಗೆ ಒಪ್ಪಿಸು" ಎಂದನು.

ಅದಕ್ಕೆ ದುರ್ಯೋಧನನು "ತಂದೆಯವರು ಮರುಳರಲ್ಲವೇ ? ಕೃಷ್ಣನು ಹರಿ ಎಂದು ನಾನು ಮೊದಲೇ ತಿಳಿದಿದ್ದೇನೆ. ನೀವು ಹೆದರಬೇಕಾಗಿಲ್ಲ. ನಿಮಗೆ ಮರಣಭಯವಿಲ್ಲ. ಗುರು ಭೀಷ್ಮಾದಿಗಳಿರುವಾಗ ಕುರುಕುಲಕ್ಕೆ ಕೇಡುಂಟೇ? ನಮ್ಮನ್ನು ಕೊಲ್ಲಲು ಅರ್ಜುನನು ಶಕ್ತನೇ ? ಭೂಭಾರ ಹೆಚ್ಚಿ, ಭೂದೇವಿಯು ವಿಜ್ಞಾಪಿಸಿಕೊಳ್ಳಲು ನಾರಾಯಣನು ಭೂಲೋಕದಲ್ಲಿ ಮಾನವನಾಗಿ ಅವತರಿಸಿ ರಾಕ್ಷಸರನ್ನು ತಾನೇ ಸಂಹರಿಸಿದ್ದಾನೆ. ಈಗ ಅರ್ಜುನನಿಂದ ಕೌರವರನ್ನು ಕೊಲ್ಲಿಸುತ್ತಾನೆ? ಇದ

ಕ್ಕಾಗಿ ನಾವು ಏತಕ್ಕೆ ಅಂಜಬೇಕು? ಕಾಪಾಡುವವನೂ ಆತನೇ; ಕೊಲ್ಲುವವನೂ ಆತನೇ. ನಾನು ಆತನ ಕೈಯಿಂದಲೇ ಸಾಯುತ್ತೇನೆ. ನೀವು ಪಾಂಡವರೊಡನೆ ಸುಖವಾಗಿ ರಾಜ್ಯವಾಳಿ. ಸಾವಿಗೆ ನಾನು ಹೆದರುವೆನೇ? ಏತಕ್ಕೆ ನೀವು ಚಿಂತಿಸುತ್ತೀರಿ? ನಿಮ್ಮನ್ನು ನಾರಾಯಣನು ಕರುಣದಿಂದ ಕಾಪಾಡುತ್ತಾನೆ" ಎಂದು ಹೇಳಿದನು.

೬ನೆಯ ಸಂಧಿ

ಧರ್ಮರಾಜನು ಸಂಜಯನನ್ನು ಬೀಳ್ಕೊಟ್ಟಮೇಲೆ ಕೃಷ್ಣನ ಹತ್ತಿರಕ್ಕೆ ಬಂದು "ಕೃಷ್ಣ! ನಮ್ಮ ಮುಂದಿನ ಸಿದ್ಧತೆ ಏನು? ಕೌರವರೊಡನೆ ನಮಗೆ ಆಗುವುದೇನು? ಕೌರವರು ಮೂರ್ಖರು. ಅವರು ಮುಂದಾಲೋಚನೆ ಇಲ್ಲದ ಕುಮತಿಗಳು. ಅವರಂತೆ ನಡೆದರೆ ವಂಶದ ಕೀರ್ತಿಯೇ ನಾಶವಾಗುತ್ತದೆ. ನಮಗೆ ಯೋಗ್ಯವಾದುದು ಸಂಧಿಯೋ? ಸಮರವೋ? ಹೇಳು" ಎಂದು ಕೇಳಿದನು.

ಆಗ ಕೃಷ್ಣನು "ಧರ್ಮರಾಜ! ನಿನ್ನಭಿಮತವೇನು? ಸಂಧಿಯೋ? ಸಂಗ್ರಾಮವೋ? ಮನಬಿಚ್ಚಿ ನಿಶ್ಚಯವನ್ನು ಹೇಳು. ನಿನ್ನ ಅಭಿಪ್ರಾಯವನ್ನೇ ನಾನು ಒಪ್ಪುತ್ತೇನೆ ಮತ್ತು ಅದರಂತೆ ಪ್ರಯತ್ನಿಸುತ್ತೇನೆ" ಎಂದನು.

ಅದಕ್ಕೆ ಧರ್ಮರಾಜನು "ದೇವ! ದೇಹವಳಿದರೂ ಕೀರ್ತಿ ಮಾತ್ರ ಉಳಿಯುತ್ತದೆ. ಸೋದರರು ಪರಸ್ಪರ ವೈಮನಸ್ಯದಿಂದ ಯುದ್ಧ ಮಾಡಿದರೆಂಬ ದುರ್ಯಶಸ್ಸಿನ ಅಪವಾದವನ್ನು ನಾವು ಹೊರಬೇಕಾಗುತ್ತದೆ. ಈ ನೆಲವನ್ನು ಸುಡಲಿ. ನನಗೆ ಕೌರವನಿಂದ ಕೆಲವು ಪಟ್ಟಣಗಳನ್ನು ಮಾತ್ರ ಕೊಡಿಸಿ ಸಮಾಧಾನಪಡಿಸು. ಕುಶಸ್ಥಳ, ವೃಕಸ್ಥಳ, ವಾಸಂತಿ, ವಾರಣಾವತ, ಇವುಗಳ ಜತೆಗೆ ಆತನ ಮನಸ್ಸಿಗೆ ಬಂದ ಯಾವುದಾದರೊಂದು ಪಟ್ಟಣ, ಈ ಐದನ್ನೂ ಕೌರವನಿಂದ ಕೊಡಿಸು. ಮಾತ್ಸರ್ಯವನ್ನು ಮರೆತು ನಾವು ಧೃತರಾಷ್ಟ್ರನನ್ನೇ ಸೇವಿಸುತ್ತೇವೆ. ನೀನೇ ಹೋಗಿ ಯಾವ ವಿಧದಲ್ಲಾದರೂ ಸಂಧಿಮಾಡಿ, ಕೌರವರೊಡನೆ ನಾವೂ ಇರುವಂತೆ ಮಾಡು. ತಿಳಿದವರ ಅಭಿಪ್ರಾಯವೂ ಚಾಡಿಕಾರರ ಮಾತಿನಿಂದ ಕೆಡುತ್ತದೆ. ಕೌರವರ ಮೇಲೆ ನಮಗೆ ಯಾವ ಕೋಪವೂ ಇಲ್ಲ. ಸಂಧಿಯನ್ನು ಮಾಡು" ಎಂದು ಹೇಳಿದನು.

ಇದನ್ನು ಕೇಳಿ ಕೃಷ್ಣನ ಮನಸ್ಸು ಅಳುಕಿತು. 'ಧರ್ಮರಾಜನ ಮನಸ್ಸು ಸಂಧಿಗೆ ತಿರುಗಿದರೆ ಭೂಭಾರ ಕಡಿಮೆಯಾಗಲು ದಾರಿ ಯಾವುದು? ಆತನ ಮನಸ್ಸಿನಲ್ಲಿ ಯುದ್ಧಾನುಸಂಧಾನವು ಸಡಿಲವಾಗಿದೆ' ಎಂದು ಯೋಚಿಸಿ ಕೃಷ್ಣನು "ಧರ್ಮಪುತ್ರ! ನೀನು ನಿರ್ಮಲನಾಗಿರುವುದರಿಂದ ಸರಾಗನಾಗಿರುವೆ. ದುರ್ಯೋಧನನಾದರೋ ಹೆಚ್ಚು ಕಲ್ಮ

ಷನು. ಅವನಿಗೆ ನೆಲವನ್ನು ಕೊಡುವ ಮನಸ್ಸಿಲ್ಲ. ಇದು ವೃಥಾ ಆಸೆಯಲ್ಲದೆ ಇದರಲ್ಲಿ ಫಲವಿಲ್ಲ. ಭೀಮ! ರಾಜನ ಮನಸ್ಸು ಸಂಧಿಗೆ ತಿರುಗಿದೆ. ನಿನ್ನ ಅಭಿಪ್ರಾಯವೇನು? ಮರೆಮಾಚದೆ ಹೇಳು" ಎಂದು ಕೇಳಿದನು.

ಅದಕ್ಕೆ ಭೀಮನು "ಧರ್ಮರಾಜನು ತಪ್ಪು ಮಾರ್ಗದಲ್ಲಿ ನಡೆಯುವನೇ? ಈ ಘೋರಯುದ್ಧದಿಂದ ಏನು ಫಲ? ಕೃಷ್ಣ! ಕೇಳು. ಸೋದರರ ವಧೆಗೆ ನಾನು ಒಪ್ಪುವವನಲ್ಲ. ಎದೆಗಿಚ್ಚಿನ ದುಷ್ಟರು ಕೌರವರಿಗೂ ನಮಗೂ ವೈಮನಸ್ಯವನ್ನು ತಂದೊಡ್ಡಿದ್ದಾರೆ. ಇದು ಜನ್ಮಾಂತರದ ಕರ್ಮಫಲ. ನಾನು ಅವಮಾನವನ್ನೂ ಲೆಕ್ಕಿಸುವುದಿಲ್ಲ. ಕೌರವರು ನಮ್ಮನ್ನು ತುಚ್ಛವಾಗಿ ಕಂಡರೆಂಬ ವ್ಯಥೆಯೂ ನನಗಿಲ್ಲ. ಸಂಧಿಯನ್ನು ಘಟಿಸು, ಸಾಕು" ಎಂದು ಹೇಳಿದನು. ಭೀಮನ ಈ ಮಾತನ್ನು ಕೇಳಿ ಕೃಷ್ಣನು ಮುಗುಳ್ನಗೆ ನಕ್ಕು, ವಿಷ ಅಮೃತವಾಗಿದೆ. ಬೆಂಕಿ ಶೀತಲವಾಗಿದೆ. ಸಿಡಿಲಿನ ಆಟೋಪ ನಯವಾಗಿದೆ. ಯುದ್ಧಮಾಡಲು ಭೀಮನು ಅಳುಕಿದ್ದಾನೆ. ಇದು ಆಶ್ಚರ್ಯವಲ್ಲವೇ? ಏನು ಮಾಯೆಯೋ? ಕುಂತಿ ಎಂತಹ ಪುತ್ರರನ್ನು ಪ್ರಸವಿಸಿದಳೋ? ಎಂದು ಯೋಚಿಸಿ "ಜಗದ್ವಿಖ್ಯಾತ ಪಾರ್ಥ! ಇದು ಭೀಮನ ಅಭಿಪ್ರಾಯ. ಹೆದರಬೇಡ ನಿನ್ನ ಮತವನ್ನು ತಿಳಿಸು" ಎಂದು ಕೇಳಲು, ಅರ್ಜುನನು ಕೈಮುಗಿದು "ದೇವ ನನ್ನ ಇಚ್ಛೆ ಬೇರೆಯೇ? ನೀವು ಹೇಳಿದುದನ್ನು ಶಿರಸಾ ವಹಿಸುತ್ತೇನೆ" ಎಂದು ಹೇಳಿದನು.

ಬಳಿಕ ಕೃಷ್ಣನು "ನಕುಲ! ಹೆದರಬೇಡ. ಸಂಧಿಯೋ ಸಮರವೋ? ನಿನ್ನ ಅಭಿಪ್ರಾಯವೇನು? ಹೇಳು" ಎಂದು ಕೇಳಲು, ವಿನಯದಿಂದ ಆತನು "ಎರಡು ಪಕ್ಷದವರಿಗೂ ಸಂಧಿ ಮಾಡುವುದನ್ನು ಬಿಟ್ಟರೆ ನನ್ನ ಅಭಿಮತ ಬೇರೇನಿದೆ? ಎಂದನು.

ಆಗ ಕೃಷ್ಣನು "ನಿನ್ನ ಅಭಿಮತವೇನು? ಸಹದೇವ! ಹೇಳು" ಎಂದು ಪ್ರಶ್ನಿಸಲು "ದೇವ! ನನಗೆ ಸಂಧಿ ಅಭಿಮತವಲ್ಲ. ಯುದ್ಧವೇ ಸಮ್ಮತ. ನೀನು ಯುದ್ಧವನ್ನೇ ಘಟಿಸು" ಎಂದು ತಿಳಿಸಲು, ಕೃಷ್ಣನು ದ್ರೌಪದಿಯನ್ನು ಕರೆತರಲು ಚಾರರನ್ನು ಕಳುಹಿಸಿದನು.

ಚಾರರು ದ್ರೌಪದಿಯಲ್ಲಿಗೆ ಹೋಗಿ "ದೇವಿ! ಶತ್ರುಗಳೊಡನೆ ಸಂಧಾನಸಮಾರಂಭ ನಡೆಯುತ್ತಿದೆ. ನಿಮ್ಮ ಅಭಿಪ್ರಾಯವನ್ನು ಕೇಳಿ ತಿಳಿಯುವುದಕ್ಕಾಗಿ ನಿಮ್ಮನ್ನು ಕರೆತರುವಂತೆ ಕೃಷ್ಣನು ಹೇಳಿ ಕಳುಹಿಸಿರುತ್ತಾನೆ. ನೀವು ಬಂದು ಆತನಿಗೆ ನಿಮ್ಮಭಿಮತವನ್ನು ತಿಳಿಸಿ" ಎಂದು ಹೇಳಿದರು.

ಇದನ್ನು ಕೇಳಿ ದ್ರೌಪದಿಯು "ಏನು! ಏನು! ಕೌರವರೊಡನೆ ಸಂಧಾನವೇ? ಪತಿಗಳಿಗೆ ಸುಮ್ಮಾನವಲ್ಲವೇ? ತಮ್ಮ ಸತಿಯನ್ನು ಪಾಪಿ

ಗಳು ಇರಿದರು. ಈ ಸಂಧಾನನಡೆಸುವವನು ಕೃಷ್ಣನೇ ? ತಪ್ಪೇನು ತಪ್ಪೇನು ?" ಎನ್ನುತ್ತ ಖಿನ್ನಳಾಗಿ ಪಲ್ಲಕ್ಕಿಯಲ್ಲಿ ಕುಳಿತು ಸಖಿಯರೊಡನೆ ಬಂದು, ಇಳಿದು ಸಭೆಯನ್ನು ಪ್ರವೇಶಿಸಿದಳು. ಬಳಿಕ ಆಕೆಯು ಭೀಮನನ್ನು ನೋಡಿ "ಎಲೆ ಭೀಮ ನೀನೂ ಸಂಧಿಗೆ ಮನತಂದೆ. ನಿನ್ನ ಪರಾಕ್ರಮವನ್ನು ನೀರಲ್ಲಿ ಕದಡಿದೆ. ಕೌರವನ ಕೈಕೆಳಗಿರಲು ಇಚ್ಛೆಯಾಯಿತೇ ನಿನಗೆ ? ಕೃಷ್ಣನಿಗೂ ನೀನು ನೀತಿಕಲಿಸಿದೆ. ಬಹುಮತವನ್ನೂ ಬಳಸಿದೆ. ಚಂದ್ರವಂಶವನ್ನೂ ನರಕಕ್ಕೆ ತಳ್ಳಿದೆ" ಎಂದಳು. ಬಳಿಕ "ಕೌರವರಲ್ಲಿ ಐದು ಪಟ್ಟಣಗಳನ್ನು ಬೇಡಲು ಧರ್ಮರಾಜನು ಕಳುಹಿಸುತ್ತಾನೆಯೋ ? ಕೃಷ್ಣನೇ ಸಂಧಾನಮಾಡುವವನು ? ಕೌರವರನ್ನು ಸೇರಿ ಬದುಕುವ ಭೀಮನೇ ! ಸೋದರರ ಸೇರುವಿಕೆಗೆ ನಿಮ್ಮ ಕೀರ್ತಿಶ್ರೀಯು ರೂಢಿಸಿತಲ್ಲವೇ ? ನೀವು ಸನ್ಯಾಸಿಗಳಾಗಿದ್ದೀರಿ. ರೋಷವನ್ನು ಬಿಟ್ಟವರಲ್ಲವೇ ? ಧರ್ಮದ ಸ್ಥಿತಿಯನ್ನು ತಿಳಿದ ಮನಸ್ಸು ನರಕವನ್ನು ಇಚ್ಛಿಸುತ್ತದೆಯೋ ? ವಿರೋಧವನ್ನು ಬಿಟ್ಟು ಕುಂತೀಪುತ್ರರು ಕೌರವರೊಡನೆ ಸುಖವಾಗಿ ರಾಜ್ಯವಾಳಲಿ. ಶತ್ರುಸೇನೆಗೂ ಕುರುಕುಲಕ್ಕೂ ಭಯಂಕರನಾದ ಭೀಮನೇ ! ನನಗಾದ ಮಹತ್ತರಮಾನಹಾನಿಗಳನ್ನು ಮರೆತೆಯಲ್ಲವೇ ? ರಾಮನು ತನ್ನ ಪತ್ನಿಗಾಗಿ ದೊಡ್ಡಯುದ್ಧವನ್ನೇ ಮಾಡಿದುದನ್ನು ನೀನು ಕೇಳಿಲ್ಲವೇ ? ಒಮ್ಮೆ ಪ್ರೇಮದಿಂದ ನನ್ನನ್ನು ನೋಡು. ಲೋಕದಲ್ಲಿ ಹೆಂಡತಿಯ ಮಾನರಕ್ಷಣೆಗೆ ಹೆಚ್ಚು ಅಭಿಮಾನವಿದೆ. ಇದಕ್ಕಾಗಿ ಪಣತೊಟ್ಟಿರುವವರು ಶತ್ರುಗಳನ್ನು ಕೊಲ್ಲುತ್ತಾರೆ. ಅದು ಸಾಧ್ಯವಾಗದಿದ್ದರೆ ತಾವೇ ಸಾಯುತ್ತಾರೆ. ಮೂರುಲೋಕಗಳಲ್ಲೂ ನಿಮ್ಮೈವರಿಗೆ ಸರಿಸಮಾನರಾರೂ ಇಲ್ಲ. ಈಗ ನೀವು ಹೆಂಡತಿಯ ಮಾನಹಾನಿವ್ಯಾಜದಿಂದ ಮೂದಲಿಸಲ್ಪಟ್ಟಿರೆಂಬ ದುರ್ಯಶಸ್ಸನ್ನು ಪಡೆಯಬಹುದೇ ? ಕುರುವಂಶಸ್ಥರಾದ ನಿಮ್ಮೊಳಗೆ ಸೋಲೇನು ಗೆಲುವೇನು ? ನೀವು ಸಹೋದರರಲ್ಲವೇ ? ನಾನಾದರೋ ಪಾಂಚಾಲವಂಶದವಳು. ಆದುದರಿಂದಲೇ ನಾನು ಬೇರೆ. ನನಗೆ ನಿಮ್ಮಲ್ಲಿ ಸಲುಗೆ ಏಕೆ ? ಸಂಧಾನವೇ ನಿಮಗೆ ಐಶ್ವರ್ಯ. ಜನರನ್ನು ಸಂಪಾದಿಸುವುದು ಅಸಾಧ್ಯ. ನೀವು ರಾಜರಾಗಿರಲು ಹೆಂಡಿರು ಅಪೂರ್ವವೇ ? ಇದೇ ನನಗೆ ಕೊನೆಯಲ್ಲಿ ಫಲಿತಾಂಶ.

ಹಿಂದೆ ಮುಂದಲೆಹಿಡಿದು ಎಳೆದು ಸಭೆಗೆ ನನ್ನನ್ನು ಕರೆತಂದು ಅಲ್ಲಿ ನನ್ನ ಸೀರೆಯನ್ನು ಶತ್ರುಗಳು ಎಳೆದಾಗ ಅವರೆದುರಿನಲ್ಲಿ ನನ್ನ ಪತಿಗಳು ಮಾತಾಡಿದರೆ ? ಕೃಷ್ಣಾ ! ಆಗ ನೀನು ಕಾಪಾಡಿದುದನ್ನು ಈಗ ಮರೆತೆಯಲ್ಲವೇ ? ಸಂಧಿಗಾಗಿ ನೀನು ಮುಂದುವರಿಯಬಹುದೇ ? ನನ್ನ ಐವರು ಮಕ್ಕಳು, ವೀರಸಹದೇವ, ಘಟೋತ್ಕಚ, ಅಭಿಮನ್ಯು, ನನ್ನ ತಂದೆ, ಆತನ ಮೂರಕ್ಷೌಹಿಣೀಸೇನೆ ಇಷ್ಟೇಮಂದಿ ಕಾದುತ್ತಾರೆ,

ದುಶ್ಶಾಸನನ ಕರುಳನ್ನು ಬಗೆದು ಕುರುಕುಲವನ್ನೇ ಸುಡುತ್ತಾರೆ. ನಿಮ್ಮ ಹಂಗೇಕೆ ?" ಎಂದು ದ್ರೌಪದಿಯು ಹೇಳಿದಳು.

ಭೀಮನ ಕೋಪಾಗ್ನಿ ದ್ರೌಪದಿಯ ನಿಟ್ಟುಸುರಿನ ಗಾಳಿಯಿಂದ ಉರಿಯಲು ಆರಂಭಿಸಿತು. ಆತನು ಶತ್ರುಗಳಮೇಲಿನ ರೋಷಾತಿರೇಕ ದಿಂದ ತುಟಿಗಚ್ಚಿ "ತರುಣಿ! ಸ್ಮರಿಸು ಸ್ಮರಿಸು. ನೀನು ಈಗ ಸುರಿ ಸಿದ ಕಣ್ಣೀರಿಗೆ ಶತಸಾವಿರಮಡಿಯಷ್ಟು ಕಣ್ಣೀರನ್ನು ಹಗೆಯ ಹೆಂಡಿ ರಲ್ಲಿ ಸುರಿಸುತ್ತೇನೆ" ಎಂದು ಬೆರಳಿಂದ ಮೀಸೆಯನ್ನು ಹುರಿಮಾಡಿ, ಎಡಗೈಯನ್ನೆತ್ತಿ ದ್ರೌಪದಿಯನ್ನು ಸಮಾಧಾನಪಡಿಸಿದನು. ಬಳಿಕ ಕೋಪದಿಂದ ಕಿಡಿಕಿಡಿಯಾಗಿ "ನರಕಮರ್ದನನೇ! ಕೇಳು, ಕುಲ ಗಿರಿಗಳನ್ನೇ ಕೀಳುತ್ತೇನೆ. ಕುರುಗಳ ಲಲಾಟಲಿಖಿತವನ್ನೇ ಅಳಿಸುತ್ತೇನೆ. ಕೌರವನರಿಗಳು ನನಗಿದಿರೇ ? ಧರ್ಮರಾಜನ ಮತವನ್ನೇ ಮೊದಲು ಅನುಸರಿಸಿದುದು ನಿಜ. ಆದರೆ ಐವರುಪತಿಗಳಲ್ಲಿ ಈ ದ್ರೌಪದಿಯ ಕಾರ್ಯ ನನ್ನದು. ನನಗೆ ಸಂಧಿಯು ಮತವಲ್ಲ. ಯುದ್ಧವೇ ಸರ್ವಸ್ವ. ನನ್ನ ಕೋಪಶ್ರಮಕ್ಕೆ ರಿಪುರುಧಿರಾಂಬುಪಾನವೇ ಫಲ, ಶತ್ರುಗಳನ್ನು ಸಂಹರಿಸಿ ಮಡದಿಗೆ ಅವರ ಕರುಳಿನ ದಂಡೆಯನ್ನು ಮುಡಿಸುತ್ತೇನೆ. ಆ ಸಹೋದರರ ರಕ್ತವನ್ನು ಶಾಕಿನಿಯರಿಗೆ ಕುಡಿಯಲು ಕೊಡುತ್ತೇನೆ. ಮುರರಿಪು! ನೀನು ಹೋಗಿ ಸಂಧಿಮಾಡು. ನಾಲ್ಕೂರುಗಳನ್ನು ಇವರಿಗೆ ಕೊಡಿಸು. ನಾನು ಕೌರವನಲ್ಲೇ ಎರಡು ಊರು(ತೊಡೆ)ಗಳನ್ನು ತೆಗೆದುಕೊಳ್ಳುತ್ತೇನೆ" ಎಂದನು.

೭ನೆಯ ಸಂಧಿ

ಪುನಃ ಭೀಮನು "ದೇವ! ನೀನು ಸಂಧಿಯನ್ನು ಮಾಡಿಸು. ನಾವು ಅದನ್ನು ಒಪ್ಪುವುದಿಲ್ಲ. ಈ ಸಹದೇವ, ಈ ಅಭಿಮನ್ಯು, ದ್ರೌಪದಿ, ಘಟೋತ್ಕಚ ಇವರ ಅಭಿಪ್ರಾಯವೇ ನನಗೂ ಸಮ್ಮತ. ಧರ್ಮ ರಾಜ ನಕುಲರೆಂದುದನ್ನು ನಾನು ಒಪ್ಪುವುದಿಲ್ಲ ಎಂದು ಹೇಳಿದನು.

ಅದಕ್ಕೆ ಕೃಷ್ಣನು "ನಿಮ್ಮಲ್ಲಿ ಕೆಲವರು ಸಂಧಾನವನ್ನೂ, ಮತ್ತೆ ಕೆಲವರು ಯುದ್ಧವನ್ನೂ ಸೂಚಿಸುತ್ತೀರಿ. ನಿಮ್ಮಲ್ಲೇ ನಿಶ್ಚಯವಿಲ್ಲದಿದ್ದರೆ ರಾಜಕಾರ್ಯವು ಹೇಗೆತಾನೆ ಆಗುತ್ತದೆ? ಧರ್ಮರಾಜ! ನೀನು ತಿಳಿದು ಹೇಳು. ಶತ್ರುಮಂಡಲಕ್ಕೆ ಪ್ರಯಾಣಮಾಡುತ್ತೇನೆ. ನಾನು ಹೆದರಿದವನಲ್ಲ" ಎಂದನು. ಇದನ್ನು ಕೇಳಿದ ಧರ್ಮರಾಜನು "ದೇವ! ನಾವು ತಿಳಿಸುವ ಐದು ಪಟ್ಟಣಗಳನ್ನು ಕೊಟ್ಟರೆ ಸಮಾಧಾನದಿಂದಿರು ವುದು. ಕೋಪಿಸಿದರೆ ಯುದ್ಧವನ್ನೇ ಮಾಡುವುದು. ಔಚಿತ್ಯಾನೌಚಿತ್ಯ ಗಳನ್ನು ತಿಳಿದು ನೀನೇ ನಿಷ್ಕರ್ಷೆಮಾಡು. ಇನ್ನು ಈ ನಿಧಾನವು

ಸಾಕು. 'ನಮ್ಮ ಅಭ್ಯುದಯ ನಿನ್ನ ಅಧೀನವಾಗಿದೆ'' ಎಂದು ಹೇಳಿದನು. ಕೊನೆಯಲ್ಲಿ, ಕೃಷ್ಣನು ಕೌರವನೊಡನೆ ಸಂಧಾನಕ್ಕಾಗಿ ಪ್ರಯಾಣಮಾಡಬೇಕೆಂದು ನಿಶ್ಚಯವಾಯಿತು. ಕೃಷ್ಣನೂ ಪ್ರಯಾಣಕ್ಕೆ ಅನುವಾದನು. ಶುಭಮುಹೂರ್ತದಲ್ಲಿ ದುಂದುಭಿ, ಶಂಖ, ಕಹಳೆ, ಮೃದಂಗ ಧ್ವನಿಗಳು ಮೊರೆಯುತ್ತಿರಲು ಗೋಬ್ರಾಹ್ಮಣರನ್ನು ಪ್ರದಕ್ಷಿಣೆಮಾಡಿ ಬ್ರಾಹ್ಮಣರನ್ನು ಸತ್ಕರಿಸಿ, ನಾಸಿಕಾನಿಲದಲ್ಲಿ ಚಂದ್ರೋದಯವನ್ನು ನೋಡಿ ಆತನು ಹೊರಟನು. ಸಾತ್ಯಕಿಯು, ಬಳಾಹಕ, ಸೈನ್ಯ, ಸುಗ್ರೀವ, ಮೇಘಪುಷ್ಪ ಎಂಬ ಈ ನಾಲ್ಕು ಅಶ್ವಗಳನ್ನೂ ಚಿನ್ನದ ರಥಕ್ಕೆ ಹೂಡಿ ಕೃಷ್ಣನ ಅಪ್ಪಣೆಯಂತೆ ಧನುಸ್ಸು, ಶಸ್ತ್ರ, ಸುದರ್ಶನ, ಕನಕಾಭರಣ, ಕವಚ, ಕೃಪಾಣಗಳನ್ನು ರಥದಲ್ಲಿ ಇರಿಸಿದನು. ತೇರಿನಲ್ಲಿ ಶ್ವೇತಚ್ಛತ್ರ ಚಾಮರಪತಾಕೆಗಳು ಪ್ರಕಾಶಿಸುತ್ತಿದ್ದುವು. ಸಾತ್ಯಕಿಯು ಆ ಹೊಂದೇರನ್ನು ಗಗನಕ್ಕೆ ಚಲಿಸಿದನು. ಕೃಷ್ಣನು, ತನ್ನನ್ನು ಬೀಳ್ಕೊಡಲು ಬಂದಿದ್ದ ಪಾಂಡವರ ಬಲವನ್ನು ಮರಳಲು ಅಪ್ಪಣೆಕೊಟ್ಟು ಧರ್ಮರಾಜ ಅರ್ಜುನ ನಕುಲ ಸಹದೇವರನ್ನೂ ಹಿಂತಿರುಗಿಸಿದನು. ಭೀಮನನ್ನು ಹಿಂತಿರುಗುವಂತೆ ಹೇಳಲು, ಆತನು ಕೃಷ್ಣನ ಸಮೀಪಕ್ಕೆ ಬಂದು ''ದೇವಾ! ಶತ್ರುಗಳೊಡನೆ ಯುದ್ಧವನ್ನೇ ಘಟಿಸು '' ಎಂದು ತಿಳಿಸಿ ಆತನಿಂದ ಭರವಸೆಯನ್ನು ಪಡೆದು ಹಿಂತಿಗಿರುದನು.

ಕೃಷ್ಣನು ದ್ರೌಪದಿಯನ್ನು ಮರಳುವಂತೆ ತಿಳಿಸಲು ಅವಳು ಆತನ ಅಂಘ್ರಿಕಮಲದಲ್ಲಿ ಹಣೆಚಾಚಿ ನಮಸ್ಕರಿಸಿ '' ದೇವ ! ನೀನು ಸಂಧಿಯನ್ನು ಘಟಿಸಬೇಡ. ನನ್ನ ಅಳಿವು–ಉಳಿವುಗಳೆರಡನ್ನೂ ನೀನೇ ಬಲ್ಲೆ. ನಾನು ಹೆಚ್ಚು ಕಷ್ಟಪಟ್ಟಿರುತ್ತೇನೆ. '' ಎಂದು ಹೇಳಿ ಚರಣದಲ್ಲಿ ಹೊರಳಾಡಿದಳು. ಆಗ ಕೃಷ್ಣನು '' ದ್ರೌಪದಿ ! ಏಳು. ಕಾಡಿನಲ್ಲಿ ನೀನು ಹೆಚ್ಚು ನವೆದಿದ್ದೀಯೆ. ನಿನ್ನ ಪತಿಗಳೂ ಮೋಸಗೊಂಡಿದ್ದಾರೆ. ಇದು ನನಗೆ ತಿಳಿದಿದೆ. ನಿನಗಾಗಿ ನಾನು ಈ ಎರಡು ಪಕ್ಷದವರಿಗೂ ಯುದ್ಧವನ್ನೇ ಮಾಡಿಸುತ್ತೇನೆ. ಯುದ್ಧಮಾಡಲು ನಿನ್ನ ಪತಿಗಳು ತಿರಸ್ಕರಿಸಿದ್ದೇ ಆದರೆ, ಶತ್ರುಗಳನ್ನು ನಾನೇ ಸೀಳಿ ಅವರ ಕರುಳನ್ನು ನಿನ್ನ ತುರುಬಿನಲ್ಲಿ ಮುಡಿಸದೇ ಹೋಗುತ್ತೇನೆಯೇ ? ದೇವಕಿಯ ಮೇಲಾಣೆ. ವಸುದೇವನ ಪಾದದಾಣೆ. ಅಬಲೆ ! ಕೇಳು ನಿನ್ನಾಣೆ. ನಾನು ಸಂಧಿಯ ನೆಪಮಾಡಿ ಶತ್ರುಗಳ ಭಾವವನ್ನೇ ಹುರಿಮಾಡುತ್ತೇನೆ. ಅವರಿಗೆ ಕೋಪವು ಉದ್ರೇಕವಾಗುವಂತೆ ಮಾಡಿ ಸಂಧಿಯನ್ನು ಮುರಿಯುತ್ತೇನೆ. ಇದನ್ನು ನೀನು ನಂಬು'' ಎಂದು ಆಕೆಗೆ ತಿಳಿಸಿದನು. ಬಳಿಕ ದ್ರೌಪದಿಯು ಹಿಂತಿರುಗಿದಳು.

ಕೃಷ್ಣನು ಬರುತ್ತ ದಾರಿಯಲ್ಲಿ ಭರದ್ವಾಜ, ಗೌತಮ, ಕಣ್ವ, ಕೌಶಿಕ, ಉರಗಮಾಲಿ, ಮತಂಗ, ಗಾರ್ಗ್ಯ, ಅಂಗಿರಸ, ನಾರದ, ಶುಕ,

ಪರಾಶರ, ಪರಶುರಾಮ, ಶ್ವೇತಕೇತುವೇ ಆದಿಯಾದ ಮುನಿಶ್ರೇಷ್ಠರನ್ನು ಕಂಡು ಅವರನ್ನು ಉಪಚರಿಸಿದನು ; ಅವರೆಲ್ಲ ಹಸ್ತಿನಾಪತಿಗೆ ಬರುತ್ತೇವೆಂದು ತಿಳಿಸಲು, ಅವರನ್ನೂ ಬರಹೇಳಿದನು. ಆ ಎಲ್ಲ ಮುನಿಗಳೊಡನೆ ಕೃಷ್ಣನು 'ಕುಶಸ್ಥಳನಗರಿಗೆ' ಬಂದು ದುರ್ಯೋಧನನಿಗೆ ತಾನು ಬಂದಿರುವ ಸುದ್ದಿಯನ್ನು ತಿಳಿಸಲು ದೂತರನ್ನು ಅಟ್ಟಿದನು. ದೂತರು ದುರ್ಯೋಧನನಿಗೆ ಕೃಷ್ಣನು ಬಂದಿರುವುದನ್ನು ಅರಿಕೆಮಾಡಿದರು.

ಧೃತರಾಷ್ಟ್ರನು, ಕೃಷ್ಣನು ಬಂದಿರುವ ಸುದ್ದಿಯನ್ನು ಕೇಳಿ ಸಂತೋಷಾತಿಶಯದಿಂದ ವಿದುರನಿಗೂ ತಿಳಿಸಿದನು. ಭಂಡಾರದಲ್ಲಿರುವ ಒಳ್ಳೆಯ ವಸ್ತುಗಳನ್ನು ಆಯಿಸಿ ತೆಗೆಸಿದನು. ಬಳಿಕ ಆತನು "ವಿದುರ ! ದುರ್ಯೋಧನನ್ನು ಬಿಟ್ಟು ಉಳಿದ ಕೃತಾರ್ಥರಾದ ರಾಜರೆಲ್ಲ ಕೃಷ್ಣನನ್ನು ಎದುರುಗೊಳ್ಳಲಿ. ಪಟ್ಟಣವನ್ನು ಬಾವುಟ ತೋರಣಗಳಿಂದ ಅಲಂಕರಿಸಲಿ. ನಳಿನವದನೆಯರು ಕಲಶಕನ್ನಡಿಗಳೊಡನೆ ಎದುರುಗೊಳ್ಳಲು ನಡೆಯಲಿ" ಎಂದು ಹೇಳಿದನು.

ಇದನ್ನು ಕೇಳಿ ದುರ್ಯೋಧನನು "ಅಪ್ಪ ! ಕೃಷ್ಣನು ನಮಗೆ ವೈರಿ. ಆಯ್ದು ತೆಗೆದಿರುವ ವಸ್ತುಗಳನ್ನು ಆತನಿಗೆ ಕೊಡಬೇಡ. ಸನ್ಮಾನಿಸಿದರೆಂದು ಆತನು ನಮ್ಮನ್ನು ಉಳಿಸುತ್ತಾನೆಯೇ ? ನಮ್ಮ ನಗರಿಗೆ ಬರಲಿ. ಆತನ ತುಂಟತನಕ್ಕೆ ಔಷಧಿ ನನಗೆ ತಿಳಿದಿದೆ. ಆತನನ್ನು ಬಿಗಿದು ಕೆಡಹುತ್ತೇನೆ" ಎಂದನು.

ದುರ್ಯೋಧನನ ಮಾತಿಗೆ ಭೀಷ್ಮನು ಕೋಪಗೊಂಡು "ಎಲೆ ಪಾತಕಿ ! ನೀನಲ್ಲವೇ ಕೃಷ್ಣನನ್ನು ಬಿಗಿಯುವವನು? ಮತ್ತೇನು ? ನಿನ್ನ ಸಾಹಸವನ್ನು ನಾನು ಬಲ್ಲೆ. ನೀನು ಹೇಳುವ ಮಾತನ್ನು ಕೇಳಿದರೆ ಸಾಕು, ಪಾಪವು ಬರುತ್ತದೆ." ಎಂದು ಹೇಳಿ ಸಭೆಯಿಂದ ತನ್ನ ಮನೆಗೆ ಹೋದನು.

ಧೃತರಾಷ್ಟ್ರನ ಆಜ್ಞೆಯಂತೆ ಪಟ್ಟಣವನ್ನು ಅಲಂಕರಿಸಿದರು. ದ್ರೋಣ, ಕೃಪ, ಭೀಷ್ಮ, ವಿದುರ, ಶಲ್ಯ ಮೊದಲಾದವರು ಪೂರ್ಣಕುಂಭವನ್ನು ಹೊತ್ತ ತರುಣಿಯರನ್ನು ಮುಂದಿಟ್ಟುಕೊಂಡು, ಗೌರವದಿಂದ ಸಕಲ ಮರ್ಯಾದೆಯೊಡನೆ ಕೃಷ್ಣನನ್ನು ಎದುರುಗೊಳ್ಳಲು ಹೋದರು. ದೂರದಿಂದಲೇ ಗರುಡಧ್ವಜವನ್ನು ಕಂಡು, ಎಲ್ಲರೂ ನಿರ್ಮಲಮನಸ್ಸಿನಿಂದ ಹಣೆಯಲ್ಲಿ ಬದ್ಧಾಂಜಲಿಪುಟರಾದರು. ಕೃಷ್ಣನ ದಿವ್ಯಮೂರ್ತಿಯ ಕಾಂತಿಕಡಲಿನಲ್ಲಿ ಜನರ ಕಣ್ಮನಗಳೆರಡೂ ಕ್ಷಣಕಾಲ ಮುಳುಗಿದುವು. ಎಲ್ಲರೂ ಕೃಷ್ಣನಿಗೆ ನಮಸ್ಕರಿಸಿದರು. ಕೃಷ್ಣನು ಎಲ್ಲರನ್ನೂ ಎಬ್ಬಿಸಿ, ಅವರೆಲ್ಲರ ಕುಶಲಪ್ರಶ್ನೆ ಮಾಡಿದನು. ಎಲ್ಲರಿಗೂ ವೀಳಯ ಕೊಟ್ಟು ಹಸ್ತಿನಾವತಿಗೆ ಬಂದನು.

ಹಸ್ತಿನಾವತಿಯ ಹೊರ ಉದ್ಯಾನವನದಲ್ಲಿ, ಗಿಳಿ, ದುಂಬಿ, ಹಂಸ, ಕೋಗಿಲೆ, ಕೊಳರ್ವಕ್ಕಿ, ಚಕ್ರವಾಕ, ನವಿಲು, ಪಾರಿವಾಳ ಇವುಗಳ ಇಂಪುಧ್ವನಿ ಕೇಳುವವರ ಮನಸ್ಸನ್ನು ಆಕರ್ಷಿಸುತ್ತಿತ್ತು. ಹೊಂಬಾಳೆ, ದ್ರಾಕ್ಷಿ, ತೆಂಗು, ಹಲಸು, ಕರ್ಪೂರ ಇವುಗಳ ಸೊಗಸು ನೋಡುವವರ ಮನಸ್ಸನ್ನು ಸೆಳೆಯುತ್ತಿತ್ತು. ತಂಗಾಳಿ ಬೀಸುತ್ತಿತ್ತು.

ಕೃಷ್ಣನು ಉಪವನವನ್ನು ನೋಡಿ ಹೊಗಳುತ್ತ ಹಸ್ತಿನಾಪುರವನ್ನು ಪ್ರವೇಶಿಸಿ ದುರ್ಯೋಧನನ ಅಗಣಿತೈಶ್ವರ್ಯವನ್ನು ಕಂಡು ತಲೆಬಾಗಿದನು. ಆನೆ ಕುದುರೆ ಕಾಲಾಳುಗಳ ಗುಂಪು ಸಾಲುಸಾಲಾಗಿ ಮೆಲ್ಲನೆ ಅಲಂಕರಿಸಿದ ಬೀದಿಗಳಲ್ಲಿ ಮುಂದೆ ಹೋಗುತ್ತಿರಲು, ಕೃಷ್ಣನೂ ಹಿಂದೆ ನಡೆದು ಧೃತರಾಷ್ಟ್ರನ ಅರಮನೆಗೆ ಬಂದನು. ಧೃತರಾಷ್ಟ್ರನು ಆತನನ್ನು ಎದುರುಗೊಂಡು ಬಂದು ಭಕ್ತಿಯಿಂದ ನಮಸ್ಕರಿಸಿ ಕಾಣಿಕೆ ಕೊಟ್ಟು ಕುಶಲಪ್ರಶ್ನೆ ಮಾಡಿದನು.

೮ನೆಯ ಸಂಧಿ

ಬಳಿಕ ಕೃಷ್ಣನು ದ್ರೋಣ, ಭೀಷ್ಮ, ಕೃಪರನ್ನು ಮನ್ನಿಸಿ ಕಳುಹಿಸಿದನು. ವಿದುರನಿಗೆ, ಆತನ ಮನೆಗೆ ಬರುವೆನೆಂದು ತಿಳಿಸಿ ವೀಳಯ ಕೊಟ್ಟನು. ಉಳಿದ ರಾಜರನ್ನೆಲ್ಲ ಸನ್ನೆಮಾಡಿ, ಕಳುಹಿಸಿದನು. ಗಾಂಧಾರಿಯನ್ನು ಕಂಡು ಕುಶಲಪ್ರಶ್ನೆಮಾಡಿ, ಕಾಣಿಕೆಯನ್ನು ಸ್ವೀಕರಿಸಿ ಆಕೆಗೆ ಉಡುಗೊರೆಯನ್ನು ಕೊಟ್ಟನು.

"ಕೃಷ್ಣನು ತನ್ನರಮನೆಗೆ ಬಾರದಿರನು" ಎಂದು ದುರ್ಯೋಧನನು ಸವಿಯೂಟಕ್ಕೆ ಅಣಿಮಾಡಿಸಿದ್ದನು. ಆಸನವನ್ನೂ ಅಲಂಕರಿಸಿದ್ದನು. ಮಡದಿಯರು ಹೊಂಗಳಸವನ್ನು ಹಿಡಿದು ಆತನನ್ನು ಎದುರುಗೊಳ್ಳಲು ಕಾದುನಿಂತಿದ್ದರು.

ಭೀಷ್ಮ ದ್ರೋಣ ಕೃಪ ಕರ್ಣಾದಿಗಳೂ, ತಮ್ಮತಮ್ಮ ಮನೆಗೆ ಕೃಷ್ಣನು ಬರುತ್ತಾನೆಂದು ಆತನನ್ನು ಎದುರುಗೊಳ್ಳಲು ಕಾದುನಿಂತಿದ್ದರು.

ಧೃತರಾಷ್ಟ್ರನಿಂದ ಬೀಳ್ಕೊಂಡ ಕೃಷ್ಣನು, ಕೌರವನ ಮನೆಯನ್ನು ದಾಟಿ ಭಾಗವತ ಶಿರೋಮಣಿಯಾದ ವಿದುರನ ಮನೆಯ ಕಡೆಗೆ ಬರುತ್ತಿದ್ದನು. ಕೃಷ್ಣನು ಎದುರಿಗೆ ಬರುತ್ತಿರುವುದನ್ನು ನೋಡಿದ ಜನರ ಮನಸ್ಸಿನ ಕತ್ತಲೆ ಮರೆಯಾಯಿತು. ಜನ್ಮಾಂತರದ ಪಾಪರಾಶಿಗಳು ನಶಿಸಿಹೋದುವು. ಮುನಿಗಳೊಡನೆ ಕೃಷ್ಣನು ನಿಜಶರಣನಾದ ವಿದುರನ ಮನೆಗೆ ಬರುತ್ತಿದ್ದನು. ಬೆವರಿದ ನಗುಮುಖ ಧೂಳಿನಿಂದ ಕೆಂಪಾದ ಸಿರಿಮುಡಿ ಮತ್ತು ಮೀಸೆ, ಬಿಸಿಲಿನ ಝಳಕ್ಕೆ ಬಾಡಿದ ತುಲಸಿಯ ದಂಡೆ ಇವುಗಳಿಂದ ಶೋಭಿಸುತ್ತಿದ್ದ ಕೃಷ್ಣನು ತನ್ನ ಮನೆಗೆ ಬರುತ್ತಿರುವುದನ್ನು ಕಂಡು, ತನ್ನನ್ನೇ ಮರೆತು ವಿದುರನು ಬೆವರಿದನು. ನಾರಾಯಣನ

ಪದದರ್ಶನದ ಹರ್ಷಾರ್ಣವದಲ್ಲಿ ಆತನ ಮನಸ್ಸು ದಾರಿತಪ್ಪಿತು. "ನಾರಾಯಣನನ್ನೇ ಸರ್ವದಾ ನೆನೆಯುತ್ತಿರುವ ಸನಕಾದಿಗಳಿಗೂ ಮನಗೊಡದ ಮಹಿಮಾತಿರೇಕನು ನನ್ನ ಮನೆಗೆ ಬರುತ್ತಿದ್ದಾನೆ. ಈ ಕಾರುಣ್ಯಾತಿಶಯವು ಹೊಸದಲ್ಲವೇ ?" ಎಂದು ಆತನು ಹಿಗ್ಗಿದನು.

ವೇದಗಳಿಗೂ ಸಿಕ್ಕದ, ಮುನಿಗಳಿಗೂ ಪ್ರತ್ಯಕ್ಷನಾಗದ, ಅನಾದಿ ಸಿದ್ಧನು ಬರಲು, ವಿದುರನು ಭಕ್ತಿಯಿಂದ ಆತನ ಚರಣಾರವಿಂದಗಳಲ್ಲಿ ಅಡ್ಡಬಿದ್ದು, ಮನದಣಿಯುವವರೆಗೂ ಕೃಷ್ಣನನ್ನು ನೋಡಿದನು. ಬೀದಿಯಲ್ಲೆಲ್ಲಾ ಆತನನ್ನು ಕೊಂಡಾಡುತ್ತ ಓಡಾಡಿದನು. ಹರ್ಷಾತಿರೇಕದಿಂದಲೂ ಭಕ್ತ್ಯತಿಶಯದಿಂದಲೂ, ಮೈಮರೆತು ವಸತಿಯನ್ನೇ ಮುರಿದೀಡಾಡಿ 'ವಿದುರನಿಗೆ ಭ್ರಮೆಯಾಯ್ತು' ಎಂದು ಗುಲ್ಲೇಳುವಂತೆ ಬೀದಿಯಲ್ಲಿ ಕುಣಿದಾಡಿದನು.

ಕೃಷ್ಣನು ಇದನ್ನುನೋಡಿ "ವಿದುರ! ಹಸಿದು ನಾನು ಇಲ್ಲಿಗೆ ಬಂದರೆ ನೀನು ಮನೆಯನ್ನು ಮುರಿದು ಈ ರೀತಿ ಕುಣಿದಾಡಿದರೆ ನನಗೆ ತೃಪ್ತಿಯಾಗುತ್ತದೆಯೇ? ದೊರೆಗಳು ಪ್ರಾರ್ಥಿಸಿದರೂ ಒಪ್ಪದೆ ನಾನು ಇಲ್ಲಿಗೆ ಬಂದಿದ್ದೇನೆ. ನಾಚಿಸಬೇಡ, ಬಾ" ಎಂದು ಮನೆಯನ್ನು ಪ್ರವೇಶಿಸಿದನು.

ವಿದುರನು ಕೃತ್ಯಾಕೃತ್ಯಭಾವವನ್ನು ಮರೆತು ಕೃಷ್ಣನ ಪದಾಬ್ಜದಲ್ಲಿ ಲೀನನಾಗಿ ಬೊಂಬೆಯಂತೆ ಚಲಿಸದೆ ಮೌನದಿಂದಿದ್ದನು.

"ಭಕ್ತನಿಗೆ ಒಲಿದು ತಾನೇ ಅವನಲ್ಲಿಗೆ ಬರುವುದು ಕರುಣದ ಘನತೆಯಲ್ಲವೇ?" ಎಂದು ಲೋಕ ಆಡುವಂತೆ ಪಾಲ್ಗಡಲಿನಲ್ಲೇ ಮಲಗಿರುವ ವಿಷ್ಣು ಆ ವಿದುರನ ಮನೆಯಲ್ಲಿ ಒಕ್ಕುಡಿತೆಹಾಲಿನಲ್ಲಿ ಹಸಿವನ್ನು ನೀಗಿದನು.

ಕೃಷ್ಣನ ಪಾದಾರವಿಂದಗಳ ಅಭಿಷೇಕದ ಪಯೋಬಿಂದುಗಳು ಕೌರವನ ಅರಮನೆಯನ್ನೆಲ್ಲ ವ್ಯಾಪಿಸುವಂತೆ ಕಡಲಾಗಿ ಹರಿದು ಬರಲು, "ಕ್ಷೀರಾಬ್ಧಿಯು ಮೇರೆಮುರಿದು ಕೃಷ್ಣನೊಡನೆಯೇ ಬಂದಿದೆ. ಇದು ಆಶ್ಚರ್ಯವಲ್ಲವೇ?" ಎಂದು ಹರ್ಷದಿಂದ ಭೀಷ್ಮಾದಿಗಳು ಹೊಗಳಿದರು. ಹೋದ ಪ್ರಾಣ ಮತ್ತೆ ಬಂದಂತೆ, ಕೃಷ್ಣನು ಬಂದಿರುವ ಸುದ್ದಿಯನ್ನು ಕುಂತಿಯು ಕೇಳಿ ಪುಳಕಿತಳಾಗಿ ಹರ್ಷಾತಿರೇಕದಿಂದ ಆತನನ್ನು ಕಾಣಲು ಬಂದಳು.

ಕುಂತಿಯು ಬರುವುದನ್ನು ಕಂಡು ಕೃಷ್ಣನು, ನರರಾಡುವ ನಾಟಕವನ್ನು ತಾನೇ ನಟಿಸಿ ತೋರಿಸುವಂತೆ ಮಂಚದಿಂದ ಕೂಡಲೇ ಇಳಿದು, 'ಹಿರಿಯರಿಗೆ ತಾನು ಹಿರಿಯ' ಎಂಬ ಗರ್ವತನವನ್ನು ಬಿಟ್ಟು ಕುಂತಿಗೆ ಕೈಮುಗಿದನು. ಇದನ್ನು ನೋಡಿ ಸನಕಾದಿಗಳು ಆಶ್ಚರ್ಯಚಕಿತರಾದರು.

ಕುಂತಿಯು ಅಮಿತಕರುಣಾಸಿಂಧುವಿನ ಪದಾಬ್ಜಗಳಿಗೆ ನಮಸ್ಕರಿಸಿ ಪುಳಕಿತಳಾಗಿ ಸುಖಸಮಾರಂಭದಲ್ಲಿ ಮುಳುಗಿ, "ವೇದಾಳಿಗಳಿಗೂ ಅಗಮ್ಯನಾದ ನೀನು ನಮಗೆ ಹೇಗೆ ಗೋಚರನಾದೆ?" ಎಂದು ಆತನನ್ನು ಸ್ತುತಿಸಿದಳು. ಬಳಿಕ, ದೇವಕಿ ವಸುದೇವ ಬಲದೇವ ಸುಭದ್ರೆ ಮೊದಲಾದ ಯಾದವರ ಕ್ಷೇಮಸಮಾಚಾರವನ್ನು ವಿಚಾರಿಸಿದಳು.

ಕೃಷ್ಣನು, ವಸುದೇವ ದೇವಕಿಯಾದಿಯಾಗಿ ಎಲ್ಲರ ಕುಶಲ ಸ್ಥಿತಿಯನ್ನೂ ಕುಂತಿಗೆ ತಿಳಿಸಿದನು. ಮತ್ತೆ ಆತನು "ಧರ್ಮರಾಜ, ಭೀಮ, ಪಾರ್ಥ, ನಕುಲ, ಸಹದೇವ, ದ್ರೌಪದಿ, ಅಭಿಮನ್ಯು, ಸುಭದ್ರೆ ಮೊದಲಾದವರೆಲ್ಲ ಸೌಖ್ಯದಿಂದಿದ್ದಾರೆ. ಮಿತ್ರರಾಜರ ಎಲ್ಲ ಸೇನೆಗಳೂ, ದ್ರುಪದನ ಅಕ್ಷೌಹಿಣೀಸೇನೆಯೂ ಪಾಂಡವರ ಸಹಾಯಕ್ಕಾಗಿ ಬಂದಿದೆ. ರಾಜಕಾರ್ಯದ ಬಳಕೆಯೂ ಉತ್ತಮವಾಗಿದೆ. ಕುಂತಿ! ಕೇಳು ಲೋಕದಲ್ಲಿ ಅದಿತಿ, ಕೌಸಲ್ಯೆ, ವಿನತೆ ಇವರು ಮಕ್ಕಳನ್ನು ಪಡೆದಿರುವುದು ಮಾತ್ರ ಹೇಗೆ ಫಲವೋ ಅಂತೆಯೇ ನಿನಗೂ ಮಕ್ಕಳನ್ನು ಹಡೆದಿದ್ದು ಮಾತ್ರ ಫಲ" ನಿನ್ನ ಮಕ್ಕಳು ದೃಢೈಕಸತ್ಯರು. ಹಿಂದೆ ಒಪ್ಪಿಕೊಂಡಂತೆ ಹದಿಮೂರು ವರ್ಷಗಳ ವನವಾಸದ ಅವಧಿಯನ್ನು ಕಳೆದಿರುತ್ತಾರೆ. ಈಗ ರಾಜ್ಯಾಭಿಲಾಷೆಯಿಂದ ಬಲವನ್ನು ಕೂಡಿಸಿರುತ್ತಾರೆ, ಅವರಿಗೆ ಈ ಕುಠಾರದುರ್ಯೋಧನನಿಂದ ಅರ್ಧರಾಜ್ಯವನ್ನು ಕೊಡಿಸುವುದಕ್ಕಾಗಿ ನಾನು ಬಂದಿರುತ್ತೇನೆ" ಎಂದು ಎಲ್ಲವನ್ನೂ ಕುಂತಿಗೆ ತಿಳಿಸಿದನು.

ಕುಂತಿಯು ಸಂತೋಷದಿಂದ ಕೃಷ್ಣನ ಅಮೃತಪ್ರಿಯವಚನವನ್ನು ಕೇಳುತ್ತ ಕಣ್ಣೀರಿನಿಂದ ನೆನೆದಳು. ಕುಂತಿಗೆ ಎಲ್ಲ ಸುದ್ದಿಯನ್ನೂ ತಿಳಿಸಿದ ಬಳಿಕ, ಕೃಷ್ಣನು ಕೌರವನ ಅರಮನೆಯ ಸಮಯವನ್ನು ತಿಳಿದು ಬರುವುದಕ್ಕಾಗಿ ವಿದುರನನ್ನು ಕರೆದು "ವಿದುರ! ಕೌರವನ ಅರಮನೆಗೆ ಈಗಲೇ ಹೋಗು. ಪಾಂಡವರಾಗಸಮುದಯನು ಬಂದಿದ್ದಾನೆಂದು ತಿಳಿಸು. ಕೌರವನು ಮಾಡುವ ನಯದ ಬಳವಿಗೆಯನ್ನೂ ತಾಗುಬಾಗಿನ ರೀತಿಯನ್ನೂ ನೋಡೋಣ" ಎಂದು ಆತನಿಗೆ ಹೇಳಿದನು. ವಿದುರನು ಹರಿಯ ಅಪ್ಪಣೆಯಂತೆ ಕೌರವನ ಅರಮನೆಗೆ ಬಂದನು.

ಬಳಿಕ ಆತನು ಮೂರ್ಖರಿಗೆ ಕಿರೀಟಪ್ರಾಯನಾದ ಕೌರವನನ್ನು ಕಂಡು "ರಾಜನೇ! ಕೃಷ್ಣನು ಸಭೆಗೆ ದಯಮಾಡಲು ಸಮಯವುಂಟೇ? ಎಂದು ಪ್ರಶ್ನಿಸಲು, ದುರ್ಯೋಧನನು "ಇಂದೇನು? ನಾಳೆ ಕಾಣಿಸಿಕೊಳ್ಳುತ್ತೇನೆ. ಶತ್ರುಗಳನ್ನು ರಕ್ಷಿಸುವ ಭಾರಹೊತ್ತಿರುವ ಈ ತಂತ್ರಿಯು ಸಂಧಾನಕಾರ್ಯಕ್ಕೆ ಬಾರದೇ ಇರುತ್ತಾನೆಯೇ? ಸಭಿಕರೇ! ನೋಡಿ. ಈ ನಾಡಿನಲ್ಲಿ ಆ ಪಾತಕಪಾಂಡವರು ಯಾವ ಆಟವಾಡಿದರೂ ಅದು ಭೂಮಿಯಲ್ಲೇ ಶ್ರೇಷ್ಠವೆನಿಸುತ್ತದೆ. ರೂಢಿಯಲ್ಲಿ ಆಚಾರ ಹಾಳಾಗುತ್ತಿದೆ. ಹಾದರದಲ್ಲಿ ಹುಟ್ಟಿದವರನ್ನು ಈ ಬೀಡಾಡಿ ಸೇರಿದ್ದಾನೆ"

ಎಂದು ಕರ್ಣನ ಕೈಯನ್ನು ತಟ್ಟಿದನು. ಬಳಿಕ "ವಿದುರ! ಆತನನ್ನು ನಾಳೆ ಬರಹೇಳು" ಎಂದು ತಿಳಿಸಿ ವಿದುರನನ್ನು ಕಳುಹಿಸಿ ಸಭೆಯನ್ನು ಮುಗಿಸಿದನು.

ಮಾರನೆಯ ದಿನ ಬೆಳಗ್ಗೆ ದುರ್ಯೋಧನನು ಒಡ್ಡೋಲಗವನ್ನು ರಚಿಸಿದನು. ಓಲಗಕ್ಕೆ ಎಲ್ಲ ಸಾಮಂತರನ್ನೂ ಕರೆಸಿದನು. ಕೌರವನ ಬಲಗಡೆ ಪಕ್ಕದಲ್ಲಿದ್ದ ಚಿನ್ನದ ಆಸನದಲ್ಲಿ ಗಾಂಧಾರಿಯೊಡನೆ ಧೃತರಾಷ್ಟ್ರನು ಕುಳಿತಿದ್ದನು. ಬಲಪಾರ್ಶ್ವದಲ್ಲೇ ಪರಾಕ್ರಮಿಯಾದ ಕರ್ಣ, ಭೀಷ್ಮ, ದುಶ್ಶಾಸನ, ಕೃಪ, ದ್ರೋಣ ಇವರೇ ಮೊದಲಾದವರು ಆಸನಗಳಲ್ಲಿ ಕುಳಿತಿದ್ದರು. ರಾಜನ ಎಡಗಡೆ ಶಕುನಿ, ಸೈಂಧವ, ಕಾಂಭೋಜ, ಭೂರಿಶ್ರವ, ಸುಲೋಚನ, ವೃಷಸೇನ ಮೊದಲಾದ ಪರಾಕ್ರಮಿಗಳು ಆಸನಗಳಲ್ಲಿ ಕುಳಿತಿದ್ದರು. ಕೌರವನ ನೂರುಮಂದಿ ಸಹೋದರರು ಎಡಪಾರ್ಶ್ವದಲ್ಲೂ, ಲಕ್ಷಣನೇ ಮೊದಲಾದ ನೂರುಮಂದಿ ರಾಜಕುಮಾರರು ಮುಂದೆಯೂ ಇದ್ದರು. ರಾಜನ ಎರಡುಕಡೆಗಳಲ್ಲೂ ತರುಣಿಯರು ಶ್ವೇತಚಾಮರವನ್ನು ಹಿಡಿದು ನಿಂತಿದ್ದರು. ಜಗಳವಿಲ್ಲದೆ ನೂಲಿನೆಳೆಯಿಂದಲೇ ಶತ್ರುರಾಜರ ತಲೆಯನ್ನು ಕತ್ತರಿಸುವ, ಸಾಮೋಪಾಯದಿಂದಲೇ ಶತ್ರುರಾಜರನ್ನು ಬೆದರಿಸುವ ಮಂತ್ರನಿಪುಣರಾದ ಮಂತ್ರಿಗಳು ಎಡಪಾರ್ಶ್ವದಲ್ಲಿ ಪ್ರಕಾಶಿಸುತ್ತಿದ್ದರು. ಇದಲ್ಲದೆ ಪಂಡಿತರು, ಗಮಕಿಗಳು, ಚತುರ್ಭಾಷಾವಿಶಾರದ ಕವಿಗಳು, ಭಟ್ಟರು, ರಾವುತರು, ಮಾವತರು, ರಾಯಭಾರಿಗಳು, ಸಭೆಯಲ್ಲಿ ನೆರೆದಿದ್ದರು. ಅರಸನ ಎಡಗಡೆ ಅಂತಃಪುರಸ್ತ್ರೀಯರೂ, ಪದ್ಮಿನಿ, ಚಿತ್ತಿನಿ, ಶಂಖಿನಿ, ಹಸ್ತಿನಿ ಸ್ತ್ರೀಯರೂ, ಕರ್ಣಾಟಕ ಮೊದಲಾದ ದೇಶದ ವನಿತೆಯರೂ ಇದ್ದರು.

ಕೌರವನು ತಿರುಗಿನೋಡಿದ ಕ್ಷಣದಲ್ಲೇ ಎಲ್ಲ ಸಾಮಂತರಾಜರೂ ತಲೆಬಾಗುತ್ತಿದ್ದರು. ಲಾಳ, ಮಾಳವ, ತುರುಕ, ಕೊಂಕಣ, ಗೌಳ, ಗುರ್ಜರ, ವಂಗ, ಹಮ್ಮೀರ, ಕಳಿಂಗ ದೇಶದರಸರು ದೊರೆಯ ಅಪ್ಪಣೆಯನ್ನೇ ಎದುರುನೋಡುತ್ತಿದ್ದರು. ಸಿತಚಾಮರವನ್ನು ತರುಣಿಯರು ಇಕ್ಕುತ್ತಿರಲು, ದುರ್ಯೋಧನನು ಕೃಷ್ಣನನ್ನು ಕಾಣಿಸಿಕೊಳ್ಳಲು ಸಭೆಯಲ್ಲಿ ಠೀವಿಯಿಂದ ಸಿಂಹಾಸನದ ಮೇಲೆ ಕುಳಿತಿದ್ದನು.

ಎಲ್ಲರೂ ಓಲಗದಲ್ಲಿ ನೆರೆದಿರಲು ಕೌರವನು "ಕೈತವಶಿಕ್ಷಾಗುರುವನ್ನು ಕರೆಯಿರಿ, ಬರಲಿ" ಎಂದು ಚಾರರಿಗೆ ಆಜ್ಞಾಪಿಸಿದನು. ಚಾರರು, ರಾಜನ ಅಣತಿಯಂತೆ ಕೃಷ್ಣನಲ್ಲಿಗೆ ಹೋಗಿ ಆತನಿಗೆ ನಮಸ್ಕರಿಸಿ "ದೇವ! ದೇವರ ಸಮಯವು" ಎಂದು ಬಿನ್ನಹಮಾಡಲು, ಕೃಷ್ಣನು ನಸುನಕ್ಕು "ಭಾವನವರು ಅಟ್ಟಿದರೇ? ಹರಹರ! ನಾವು ಬರುತ್ತೇವೆ." ಎಂದು ಅವರಿಗೆ ತಿಳಿಸಿ, ವಿದುರ! ಕೇಳು ರಾವಣನ ಸ್ಥಿತಿ ಈತನಲ್ಲಿ ಈಗ ನೆಲಸಿದೆ. ಖಳಮಾಯಾವಿದನಾದ ಈತನು ಸಾವಿಗೆ ಅಂಜುವನಲ್ಲ. ನಮ್ಮ ಮಾತು

ಈತನಲ್ಲಿ ನಡೆಯುವುದಿಲ್ಲ" ಎಂದು ಹೇಳಿ, ಮಂಚದಿಂದ ಇಳಿದು ಹೊರಟನು ಮುನಿಗಳು ಆಕಾಶದಲ್ಲಿ ಗುಂಪುಗುಂಪಾಗಿ ನೆರೆದರು. ಹಸ್ತಿನಾವತಿಯ ಜನರೆಲ್ಲ ಜತೆಯಲ್ಲೇ ಬರಲು ಕೃಷ್ಣನು ಕೌರವನ ಆಸ್ಥಾನಕ್ಕೆ ಬರುತ್ತಿದ್ದನು.

ಕೃಷ್ಣನ ಆಗಮನದಿಂದ ಹಸ್ತಿನಾನಗರಿಯ ಮಲವು ಹೋಗಿ ಪಟ್ಟಣವು ನಿರ್ಮಲವಾಯಿತು. ಕೃಷ್ಣನನ್ನು ನೋಡಿದವರ ಭವಬೀಜವೆಲ್ಲ ಬೆಂದುಹೋದವು. ತರುಣಿಯರು ಆತನನ್ನು ನೋಡಿ ನೋಡಿ ಸಂತೋಷದಿಂದ ಪುಳಕಿತರಾದರು.

ನೆನೆಯುವವರನ್ನು ರಕ್ಷಿಸುವವನೂ, ದೈತ್ಯಕುಲವನದಾವನೂ, ಅಘಹಾರಿಯೂ, ಭಕ್ತವತ್ಸಲನೂ, ಕರುಣಿಯೂ, ಭೂಭಾರವನ್ನಿಳುಹಲು ಮನುಜವೇಷಧಾರಿಯೂ ಆದ ಕೃಷ್ಣನು ಕೌರವವಾರಿಧಿಯನ್ನು ಮುಕ್ಕಳಿಸಲು ಕೌರವನ ಆಸ್ಥಾನಕ್ಕೆ ಬಂದನು.

ಕೃಷ್ಣನು ಬರಲು ಭೀಷ್ಮ ದ್ರೋಣ ಗೌತಮ ಅಶ್ವತ್ಥಾಮ ಮೊದಲಾದವರೆಲ್ಲ ಎದುರುಗೊಂಡು ಬಂದು ಆತನಿಗೆ ನಮಸ್ಕರಿಸಿದರು.

"ಸನಕಾದಿಗಳಿಗೂ ಮುನಿಗಳಿಗೂ ದೊರೆಯದ ನಿನ್ನ ಪದಕಮಲ ಸೇವೆ ನಮಗೆ ದೊರೆತಿದೆ. ನಾವಲ್ಲವೇ ಕೃತಾರ್ಥರು?" ಎಂದು ಭೀಷ್ಮನು ಪ್ರೀತಿಯಿಂದ ಹಸ್ತಲಾಘವ ಕೊಡಲು, ಮೇರುಪರ್ವತದ ಶಿಖರದಿಂದ ಮಿಂಚಿನೊಡನೆ ಮೋಡಗಳು ಭೂಮಿಗೆ ಇಳಿಯುವಂತೆ ಕೌಸ್ತುಭಪ್ರಭೆಯಿಂದ ಕೂಡಿದ ಶ್ಯಾಮಾಂಗನು ಕಾಂಚನರಥದಿಂದ ಇಳಿದನು.

ಸಭೆಯಲ್ಲಿದ್ದ ಎಲ್ಲರೂ ಬದ್ಧಾಂಜಲಿಗಳಾಗಿ ಕೃಷ್ಣನನ್ನು ನಮಸ್ಕರಿಸಿದರು. ಕುಮತಿ ದುರ್ಯೋಧನನು ಮಾತ್ರ ಸಿಂಹಾಸನವನ್ನು ಬಿಟ್ಟು ಕದಲಲಿಲ್ಲ.

ಸೆಣಸು ಸೇರದ ದೇವನು ಎದುರಿನಲ್ಲಿ ತಲೆಬಾಗದೆ ಸಿಂಹಾಸನದಲ್ಲೇ ಕುಳಿತಿದ್ದ ದುರ್ಯೋಧನನನ್ನು ಕಂಡು ನಸುನಕ್ಕು, ಅಂಗುಷ್ಠದ ತುದಿಯಿಂದ ನೆಲವನ್ನು ಒತ್ತಿದನು. ಕೂಡಲೇ ದುರ್ಯೋಧನನು ಕುಳಿತಿದ್ದ ಕಾಂಚನ ಪೀಠದ ಕೊಂಡಿ ಮುರಿಯಿತು. ಇದನ್ನು ನೋಡಿ ಗಗನದಲ್ಲಿ ನೆರೆದಿದ್ದ ದೇವತೆಗಳು 'ಆ' ಎಂದರು. ಮರುಕ್ಷಣದಲ್ಲೇ ಕೌರವನು ಉರುಳಿ ಬಂದು ಕೃಷ್ಣನ ಪಾದಗಳ ಮೇಲೆ ಬಿದ್ದನು.

ಆಗ ಕೃಷ್ಣನು "ದೊರೆಯೇ! ಸಿಂಹಾಸನದ ಮೇಲಿರದೆ ನೀನು ಬರಬಹುದೇ? ನಾನೇ ಬಂದು ಹರಸುತ್ತಿದ್ದೆ. ತಪ್ಪೇನು?" ಎನುತ್ತ ದುರ್ಯೋಧನನ ಮಸ್ತಕವನ್ನೆತ್ತಿದನು. ಭೀಷ್ಮನು ಹಸ್ತಲಾಘವ ಕೊಡಲು ಕೌರವರ ಸನ್ಮಾನವನ್ನು ಸ್ವೀಕರಿಸಿ ಕೃಷ್ಣನು ಸಿಂಹಾಸನದ ಮೇಲೆ ಕುಳಿತುಕೊಂಡನು. ಕೃಷ್ಣನ ಬಲಗಡೆ ಧೃತರಾಷ್ಟ್ರನು ಕುಳಿತಿದ್ದನು. ಎಡಗಡೆ ದುರ್ಯೋಧನನು ಕರ್ಣನೇ ಮೊದಲಾದವರೊಡನೆ ಕುಳಿತಿದ್ದನು. ಕೃಷ್ಣನ ಅಪ್ಪಣೆಪಡೆದು ಎಲ್ಲ ಋಷಿಗಳೂ ಕುಳಿತುಕೊಂಡರು.

ಬಳಿಕ ಭೀಷ್ಮನು ಜಲಪೂರ್ಣ ಹೊಂಗಲಶಗಳನ್ನು ತರಿಸಿ ಕೃಷ್ಣನ ಪಾದಯುಗವನ್ನು ತೊಳೆದು, ಪಾದೋದಕವನ್ನು ಶಿರಸ್ಸಿನಲ್ಲಿ ಧರಿಸಿದನು. "ಮಹಾನುಭಾವರ ಸಂದರ್ಶನದಿಂದ ನನ್ನ ಜನ್ಮವು ಸಾರ್ಥಕವಾಯಿತು" ಎಂದು ಕೈಮುಗಿದು, ಪರಶುರಾಮಾದಿಗಳನ್ನು ಸತ್ಕರಿಸಿ, ಗಂಧಾಕ್ಷತೆಗಳಿಂದ ಉಪಚರಿಸಿ ಎಲ್ಲರಿಗೂ ಆತನು ವೀಳಯವನ್ನು ಕೊಟ್ಟನು. ಆ ಬಳಿಕ ಕೃಷ್ಣನು "ಕುಶಲವೇ ಕುರುರಾಯ? ಬಾ ಮುಖದಲ್ಲಿ ದುಗುಡವೇಕೆ?" ಎಂದು ಪ್ರಶ್ನಿಸಿ ಕೌರವನನ್ನು ತನ್ನ ಸಮೀಪಕ್ಕೆ ಕರೆದನು.

ಅದಕ್ಕೆ ಕೌರವನು "ದೇವ! ಉತ್ತರಕೊಡಲು ನಾನು ಸಮರ್ಥನಲ್ಲ. ಭಾವತನದ ಸಲುಗೆಯಿಂದ ಮಾತಾಡಲು ಅವಕಾಶಕೊಟ್ಟರೆ ಹೇಳುತ್ತೇನೆ ಅವಧರಿಸಿ. ನೀವು ಬರುವಿರೆಂದು ಮಹಾವಿಲಾಸದಿಂದ ಷಡ್ರಸೋಪೇತವಾದ ಅಡಿಗೆಯನ್ನು ಸಿದ್ಧಪಡಿಸಿದ್ದೆನು. ನನ್ನ ಅರಮನೆಗೆ ಬರದೆ ವಿದುರನ ಮನೆಯಲ್ಲಿ ನೀವು ಊಟಮಾಡಿದಿರಿ. ಗೋವಳಿಗತನ ನಿಮ್ಮಲ್ಲಿ ತಪ್ಪಲಿಲ್ಲ. ಕೃಪ, ದ್ರೋಣ, ಭೀಷ್ಮ ಇವರ ಮನೆಯನ್ನು ಹೊಗದೆ, ಅವಿವೇಕಿ ತೊತ್ತಿನ ಮಗನಾದ ವಿದುರನ ಮನೆಯಲ್ಲಿ ಊಟಮಾಡಿದಿರಿ. ನಿಮ್ಮನ್ನು ಸಾಕಿದವನು ನಂದಗೋಪ; ಈ ಅನುಚಿತವರ್ತನೆ ಯೋಗ್ಯವಲ್ಲವೇ! ನಿಮಗೇಕೆ ರಾಯರ ಠೀವಿ?" ಎಂದು ಹೇಳಿದನು.

ಕೌರವನ ಬಿರುನುಡಿಗಳನ್ನು ಕೇಳಿ ವಿದುರನಿಗೆ ಕೋಪ ಬಂದಿತು. ಆತನು "ದುರುಳ! ನೀನು ನಿಂದಿಸಿದ ನುಡಿಗೆ ಪ್ರತ್ಯುತ್ತರವೇಕೆ? ನಿನ್ನ ತಾಯಿಗೆ ಮೊದಲು ಗಂಡನಾರು? ಹೇಳು. ನಾನು ತೊತ್ತಿನ ಮಗ ಹೌದು. ನೀನು ಅಜಪುತ್ರನಲ್ಲವೇ? ನಮ್ಮಿಬ್ಬರ ಕುಂದುಕೊರತೆಗಳು ಕೃಷ್ಣನಿಗೆ ತಿಳಿದೇ ಇದೆ. ನೀನು ನಿನ್ನ ಕೊರತೆಯ ಹಾನಿವೃದ್ಧಿಗಳನ್ನು ತಿಳಿದುಕೊಳ್ಳದೆ ಉಳಿದವರನ್ನೆಲ್ಲಾ ಏತಕ್ಕೆ ನಿಂದಿಸುತ್ತೀಯೆ? ಕೋಪೋದ್ರೇಕದಿಂದ ಭೀಮನು ನಿನ್ನ ತೊಡೆಗಳನ್ನು ಮುರಿಯುವ ಸಮಯದಲ್ಲಿ ನಿನ್ನನ್ನು ಕಾಪಾಡಬೇಕೆಂದು ಈ ಧನುಸ್ಸನ್ನು ಇಟ್ಟುಕೊಂಡಿದ್ದೆ. ನಿನ್ನಿಂದ ಅಡಿಸಿಕೊಂಡೂ ನಿನ್ನನ್ನು ಕಾಪಾಡಲೇ?" ಎಂದು ನಿರ್ಭಯವಾಗಿ ಹೇಳಿ, ಆತನು ಧನುಸ್ಸನ್ನು ಮುರಿದನು.

ಇದನ್ನು ನೋಡಿ ಕುರುಸೇನೆ ಕಳವಳಿಸಿತು. ಧೃತರಾಷ್ಟ್ರ ಮತ್ತು ಗಾಂಧಾರಿ ಇವರಿಬ್ಬರೂ ಮರುಗಿದರು. ರಾಜನಿಗೆ ದುಗುಡ ಹೆಚ್ಚಿತು. ಭೀಷ್ಮದ್ರೋಣರು ದುಃಖಿಸಿದರು. ಆಗ ಕೃಷ್ಣನು ವಿದುರನನ್ನು ಸಂತೈಸಿದನು. ಬಳಿಕ ಆತನು "ಕೌರವ! ಕೇಳು ನನ್ನ ಶೀಲವೇ ಬೇರೆ. ಪ್ರಿಯವಾದವರು, ವಿಪತ್ತಿನಲ್ಲಿ ಆಶ್ರಯಕೊಟ್ಟವರು ಇವರ ಮನೆಯಲ್ಲಿ ಊಟಮಾಡಬಹುದು. ಇದು ಜನಸಾಮಾನ್ಯಕ್ಕೂ ನಿಯತ. ನೀನು ನನಗೆ ಪ್ರಿಯನೂ ಅಲ್ಲ; ವಿಪದಾಶ್ರಯನು ಮೊದಲೇ ಅಲ್ಲ. ಹೀಗಿರುವಾಗ ನಿನ್ನ ಮನೆಯಲ್ಲಿ ಊಟಮಾಡುವುದು ಹೇಗೆ ಸಾಧ್ಯ?

ಹೇಳು ; ಶತ್ರುಗಳಿಗೆ ಊಟಮಾಡಿಸಲೂ ಬಾರದು ; ಶತ್ರುಗಳ ಮನೆಯಲ್ಲಿ ಊಟಮಾಡಲೂ ಬಾರದು. ಇದೇ ರಾಜನೀತಿ. ನೀನು ಪಾಂಡವರಿಗೆ ಶತ್ರು. ಪಾಂಡವರು ನನ್ನ ಜೀವನ. ಹೀಗಿರಲು ಹಗೆಯನ್ನು ಹೇಗೆ ನಂಬಲು ಸಾಧ್ಯ? ಹೇಳು" ಎಂದನು.

ಅದಕ್ಕೆ ಕೌರವನು "ಸಕಳಂಕಚಂದ್ರನು ವಾರಿಧಿಗೆ ಸೇರುತ್ತಾನೆ. ನೀನಾದರೋ ಅಖಿಳಗೋಪೀಜಾರ. ಜಾರೆಯ ಮಕ್ಕಳಿಗೆ ನೀನೇ ಜೀವ. ಇದರಲ್ಲಿ ತಪ್ಪೇನು? ಯಾರಾದರೇನು? ತಮ್ಮಂಥಹವರೊಡನೆಯೇ ಸೇರುತ್ತಾರಲ್ಲವೇ? ಪಾಂಡವರ ಮೇಲಿನ ನಿನ್ನ ಪ್ರೀತಿಗೆ ನಾನು ಹೆದರುವುದಿಲ್ಲ. ನೀನು ಬಂದ ಕಾರಣವೇನು? ಹೇಳು" ಎಂದನು.

೯ನೆಯ ಸಂಧಿ

ಇದನ್ನು ಕೇಳಿ ಕೃಷ್ಣನು ನಕ್ಕು "ದೊರೆಯೇ! ಕೇಳು. ಅವಧಿ ಕಳೆದಿದೆ. ಪಾಂಡವರು ನಿನ್ನವರು. ವನವಾಸದ ಪ್ರಯಾಸದಿಂದ ಅವರು ಬಹಳ ನವೆದಿದ್ದಾರೆ. ಅವರೊಡನೆ ಕೂಡಿಕೊಂಡಿರುವುದು ನಿನಗೆ ಒಳ್ಳೆಯದು. ಅರ್ಧರಾಜ್ಯವನ್ನು ಅವರಿಗೆ ಕೊಡು. ಈ ನಶ್ವರ ಜೀವನದಲ್ಲಿ ಪುರುಷಾರ್ಥವನ್ನು ಸಂಪಾದಿಸಲು ಕಲಿಯಬೇಕು. ಅರಸುತನದ ಮೋಹ ಹೆಚ್ಚಲು ಈಚಿನ ರಾಜರು ಮದಾಂಧರಾಗುತ್ತಾರೆ. ಐಶ್ವರ್ಯಮದವೆಂಬ ಕತ್ತಲೆ ಕಣ್ಣಿಗೆ ಕವಿದಿರಲು ,ಪರಮವಚನಾಂಜನದಿಂದ ಕತ್ತಲೆಯನ್ನು ಕಳೆದು ಪ್ರಜ್ವಲಿಸುವುದೇ ನೀತಿಕಾರರ ಕೆಲಸ. ಕೋಶ, ಬಲ, ತಂತ್ರ, ಹೆಚ್ಚಿದ ದೇಶ, ದುರ್ಗ, ಅಮಾತ್ಯ, ಮಿತ್ರಮಹೀಶಜನ ಈ ಸಪ್ತಾಂಗದಲ್ಲಿ ನಿನಗೆ ಮಿತ್ರಮಹೀಶ ಜನದ ಕೊರತೆ ಇದೆ. ಪಾಂಡವರು ಸಹಾಯಕ್ಕೆ ಬರಲು ಬಳಿಕ ನಿನ್ನನ್ನು ಎದುರಿಸುವವರೇ ಇಲ್ಲ. ಈ ಸಪ್ತಾಂಗವಲ್ಲಿ ಒಂದು ಕಡಿಮೆಯಾದರೂ ಜೀವಿಸುವುದೇ ಸಂದೇಹ? ಇದು ನಿನಗೆ ತಿಳಿಯದೇ? ನಿನಗೆ ರಾಜನೀತಿಯನ್ನು ಹೇಳುವ ಸಮರ್ಥರಾರೂ ಇಲ್ಲ. ಹಿತೈಷಿಗಳು ಹೇಳಿದರೆ ನೀನು ಅದರಂತೆ ನಡೆಯುವುದಿಲ್ಲ. ಕುರುಕುಲಮೌಳಿಯೇ! ನಯದಿಂದ ನಡೆ. ರಾಜನೀತಿಗೆ ಸಾಮೋಪಾಯವೇ ಮುಖ್ಯ. ರಾಜರ ಉನ್ನತಿಗೆ ಇದೇ ಮೂಲಬೀಜ. ಸಾಮ ತಪ್ಪಿದ ಮೇಲೆ ನೀತಿಯೂ ಹೋಗುತ್ತದೆ. ದಂಡೋಪಾಯವು ಸಾಮಾನ್ಯವಾದದ್ದು. ನೀನು ಮಾಡಿದ ಅಪಕಾರಗಳನ್ನೆಲ್ಲಾ ಪಾಂಡವರು ಮರೆಯುತ್ತಾರೆ. ನನಗೆ ತಿಳಿದಂತೆ ನಿನ್ನೊಡನೆ ಕೂಡಿ ಬದುಕುವ ಮಾತನ್ನೇ ಅವರು ಆಡುತ್ತಾರೆ; ಕಾಡಿನಲ್ಲಿದ್ದು ಬಹಳ ದುಃಖಿಸಿರುವ ಅವರಿಗೆ ನೀನು ಉಚಿತಮಾಡಿ ರಾಜ್ಯವನ್ನು ಕೊಡು. ಇದೇ ವಿದುರನಿಗೆ ಉತ್ಸವ; ಕೃಪನಿಗೆ ಸಂತೋಷ; ಭೀಷ್ಮನ ಇಚ್ಛೆ; ಧೃತರಾಷ್ಟ್ರನ ಅಭ್ಯುದಯ" ಎಂದು ನಯವಾಗಿ ನುಡಿದನು.

ಇದನ್ನು ಕೇಳಿ ಮತ್ತನಾದ ಆ ಖಳದುರ್ಯೋಧನನು ಮುಖ ತಿರುಗಿಸಲು ಆಸ್ಥಾನದಲ್ಲಿದ್ದ ಜನರೆಲ್ಲ ಬೆದರಿ ಅಲುಗಾಡದಿದ್ದರು.

ಕ್ಷತ್ರಿಯಕುಲಕುಠಾರನಾದ ಪರಶುರಾಮನು ಸಭಾವನದಲ್ಲಿ ಸಿಂಹಧ್ವನಿಯಂತೆ "ದುರ್ಯೋಧನ! ಕೃಷ್ಣನನ್ನು ಅಳಲಿಸಬೇಡ. ಲೋಭವು ಅತಿಶಯದ ನಿರ್ಬಂಧ. ಇದು ನಯಜ್ಞರಿಗೆ ತಕ್ಕುದಲ್ಲ" ಎಂದು ಗರ್ಜಿಸಿದನು. ಮತ್ತೆ ಭಾರ್ಗವನು "ದಂಬೋದ್ಭವನು ಗರ್ವದಿಂದ ನರನಾರಾಯಣರನ್ನು ಪ್ರತಿಭಟಿಸಿ ಕೆಟ್ಟನು. ಇವರಿಬ್ಬರಲ್ಲಿ ಅರ್ಜುನನೇ ನರ. ಕೃಷ್ಣನೇ ನಾರಾಯಣ. ಆದಕಾರಣ ಪಾಂಡವರ ವೈರವನ್ನು ಬಿಡು" ಎಂದು ಹೇಳಿದನು.

ಬಳಿಕ ಕಣ್ವನು "ರಾಜನೇ! ಪರಶುರಾಮನು ತಪ್ಪಿ ನುಡಿಯುವುದಿಲ್ಲ. ಈ ದರ್ಪವು ನಿನಗೆ ಒಳ್ಳೆಯದಲ್ಲ. ನೀನು ಅರ್ಧರಾಜ್ಯವನ್ನು ಪಾಂಡವರಿಗೆ ಒಪ್ಪಿಸು. ಹರಿಯು ಗರುಡನ ದರ್ಪವನ್ನೇ ಮುರಿಯಲಿಲ್ಲವೇ? ವೃಥಾ ಅಡ್ಡಿಮಾಡಿ ತೊಂದರೆಗೊಳಗಾಗಬೇಡ" ಎಂದು ಹೇಳಿದನು.

ಬಳಿಕ ನಾರದನು "ಕೌರವ! ಕಣ್ವನ ಮಾತು ಸತ್ಯ, ಕೃಷ್ಣನ ಮಹಿಮೆ ಘನವಾದುದು. ಇದನ್ನು ತಿಳಿದೂ ಗರ್ವಗ್ರಹಹಿಡಿದು ಮರುಳಾಗಬೇಡ. ಹಿಂದೆ ಅಹಂಕಾರಪಟ್ಟ ಗಾಲವನು ಗುರುದಕ್ಷಿಣೆಗಾಗಿ ಭೂಮಿಯನ್ನೆಲ್ಲಾ ಸುತ್ತಿ ಅದನ್ನು ಸಂಪಾದಿಸಿ ತರಲು ಸಾಧ್ಯವಾಗದಿರಲು ಆತನ ಗರ್ವವನ್ನು ವಿಶ್ವಾಮಿತ್ರನು ಮುರಿಯಲಿಲ್ಲವೇ? ನಿನ್ನ ಪೂರ್ವಿಕನಾದ ಯಯಾತಿಯು, ದೇವಲೋಕದಲ್ಲಿ ತನ್ನಂಥ ಧರ್ಮಿಷ್ಠರು ಯಾರಿರುವರೆಂದು ಅಹಂಕಾರಪಡಲು ದೇವತೆಗಳು ಸ್ವರ್ಗದಿಂದಲೇ ಆತನನ್ನು ತಳ್ಳಿದರಲ್ಲವೇ? "ಧರ್ಮಮಾರ್ಗವು ಸುಲಭ ಎಂದು ಹಮ್ಮಿನಿಂದ ಹೆಮ್ಮೆಪಟ್ಟು ಕೆಡಬೇಡ. ನೀತಿಯನ್ನು ನಂಬಿದವನು ಕೆಡುವುದಿಲ್ಲ" ಎಂದು ಹೇಳಿದನು.

ಪುನಃ ಕೃಷ್ಣನು "ದೊರೆಯೇ! ನಾನಾದರೋ ಪಾಂಡವರ ಕಡೆಯವನು. ಕಾಡಿನಲ್ಲಿ ಗೆಡ್ಡೆಗೆಣಸು ತಿಂದು ಇರುವ ಈ ಋಷಿಗಳಿಗೆ ರಾಜರ ಹಂಗೇನಿದೆ? ಇವರಿಗೆ ಯಾರಲ್ಲೂ ಪಕ್ಷಪಾತವಿಲ್ಲ. ಇವರ ಮಾತನ್ನು ಕೇಳು" ಎಂದು ತಿಳಿಸಿದನು.

ಕೃಷ್ಣನ ಮಾತನ್ನು ಕೇಳಿ ಆ ಖಳದುರ್ಯೋಧನನು ಮೀಸೆಯನ್ನು ಹುರಿಮಾಡಿ ನಸುನಕ್ಕು, ಕರ್ಣಾದಿಗಳ ಮುಖವನ್ನು ತಿರುಗಿ ನೋಡಿ ಹರಿಯ ಮಾತನ್ನು ಲೆಕ್ಕಿಸದೆ "ಮುರಾರಿ! ಮೂಢತನದ ಈ ಮಾತೇಕೆ? ನನಗೆ ಪಾಂಡವರ ಕಥೆಯನ್ನು ಹೇಳಬೇಡ; ಅದು ಕಿವಿಗಳಿಗೆ ಶೂಲ. ಅವರಿಗೆ ಮೊದಲು ಮಾವನ ಸಹಾಯ. ಮಧ್ಯದಲ್ಲಿ ವಿರಾಟನ ಸಖ್ಯ. ಕೊನೆಗೆ ನೀನು 'ಮಮ ಜೀವಾ ಹಿ' ಎನ್ನುತ್ತೀಯೆ. ಕಡೆಯಲ್ಲಿ ನಾವೇ ಹೊರಗು.

ನಮಗೆ ಯಾವ ರಾಜರ ಸ್ನೇಹವಿದೆ? ದೇವ! ನಮ್ಮನ್ನು ನಾಚಿಸಬೇಡ; ಸಂಧಿಯ ಮಾತನ್ನು ಮರೆ. ಪಾಂಡವರು ನಮ್ಮಲ್ಲಿ ಸರಸವಾಡುವ ರೀತಿ ಇದಲ್ಲದೆ, ನಿನ್ನೊಡನೆ ರಾಜಕಾರ್ಯವನ್ನು ಆಲೋಚಿಸಿ ಕಳುಹಿಸಿರುವ ಕ್ರಮವೇ? ಇದನ್ನು ನಾನು ಮೆಚ್ಚಲಾರೆ. ಯುದ್ಧ ಬೇಕಾದರೆ ಬೇಡಿ ಕೊಳ್ಳಬಹುದು. ಭೂಮಿಯ ಮಾತನ್ನು ಆಡುವುದಾದರೆ ಪಾಂಡವರೇತಕ್ಕೆ? ನಾವೇತಕ್ಕೆ? ಎಂದು ಹೇಳಿದನು.

ಅದಕ್ಕೆ ಕೃಷ್ಣನು "ದುರ್ಯೋಧನ! ಸಂಧಾನಕ್ಕೆ ಒಪ್ಪು. ನನ್ನ ಮಾತನ್ನು ಮೀರಬೇಡ. ದುಷ್ಟರಾಡುವ ಸವಿಮಾತುಗಳಿಗೆ ಮನಕೊಡ ಬೇಡ. ಚಾಡಿಕೋರರನ್ನು ಹತ್ತಿರ ಸೇರಿಸಬೇಡ. ಕೆಲಸಕ್ಕೆ ಬಾರದ ಬಾಯಿ ಮಾತಿನ ಸ್ನೇಹಿತರು ಹೇಳುವುದನ್ನು ಮಾಡಬೇಡ. ಪಾಂಡವರೊಡನೆ ಸೇರಿದರೆ ನಿನ್ನ ಬಾಳುವೆಗೆ ಹಿತಕರ. ಅವರಿಗೆ ಇಂದ್ರಪ್ರಸ್ಥದಲ್ಲಿ ರಾಜ್ಯವನ್ನು ಕೊಟ್ಟು ಪಾಂಡವಪ್ರತಿಷ್ಠಾಚಾರ್ಯನೆಂಬ ಬಿರುದನ್ನು ನೀನು ಧರಿಸಿದೆಯಾದರೆ ಭೂಮಿಯಲ್ಲಿ ನಿನಗೆ ಸಮಾನರಾದ ರಾಜರಾರೂ ಇರುವುದಿಲ್ಲ. ಈಗ ನಾನಾಡುವ ಈ ನುಡಿಗಳು ನಿನಗೆ ಕರ್ಣಕಠೋರ ವಾದರೂ ಕೊನೆಗೆ ಒಳ್ಳೆಯದೇ ಆಗುತ್ತದೆ. ನೀತಿಗೆ ಕೌರವವಂಶ ಆಲಯ; ಸಿರಿಯ ಖ್ಯಾತಿಗೆ ನೆಲೆ; ಸೌಖ್ಯಗಳಿಗೆಲ್ಲ ಬೀಜ ಎನಿಸಿದೆ. ನೀನು ಈ ಭೂಮಿಗೆ ಆಸೆಪಟ್ಟು ಕುಲಘಾತಕನೆಂಬ ಅಪಕೀರ್ತಿಗೆ ಗುರಿಯಾಗ ಬೇಡ. ಭೂಲೋಕದ ರಾಜರಿಗೆ ಹಸ್ತಿನಾಪುರದ ಅರಮನೆಯ ಬಾಗಿಲಲ್ಲಿ ಸಮಯವು ದೊರೆಯುವುದೇ ಪುಣ್ಯವೆಂದು ಪ್ರಸಿದ್ಧವಾಗಿರುವ ಈ ಸಾರ್ವಭೌಮತೆಯ ಸಂಪತ್ತಿಗೆ ಪಾಂಡವರು ಅನ್ಯರಾದರೆ? ನಿನ್ನ ಸಿರಿಯು ಮೆರೆಯಬಲ್ಲುದೇ? ದುಡುಕುತನವನ್ನು ಬಿಡು. ಧರ್ಮರಾಜನು ನಿನಗೆ ಹಿತವಂತ. ನಿನ್ನಲ್ಲಿ ಅರ್ಜುನನಿಗೆ ಮಮತೆ ಹೆಚ್ಚು. ಭೀಮನ ತಮದ ನುಡಿಯು ಈಗ ಹಿಂದಾಗಿದೆ. ನಕುಲನೂ ನಿನಗೆ ಪ್ರತಿ ಹೇಳುವುದಿಲ್ಲ. ಎಲ್ಲರೂ ನಿನ್ನ ಮಾತನ್ನೇ ಎದುರುನೋಡುತ್ತಾರೆ. ಭ್ರಾಂತನಾಗಬೇಡ. ಸೋದರರನ್ನು ಕಾಪಾಡು" ಎಂದು ಹೇಳಿದನು.

ಇದನ್ನು ಕೇಳಿ ದುರ್ಯೋಧನನು "ಕೃಷ್ಣ! ಧರ್ಮರಾಜನ ಮೋಹ ನಿನ್ನ ಪಾದಗಳಲ್ಲೇ ಇರಲಿ; ಭೀಮನ ಹೆಮ್ಮೆ ನಿನ್ನಲ್ಲೇ ಇರಲಿ; ಅರ್ಜುನನ ಪ್ರೇಮವೂ ಹಾಗೆಯೇ ಇರಲಿ. ನಮ್ಮ ಭೂಮಿಯಲ್ಲಿ ಅರ್ಧವನ್ನು ಬೇಡುವ ಅವರು ನಮಗೆ ಬಂಧುಗಳಲ್ಲ. ಸಂಧಿಗೆ ತಮ್ಮನು ಒಪ್ಪುವುದಿಲ್ಲ" ಎಂದು ದುಶ್ಶಾಸನನ ಮುಖವನ್ನು ನೋಡಿದನು.

ಕೂಡಲೇ ದುಶ್ಶಾಸನನು "ಕೃಷ್ಣ! ಸೂರ್ಯನೊಡನೆ ಅಂಧ ಕಾರವು ಸೇರುತ್ತದೆಯೇ? ಈ ಬಂಧುಕೃತ್ಯದ ಮಾತೂ ಅಂತೆಯೇ. ರಾಜಕಾರ್ಯದಲ್ಲಿ ನೀವು ನಿರ್ಬಂಧಪಡಿಸಿ ಏಕೆ ಮಾತಾಡುತ್ತೀರಿ?

ನಾವು ಸಂಧಿಗೆ ಒಪ್ಪುವುದಿಲ್ಲ. ಪಾಂಡವರ ಸಂಬಂಧವು ನಮಗೇತಕ್ಕೆ" ಎಂದು ಗರ್ಜಿಸಿದನು.

ಆಗ ಭೀಷ್ಮನು "ಕೌರವ! ಈ ಹರಿಯ ಮಾತನ್ನು ಕೇಳು. ದೈವದ ಪ್ರೀತಿ ತಪ್ಪಿದಮೇಲೆ ಸುಭಟರ ಸಾಹಸ ಪ್ರಯೋಜನಕಾರಿಯಲ್ಲ. ನಮ್ಮ ಪರಾಕ್ರಮವನ್ನು ನೆಚ್ಚಬೇಡ. ಕೃಷ್ಣನಾಡಿದ ಹಿತವಚನವನ್ನು ತ್ಯಜಿಸಬೇಡ. ಸೀತೆಯನ್ನು ಸೆರೆಗೆಯ್ದು ಸ್ವಾಮಿದ್ರೋಹಿಯಾದ ರಾವಣನನ್ನು ಹೋಲಬೇಡ" ಎಂದನು.

ಅನಂತರ ದ್ರೋಣನು "ದುರ್ಯೋಧನ! ನೆಲವನ್ನು ಬೇಡುವ ಪಾಂಡವರ ಭುಜಪರಾಕ್ರಮಕ್ಕೆ ಕೊರತೆಯಿಲ್ಲ. ನಿನಗೆ ನೀತಿಯನ್ನು ತಿಳಿಸಲು ಬಂದಿರುವ ಕೃಷ್ಣನೂ ಸಾಮಾನ್ಯನಲ್ಲ. ಕೃಷ್ಣನ ಅಪ್ಪಣೆಯಂತೆ ಪಾಂಡವರಿಗೆ ಅರ್ಧರಾಜ್ಯವನ್ನೊಪ್ಪಿಸು ; ಈ ವಿಲಾಸವನ್ನು ಕೆಡಿಸಬೇಡ" ಎಂದನು

ಅದನ್ನು ಕೇಳಿ ದುರ್ಯೋಧನನು "ನಾನು ಪಾಂಡವರಲ್ಲಿ ಅನೇಕ ಕೇಡುಗಳನ್ನು ಚಿಂತಿಸಿದೆ. ಮುಚ್ಚುಮರೆ ಏತಕ್ಕೆ? ರಾಜ್ಯದ ಆಸೆಯಿಂದ ಅವರನ್ನು ಕೆಡಿಸುವ ಮನಸ್ಸನ್ನೇ ಮಾಡಿದೆ. ಜೂಜುಗಾರನಂತೆ ಕಪಟದಿಂದ ನೆಲವನ್ನು ಅವರಿಂದ ತೆಗೆದುಕೊಂಡೆ. ಈಗ ಪಾಂಡವರಿಗೆ ವನವೇ ಗತಿಯಲ್ಲದೆ ಬೇರೆ ಉಂಟೇ ಕೃಷ್ಣ!" ಎಂದನು.

ಅದಕ್ಕೆ ಕೃಷ್ಣನು ನಕ್ಕು "ದುರ್ಯೋಧನ! ಕೇಳು, ಪಾಂಡವರು ಅಪಕೀರ್ತಿಗೆ ಅಂಜಿ ಸತ್ಯಕ್ಕಾಗಿ ವನವಾಸವನ್ನು ಅನುಭವಿಸಿದರು. ಇದರಿಂದ ಪಾಂಡವರ ಕುಲಕ್ಕೆ ಕುಂದೇ? ಈಗ ಅವರು ವನವಾಸವನ್ನು ಮುಗಿಸಿರುತ್ತಾರೆ. ರಾಜ್ಯದಲ್ಲಿ ಸಮಭಾಗ ಪಡೆಯುವ ಛಲವನ್ನು ಭೀಮನು ಬಿಡುತ್ತಾನೆಯೇ? ನೀನು ಕುಶಸ್ಥಳ, ವೃಕಸ್ಥಳ, ವಾಸಂತಿ, ವಾರಣಾವತ ಈ ನಾಲ್ಕುನಗರಿಗಳೊಡನೆ ನಿನ್ನ ಮನಸ್ಸಿಗೆ ತೋರಿದ ಒಂದು ಪಟ್ಟಣವನ್ನು ಪಾಂಡವರಿಗೆ ಕೊಡು. ನಾನು ಅವರನ್ನು ಒಪ್ಪಿಸುತ್ತೇನೆ. ಪ್ರತಿಭಟಿಸಬೇಡ" ಎಂದು ಹೇಳಿದನು.

ಆಗ ದುರ್ಯೋಧನನು "ಕೃಷ್ಣ! ಬೇಡಿದ ಒಂದೊಂದೂರು ನಮ್ಮ ನಾಡಿನ ತಲೆಮಂಡೆಗಳು. ಇವುಗಳ ಬೆಳವಣಿಗೆಯೇ ಹಸ್ತಿನಾನಗರ. ನಿನಗೆ ಬೇಡುವುದು ಗೊತ್ತಿದೆ. ನೀನು ಮಾನಿಷ್ಠ ; ಅದನ್ನುಆಡುವುದೇತಕ್ಕೆ? ನೀನು ನೆಲವನ್ನು ಎರಡೇ ಪಾದಗಳಿಂದ ಆವರಿಸಿದವನಲ್ಲವೇ? ನಿನಗೆ ನಾನು ಅಂಜುತ್ತೇನೆ. ನಿನ್ನನ್ನು ಕರೆದು ಮೂರಡಿನೆಲವನ್ನು ಧಾರೆ ಕೊಟ್ಟು ಬಲಿ ಪಾತಾಳಕ್ಕಿಳಿದ. ಇನ್ನು ಈ ನನ್ನ ರಾಜ್ಯದಲ್ಲಿ ಐದೂರುಗಳನ್ನು ಕೊಟ್ಟ ನನಗೆ ಏನುಗತಿಯಾಗುವುದೋ? ನೀನು ಪರಮಪುರುಷ. ನಿನಗೆ ನಾನು ಶರಣುಹೊಗುತ್ತೇನೆ. ಬಂದ ದಾರಿಯಲ್ಲೇ ಮರಳು" ಎಂದನು.

ಅದಕ್ಕೆ ಕೃಷ್ಣನು "ಕೌರವ! ನೀನು ಪಾಂಡವರಲ್ಲಿ ಎಸಗುವ ಕಪಟ ಬೆಳೆಯಲಿ. ಈ ನಿನ್ನ ಬಳಗವೇ ಬದುಕಲಿ. ಪಾಂಡವರು ಪುನಃ ನವೆಯಲಿ. ಐದುಮಂದಿಗೂ ಈ ನಿನ್ನ ಭೂಮಿಯಲ್ಲಿ ಯಾವುದಾದರೊಂದು ಸ್ಥಳವನ್ನು ಕೊಡು" ಎಂದು ಕೇಳಿದನು.

ಆಗ ದುರ್ಯೋಧನನು ಜಗದ್ರಕ್ಷಕನಾದ ಕೃಷ್ಣನನ್ನು ನಿಂದಿಸಿ 'ಕೃಷ್ಣ! ರಾಜ್ಯಾರ್ಧವನ್ನು ಕೊಡುವುದಿಲ್ಲ. ಐದೂರುಗಳನ್ನು ಕೊಡುವ ವಿಚಾರ ಮೊದಲೇ ಇಲ್ಲ. ನನ್ನ ಭೂಮಿಯಲ್ಲಿ ಭಾಗವನ್ನು ಕೊಡಲಾರೆ. ಇದಕ್ಕಾಗಿ ಹೊಗಳಿಕೆ ಏತಕ್ಕೆ? ನನ್ನ ಭೂಮಿಯಲ್ಲಿ ಅವರಿಗೆ ಮುಳ್ಳುಮೊನೆಯಷ್ಟನ್ನು ಕೊಟ್ಟಿದ್ದೇ ಆದರೆ ಆಗ ನೀನು ನಗು; ಹೋಗು. ಯುದ್ಧ ಮಾಡಲು ಅವರನ್ನು ಕರೆದುಕೊಂಡು ಬಾ. ದನಕಾಯುವುದು ತೀರಿತೇ? ವನವನಗಳಲ್ಲಿ ಅಲೆಯುವುದು ಮುಗಿಯಿತೇ? ಮುನಿಗಳ ನಮಸ್ಕಾರವನ್ನೂ, ಪಾಲ್ಗಡಲಿನಲ್ಲಿ ಶೇಷಶಾಯಿಯಾಗಿರುವುದನ್ನು ಬಿಟ್ಟು ಈಗ ನೀನು ನಮ್ಮ ವೈಷಮ್ಯವನ್ನು ತಿದ್ದುವುದಕ್ಕಾಗಿ ಬಂದಿರುತ್ತೀಯೆ" ಎಂದನು.

ಆಗ ವಿದುರನು, "ಕೊನೆಯಲ್ಲಿ ಧೃತರಾಷ್ಟ್ರನು ಪತ್ನಿಯೊಡನೆ ಅನಾಥನಾಗಿ ಕೆಡುತ್ತಾನೆನ್ನುವುದು ನನಗೆ ತಿಳಿದಿದೆ. ಆ ಪಾಂಡವರ ರಾಜ್ಯದಲ್ಲಿ ಪಡಿಗಾಗಿ ಭೀಮನ ಸಮಯವನ್ನು ಕಾಯದಿರಬೇಕಾದರೆ, ನೀನು ಕೃಷ್ಣನು ತಿಳಿಸಿದಂತೆ ನಡೆಯಲೇಬೇಕಾಗುತ್ತದೆ" ಎಂದನು.

ವಿದುರ ಭೀಷ್ಮ ಧೃತರಾಷ್ಟ್ರಾದಿಗಳು ದುರ್ಯೋಧನನನ್ನು ಒತ್ತಾಯ ಮಾಡಲು ಮನಸ್ಸುಮಾಡಿದ ಸಂಕೇತದ ಸುಳಿವನ್ನು ದುಶ್ಶಾಸನನು ತಿಳಿದು ದುರ್ಯೋಧನನಿಗೆ ಆ ಸುದ್ದಿಯನ್ನು ತಿಳಿಸಿ ದುಃಖಿಸಿ "ಅಣ್ಣ! ಹೆತ್ತವರೂ ಮರಳಾಗಬಹುದೇ? ನಾವು ಎಲ್ಲಿಗೆ ಹೋಗುವುದು? ರಾಜಕಾರ್ಯದ ಸ್ಥಿತಿ ಬಲಗುಂದಿದೆ. ಮುತ್ತಯ್ಯ, ಕಿರಿಯಯ್ಯ, ಅಯ್ಯ ಇವರ ಮನಸ್ಸು ವಕ್ರವಾಗಿದೆ. ಸಾಕು ಸುಮ್ಮನಿರು" ಎಂದು ಅಣ್ಣನೊಡನೆ ಸಭೆಯಿಂದ ಹೊರಟನು.

ಕೋಪಗೊಂಡು ಹೊರಟ ದುರ್ಯೋಧನದುಶ್ಶಾಸನರು ಪಕ್ಕದ ಅರಮನೆಯಲ್ಲಿ ಸೌಬಲ ಕರ್ಣರೊಡನೆ ಮುಂದೆ ಮಾಡಬೇಕಾದ ಕಾರ್ಯವನ್ನು ಆಲೋಚಿಸಿದರು. ಬಳಿಕ ದುರ್ಯೋಧನನು, "ಕೃಷ್ಣನು ದುರ್ಮಂತ್ರದಿಂದ ತಂದೆಗೆ ಕೋಪಬರುವಂತೆ ಮಾಡಿರುತ್ತಾನೆ. ಕಲಿಗಳು ಆತನನ್ನು ಕಟ್ಟಲಿ. ಎರಡು ಪಕ್ಷದ ಬಲವನ್ನೂ ಮಸೆದು ಕೊಲ್ಲಿಸುವ ಕೆಲಸ ಆತನದು. ಯೋಚಿಸಿ ನೋಡಿದರೆ ಕೃಷ್ಣನೇ ನಮಗೆ ಶತ್ರುವಲ್ಲದೆ ಪಾಂಡವರೇ? ಆತನನ್ನು ಹುರಿನೇಣುಗಳಿಂದ ಕಟ್ಟಿದರೆ ಅವರು ಕೋಪಿಸಿ ಏನುತಾನೆ ಮಾಡಬಲ್ಲರು?" ಎಂದನು.

"ಗಾಳಿಯು ಶಾಂತವಾದರೆ ಬೆಂಕಿಜ್ವಾಲೆಯು ತಾನೇ ಅಡಗುತ್ತದೆ. ಕೃಷ್ಣನ ತೋಳನ್ನು ಬಿಗಿದರೆ ಬಳಿಕ ಪಾಂಡವರು ಹೆದರುತ್ತಾರೆ. ಹಗ್ಗ

ಗಳನ್ನು ಸಿದ್ಧಪಡಿಸಿ" ಎಂದು ದುರ್ಯೋಧನನ ಕೂಡ ಇದ್ದವರು ಹೇಳುತ್ತಿದ್ದುದನ್ನು ಸಾತ್ಯಕಿಯು ಕೇಳಿ ಅದನ್ನು ಕೃತವರ್ಮನಿಗೂ ತಿಳಿಸಿದನು. ಬಳಿಕ ಆತನು ಆಳು ಕುದುರೆಯನ್ನು ಬಾಗಿಲಿಗೆ ಬರಹೇಳಿ "ವೀರಭಟರು ಸಾಯುಧರಾಗಿ ಹತ್ತಿರ ನಿಲ್ಲಲಿ. ಕೈಬೀಸಿದರೆ ಮೇಲೆ ಬಿದ್ದು ಗಂಡಿನ ಮೇಲೆ ಗಂಡನ್ನು ಕಡಿದು ಕೌರವನ ನೊರೆನೆತ್ತರಿನಲ್ಲಿ ಭೂಮಿಯನ್ನು ನಾದಲಿ" ಎಂದು ಭಟರಿಗೆ ತಿಳಿಸಿ, ಕೃಷ್ಣನ ಕಿವಿಯಲ್ಲಿ ಈ ಸುದ್ದಿಯನ್ನು ಹೇಳಿದನು.

ಇದನ್ನು ತಿಳಿದ ಭೀಷ್ಮನು "ದೇವ ! ಮಂದಮತಿಗಳು ದಾರಿತಪ್ಪಿದ್ದಾರೆ. ಮನಗುಂದಬೇಡ" ಎಂದು ಕೃಷ್ಣನಿಗೆ ತಿಳಿಸಿದನು. ಅದಕ್ಕೆ ಕೃಷ್ಣನು ನಗುತ್ತ "ಭೀಷ್ಮ ! ಸತ್ಪುರಷರ ಮನಸ್ಸು ಪರಿಣತಪ್ರೌಢಿಗಳಿಗೆ ಕರಗುತ್ತದೆ. ಮೂಢರ ಮನಸ್ಸಾದರೋ ನಿಷ್ಠುರತೆಗಲ್ಲದೆ ಬಗ್ಗುವುದಿಲ್ಲ. ಚಂದ್ರಕಾಂತಶಿಲೆಯು ಚಂದ್ರನ ಕಿರಣತಾಗಲು ಕರಗುತ್ತದೆ. ಗಿರಿಗಳಾದರೋ ವಜ್ರಹತಿಗಲ್ಲದೆ ಅಳುಕುವುದಿಲ್ಲ. ದೊರೆಗಳಿಗೆ, ದೂತರನ್ನು ಕಟ್ಟುವುದು ಯಾವ ನ್ಯಾಯ ? ನನ್ನನ್ನು ಕಟ್ಟಲು ನಿನ್ನ ಮೊಮ್ಮಕ್ಕಳು ಕಾತರಿಸುತ್ತಿದ್ದಾರೆ. ಅವರನ್ನು ನೀನು ಕರೆಸಿ ಮಾತಾಡಿಸಿ ನೋಡು. ನನಗೇನೂ ಹೆದರಿಕೆಯಿಲ್ಲ" ಎಂದು ಹೇಳಲು, ಭೀಷ್ಮನು ಧೃತರಾಷ್ಟ್ರನಿಗೆ ಕೌರವನ ಸ್ಥಿತಿಯನ್ನು ತಿಳಿಸಿದನು.

ಧೃತರಾಷ್ಟ್ರನು ಅದನ್ನು ಕೇಳಿ ಕೋಪಿಸಿ "ಶಿವ ಶಿವ, ವಿದುರ ! ಕೌರವನನ್ನು ಕೂಗು. ಆತನು ಮಗನೇ? ಭರತವಂಶಕ್ಕೆ ಮೃತ್ಯುವಲ್ಲವೇ? ಗಾಂಧಾರಿಯನ್ನು ಬರಹೇಳು. ಮಗನಾಟವನ್ನು ನೋಡಲಿ" ಎಂದನು.

ರಾಜನ ಅಪ್ಪಣೆಯಂತೆ ದುರ್ಯೋಧನನ್ನು ಸಭೆಗೆ ಕರೆತಂದರು. ಗಾಂಧಾರಿಗೆ ಈ ಸುದ್ದಿಯನ್ನು ತಿಳಿಸಲು ಆಕೆಯೂ ಕೂಡಲೇ ಬಂದು, ಮಗನನ್ನು ನೋಡಿ ಕೋಪಿಸಿ "ಮಗನೇ ! ಕೃಷ್ಣನನ್ನು ಕಟ್ಟುವೆಯಲ್ಲವೇ? ನಿನ್ನನ್ನು ಹೆತ್ತ ನನಗೆ ಸಂತೋಷವನ್ನುಂಟುಮಾಡಿದೆ" ಎಂದು ಹೇಳಿ ಧೃತರಾಷ್ಟ್ರನನ್ನು ಕುರಿತು "ರಾಜನೇ ! ಇದು ನೀನು ನೆಟ್ಟ ನೆಲೆ, ನೀನಿಟ್ಟ ಕಿಚ್ಚು. ಈ ಬಾಳುಗೆಟ್ಟವನನ್ನು ಹುಟ್ಟಿದಾಗಲೇ ಬಿಸುಡಹೇಳಬಾರದೇ? ಇವನು ಕೃಷ್ಣನನ್ನು ಕಟ್ಟುವನಲ್ಲವೇ? ಗಗನದ ಮೈ ಮುಟ್ಟುತ್ತಾನಲ್ಲವೇ ? ಇವನ ದಿಟ್ಟತನವನ್ನು ನಾನು ಏನು ಹೇಳಲಿ" ಎಂದಳು.

ಬಳಿಕ ಧೃತರಾಷ್ಟ್ರನು "ಮರುಳುಮಗನೇ ! ಕೃಷ್ಣನನ್ನು ನೀನು ಕೆರಳಿಸಬಹುದೇ ? ಯಾದವರು ನಮಗೆ ಅನ್ಯರೇ ? ವಸುದೇವ ನಮ್ಮಲ್ಲಿ ಭೇದವೇ ? ಈ ಹುಡುಗುತನ ಬೇಡ. ದುಷ್ಟರ ಸಹವಾಸದಲ್ಲಿದ್ದರೆ ನಿನಗೆ ನರಕ ತಪ್ಪದು" ಎಂದು ದುರ್ಯೋಧನನಿಗೆ ಹೇಳಿದನು.

ಆಗ ವಿದುರನು ಕೋಪದಿಂದ "ಎಲೆ ಮರುಳು ಧೃತರಾಷ್ಟ್ರ ! ನಿನ್ನ ಮಗನನ್ನು ಬೇಡಿಕೊಳ್ಳಲೇಕೆ ? ಕೋಪದಿಂದ ನಾಯಿ ಬಗುಳಿದರೆ ಚಂದ್ರನ್ನು

ಅಳುಕುತ್ತಾನೆಯೇ? ನರಿಯ ಕೂಗಿಗೆ ಸಿಂಹವು ಕಳವಳಿಸುತ್ತದೆಯೇ? ನೊರಜು ಹೊಕ್ಕರೆ ಸಾಗರದ ನೀರು ಕದಡುತ್ತದೆಯೇ? ನೊಣಗಳು ಮೇಲೆ ಬಿದ್ದರೆ ಕುಲಪರ್ವತಗಳು ಅಲ್ಲಾಡುತ್ತವೆಯೇ? ಕೊಬ್ಬಿದ ನೀರು ಹಾವಿನ ಮರಿಗೆ ಗರುಡನು ಹೆದರಿ ಹಿಂಜರಿಯುತ್ತಾನೆಯೇ? ನಿನ್ನ ಮಕ್ಕಳ ದೌಷ್ಟ್ಯಕ್ಕೆ ಮುರರಿಪು ಹೆದರುತ್ತಾನೆಯೇ? ಈತನು ಸಾಮಾನ್ಯನಲ್ಲ. ಪರಬ್ರಹ್ಮಸ್ವರೂಪನು. ಸೃಷ್ಟಿಕರ್ತನಾದ ಬ್ರಹ್ಮನೂ ಈತನ ಹೊಕ್ಕುಳಿನಿಂದ ಹುಟ್ಟಿಬಂದವನು. ಈತನ ವಚನವೇ ಪರಮತತ್ತ್ವ. ಇವನೇ ಲೀಲೆಯಿಂದ ಜಗತ್ತನ್ನು ಸೃಷ್ಟಿಸುವವನು. ಜಗತ್ಸೃಷ್ಟಿಕರ್ತೃವಾದರೂ ತಾನು ಸಂಗಿಯಲ್ಲ; ಜಗತ್ಸಂಹಾರಕನಾದರೂ ನಿಷ್ಕರುಣಿಯಲ್ಲ. ಎಲ್ಲರನ್ನು ಸಂರಕ್ಷಿಸಿದರೂ ಈತನು ನಿರ್ಲಿಪ್ತನು. ಚರಾಚರಗಳಿಗೆ ಈತನೇ ಚೈತನ್ಯಾಂಗನು. ಘನಕ್ಕೆ ಘನನೂ, ಅಣೋರಣೀಯನೂ, ಪರಾತ್ಪರನೂ, ಸೂರ್ಯ ಚಂದ್ರ ವಾಯು ಅಗ್ನಿಗಳಿಗೆ ಜೀವನೂ ಈತನೇ. ತ್ರಿಮೂರ್ತಿಗಳು ಹುಟ್ಟಿದುದು ಈತನ ಲೀಲೆಯಿಂದಲೇ. ಮಧುಕೈಟಭರನ್ನು ಕೊಂದವನೂ, ಸಮುದ್ರದಲ್ಲಿಳಿದು ವೇದಗಳನ್ನು ತಂದವನೂ, ಜಯ ವಿಜಯ ಪೌಂಡ್ರಕ ಹಂಸ ಡಿಬಿಕರನ್ನು ಸಂಹರಿಸಿದವನೂ, ಶ್ರುತಿಗಳಿಗೆ ಅಗೋಚರನೂ, ಬ್ರಹ್ಮಾಂಡವನ್ನೇ ಉದರದಲ್ಲಿ ಧರಿಸಿರುವವನೂ ಈತನೇ. ನೀಚರಾದ ಈ ಕರ್ಣಾದಿ ದುಷ್ಟಮಂತ್ರಿಗಳಿಗೂ, ಮುನಿಗಳಿಗೂ ಅಗೋಚರನಾದ ಈತನನ್ನು ಕಟ್ಟಲು ಸಾಧ್ಯವೇ?" ಎಂದು ಭಗವಂತನ ಲೀಲೆಯನ್ನು ಧೃತರಾಷ್ಟ್ರನಿಗೆ ಹೇಳುತ್ತಿರುವಾಗಲೇ ಕೃಷ್ಣನು ಮೈಮುರಿಯಲು, ಮಿಂಚಿನ ಗುಂಪುಗಳು ಒಟ್ಟಿಗೆ ಸೇರಿದಂತೆ ನೂರುಸೂರ್ಯರ ಕಾಂತಿ ಆತನ ದೇಹದಿಂದ ಪ್ರವಾಹದಂತೆ ಹೊರಟು, ಸಭೆಯನ್ನು ವ್ಯಾಪಿಸಿತು. ಕೂಡಲೇ ಹರಿಯು ಆ ಮಹಾಸಭೆಗೆ ವಿಶ್ವರೂಪವನ್ನು ತೋರಿಸಿದನು. ಹರಿಯ ಚರಣದ ಅಂಗುಷ್ಠದಲ್ಲಿ ದೇವತೆಗಳು, ಹಣೆಯಲ್ಲಿ ಬ್ರಹ್ಮ, ಎದೆಯಲ್ಲಿ ರುದ್ರ, ಮುಖದಲ್ಲಿ ಅಗ್ನಿವಾಯುಗಳು, ಬೆರಳಲ್ಲಿ ಇಂದ್ರಾದಿಗಳು, ಕಣ್ಣಿನಲ್ಲಿ ಸೂರ್ಯ, ನಾಭಿಯಲ್ಲಿ ನಭ, ಭುಜಾಗ್ರದಲ್ಲಿ ದಿಕ್ಪಾಲಕರು, ರೋಮರೋಮಗಳಲ್ಲಿ ಸುರರು, ಖಚರರು, ಕಿನ್ನರರು, ಕಿಂಪುರುಷರು, ಸಿದ್ಧರು, ವಿದ್ಯಾಧರರು, ವಸುಗಳು, ಮನುಗಳು, ಆದಿತ್ಯರು, ಭುಜಂಗಮರು, ಗರುಡರು, ಗಂಧರ್ವರು, ಅಶ್ವಿನೀದೇವತೆಗಳು, ಎಲ್ಲ ಅಪ್ಸರೆಯರೂ ಪ್ರಕಾಶಿಸಿದರು. ಬಲಭುಜದಲ್ಲಿ ಅರ್ಜುನ, ಎಡಭುಜದಲ್ಲಿ ಬಲರಾಮ, ಚರಣದಲ್ಲಿ ಧರ್ಮರಾಜ ಭೀಮ ನಕುಲ ಸಹದೇವ ಮತ್ತು ಯಾದವರು ಕಾಣಿಸಿಕೊಂಡರು. ಎಲ್ಲರನ್ನೂ ಒಳಗೊಂಡು ವಿಶ್ವರೂಪವಿಹಾರಿಯಾದ ಮುರವೈರಿಯು ಪ್ರಜ್ವಲಿಸುತ್ತಿದ್ದನು.

ಎಲ್ಲರ ಕಿವಿ ಕಣ್ಣು ಮೂಗುಗಳ ರಂಧ್ರಗಳಲ್ಲಿ ಹೊಗೆ ಕವಿದು ಬೆಂಕಿಜ್ವಾಲೆ ಆಕಾಶವನ್ನು ತಿವಿಯಿತು. ದಶದಿಕ್ಕುಗಳಲ್ಲೂ ಕಾಂತಿ ಕವಿಯಿತು.

ಕೃಷ್ಣನು ವಿಶ್ವರೂಪವನ್ನು ಧರಿಸಿ ಪ್ರಕಾಶಿಸುತ್ತಿರಲು ಪುಷ್ಪವೃಷ್ಟಿಯಾಯಿತು. ಆಕಾಶದಲ್ಲಿ ದುಂದುಭಿಧ್ವನಿ ಮೊಳಗಿತು. ಸಂತೋಷದಿಂದ ಭೂಮಿಯೂ ಬಿರಿಯಿತು. ಸಮುದ್ರವು ಎಲ್ಲಕಡೆಗಳಲ್ಲೂ ಉಕ್ಕಿತು. ದಿಗ್ಗಜಕೂರ್ಮ ಗಳಿಗೆ ಕೇವಲ ಹೆಮ್ಮೆ ಮಾತ್ರ ಉಳಿಯಿತು. ಕೌರವನನ್ನು ಬಿಟ್ಟು ಉಳಿದ ವರೆಲ್ಲರೂ ವಿಶ್ವರೂಪವನ್ನು ಕಂಡರು.

ಮುನಿಗಳು, ಭೀಷ್ಮ, ಕೃಪ, ವಿದುರ, ದ್ರೋಣ, ಸಂಜಯ ಮೊದ ಲಾದವರು ಪುಳಕಿತರಾಗಿ ಹರ್ಷಾಬ್ಧಿಯಲ್ಲಿ ಮುಳುಗಿ, ಭಕ್ತಿಯ ಭಾರದಲ್ಲಿ ಕುಸಿದು, ಹೆದರಿ ಮೇಲಕ್ಕೆದ್ದು ಹರಿಯ ಚರಣಗಳಿಗೆ ನಮಸ್ಕರಿಸಿದರು.

ಕೃಷ್ಣನು ಹೊರಗೂ ಒಳಗೂ ಪ್ರಕಾಶಿಸಿ ತಾನಲ್ಲದೆ ಮತ್ತಾರೂ ಕಾಣದಂತೆ ಹೊಳೆದನು. ಅನೇಕಕೃಷ್ಣರು ಕಾಣಲು ಆ ಖಳರು "ಒಳಗಿರುವ ಕೃಷ್ಣನನ್ನು ಬಿಗಿಯುವುದೋ? ಹೊರಗಿರುವವನನ್ನು ಹಿಡಿಯು ವುದೋ? ಕೃಷ್ಣರು ಬಹಳಮಂದಿ ಇದ್ದಾರೆ. ಯಾರನ್ನು ಕಟ್ಟುವುದು?" ಎಂದು ಭ್ರಾಂತಿಗೊಂಡರು.

"ಮುಳ್ಳಿನ ಮೊನೆಯಷ್ಟು ಅವಕಾಶವಿಲ್ಲದಂತೆ ವ್ಯಾಪಿಸಿರುವ ಸಚ್ಚಿ ನ್ಮಾತ್ರರೂಪನಾದ ಈ ಮಹಾಮಹಿಮನನ್ನು ಹೇಗೆತಾನೆ ಕಟ್ಟುವುದು?" ಎಂದು ಕರ್ಣಾದಿಗಳೂ ಚಕಿತರಾದರು. ಕೃಷ್ಣನು ಕುರುಡುದೊರೆಗೆ ಕಣ್ಣನ್ನು ಕರುಣಿಸಿದನು. ಆತನೂ ಶ್ರೀಕೃಷ್ಣನ ಈ ಮಂಗಳ ಶ್ರೀಮೂರ್ತಿ ಯನ್ನು ಮನದಣಿಯುವಷ್ಟು ನೋಡಿ "ದೇವ! ಕಣ್ಣುಗಳು ಹೋಗಲಿ, ಈ ನಿಮ್ಮ ಅಂಗಸೌಷ್ಠವವನ್ನು ನೋಡಿದ ಬಳಿಕ ಮತ್ತಾವುದನ್ನೂ ನೋಡ ದಂತೆ ಕೃಪೆಮಾಡಿ" ಎಂದು ಪ್ರಾರ್ಥಿಸಿದನು.

ಗಾಂಧಾರಿಯು, "ನೀನು ಅಮೇಯ ಕರುಣಾಸಾಗರನು. ಅನು ಪಮಚರಿತ್ರನಾದ ನಿನ್ನ ಚರಣಾರವಿಂದಗಳ ದರ್ಶನದಿಂದ ಪಾಪರಾಶಿ ಗಳು ತೊಲಗಿದುವು ಸಮದೃಷ್ಟಿಯಿಂದ ನೀನು ನೋಡು. ಶರಣರ ಮಮತೆ ಬೇಕು ಜೀಯ, ಲಕ್ಷ್ಮೀರಮಣ! ಕೃಪೆಮಾಡು." ಎಂದು ನಮಸ್ಕರಿಸಿದಳು.

ಕೃಷ್ಣನ ಈ ವಿಶ್ವರೂಪವನ್ನು ಕಂಡ ಭಾನುಮತಿಯೂ "ದೇವ! ಭಕ್ತರ ಮಾನಾಪಮಾನಗಳು ನಿನ್ನದು. ಶರಣರ ಹಾನಿವೃದ್ಧಿಗಳೆಲ್ಲ ನಿನ್ನದು. ನಿನ್ನನ್ನು ಬಿಟ್ಟರೆ ಬೇರಾರುಗತಿ? ನಿನ್ನ ಶರಣರ ತೇಜೋಭಿ ಮಾನವನ್ನು ನೀನು ಒಲಿದು ಸಲಹು" ಎಂದು ಭಯದಿಂದ ಕೃಷ್ಣನ ಚರಣ ಗಳಿಗೆ ನಮಸ್ಕರಿಸಿದಳು.

ಇದನ್ನು ಕಂಡ ದುರ್ಯೋಧನನು "ತಂದೆಯೇ! ಹೆದರಬೇಡ. ಕೃಷ್ಣನ ಈ ವಂಚನೆಗೆ ಬೆಚ್ಚಬೇಡ. ಈ ಸಂಧಾನದ ಮಾತು ಈತನಿಗೆ ಅಭಿಮತವೇ? ಕೇಳು. ಜೀವಸಾಮಾನ್ಯದಲ್ಲೂ ಈತನು ಅಂತರ್ಯಾಮಿ. ಈ ಜಗತ್ತೇ ಈತನಾಜ್ಞೆಗೆ ತಲೆಬಾಗುತ್ತದೆ. ನನ್ನ ಹೃದಯದಲ್ಲಿದ್ದು ವಂಚನೆಯಿಂದ ಸಂಧಿಯನ್ನು ಮುರಿಯುವವನೂ ಈತನೇ. ಶತ್ರುಗಳು ಮತ್ತು

ನಿಮ್ಮ ಹೃದಯದಲ್ಲಿದ್ದು ಸಂಧಿಯ ಮಾತನ್ನು ಆಡಿಸುವವನೂ ಈತನೇ. ಭಿನ್ನ ನಂತೆ ಕಂಡು ಭಿನ್ನಾಭಿನ್ನನಂತೆ ಈತ ಮೆರೆಯುತ್ತಾನೆ. ತಿಳಿದು ನೋಡಿದರೆ ಈ ಮುರವೈರಿ ಅಭಿನ್ನನೇ. ಇದಕ್ಕಾಗಿ ನಾವು ಏತಕ್ಕೆ ಹೆದರುವುದು ? ಸೂತ್ರವನ್ನಾಡಿಸಿದರೆ ಬೊಂಬೆಗಳು ಬಡಿದಾಡುತ್ತವೆ. ಸೂತ್ರಧರನಿರು ವಾಗ ಪುಣ್ಯಪಾಪಗಳು ಆ ಬೊಂಬೆಗಳಿಗುಂಟೇ? ಕೊಲ್ಲುವುದು, ಮತ್ತೊಬ್ಬ ರಿಂದ ಕೊಲ್ಲಿಸುವುದು ಈ ಸ್ವಾತಂತ್ರ್ಯವು ಕಮಲಾಕ್ಷನಿಗಲ್ಲದೆ, ಉಳಿದ ಜೀವಸಮುದಾಯಕ್ಕೆ ಇಲ್ಲ. ನಾವೂ ಸಂಧಿಯನ್ನೇ ಇಚ್ಛಿಸುತ್ತೇವೆ. ಈನಮ್ಮ ಅಭಿಪ್ರಾಯದಲ್ಲಿ ಹುಳುಕಿಲ್ಲ. ಆದರೆ ಸಂಧಿ ಕೃಷ್ಣನಿಗೆ ಅಭಿಮತವಲ್ಲ. ಆತನ ಮನಸ್ಸನ್ನು ನಾನು ಬಲ್ಲೆ. ನೀವು ಆತನ ಮೇಲಿನ ಅಭಿಪ್ರಾಯವನ್ನು ಮಾತ್ರ ತಿಳಿದಿದ್ದೀರಿ. ಈ ರಾವಣಾಂತಕನ ಮನಸ್ಸು ನಿಮಗೆ ತಿಳಿದಿಲ್ಲ. ನಾನು ಈತನ ಕೈಯಿಂದಲೇ ಸಾಯುತ್ತೇನೆ. ಹೆದರ ಬೇಡಿ. ಭೂಭಾರವನ್ನು ಕಳೆಯುವುದಕ್ಕಾಗಿಯೇ ಈತನು ಅವತರಿಸಿದ್ದಾನೆ. ನಮ್ಮನಮ್ಮಲ್ಲಿ ವೈರವನ್ನು ಬಿತ್ತಿ ಮಹಾಬಲವನ್ನು ಬರಿದುಮಾಡುತ್ತಾನೆ. ಈತನ ಛಲಕ್ಕೆ ಬಗ್ಗದೆ ರಾವಣಾದಿಗಳು ನಾಶವಾದರು. ಇದಲ್ಲವೇ ಕೀರ್ತಿ. ಈ ಶರೀರವು ಮಾತ್ರ ನಾಶವಾಗುತ್ತದೆ. ಅತಿಶಯವಾದ ಕೀರ್ತಿ ಉಳಿಯುತ್ತದೆ. ಹೆದರಿಕೆ ಏತಕ್ಕೆ ? ನಾನು ಈತನಿಗೆ ತಲೆಬಾಗುವುದಿಲ್ಲ. ಈ ಭೂಮಿಗೆ ಆಸೆಪಡುವುದೂ ಇಲ್ಲ. ನಾನು ಹೆದರುವುದೂ ಇಲ್ಲ. ರಣ ಮಹೋತ್ಸವವೇ ನನ್ನ ಮತ. ಕೈದಣಿಯುವಷ್ಟು ಹೊಡೆದಾಡುತ್ತೇನೆ. ಕೃಷ್ಣನನ್ನು ಕೆಣಕದೆ ಜಾಗ್ರತೆ ಮುಕ್ತಿಯು ದೊರೆಯುವುದಿಲ್ಲ'' ಎಂದು ಹೇಳಿದನು.

ಇದನ್ನು ಕೇಳಿದ ಕೃಷ್ಣನು ಒಳಗೊಳಗೇ ನಕ್ಕು ಮೊದಲಿನಂತೆ ಮನುಷ್ಯನ ಆಕಾರವನ್ನು ಪಡೆದು "ಕೌರವಪಾಂಡವರಿಬ್ಬರೂ ನನಗೆ ಸಮಾ ನರು. ನನಗೇಕೆ ಈ ಚಿಂತೆ ?'' ಎಂದು ಧೃತರಾಷ್ಟ್ರಭೀಷ್ಮರಿಗೆ ಹೇಳಿ ದನು. ಬಳಿಕ ಕೃಷ್ಣನು ಅರಮನೆಯಿಂದ ಹೊರಟು ವಿದುರನ ಮನೆಗೆ ಬಂದು ಕುಂತಿಯನ್ನು ಕರೆದು "ಕುಂತಿ! ನಿನ್ನ ಮಕ್ಕಳೈವರಮೇಲೆ ಕೌರವನ ಕೋಪ ಬಲವಾಗಿದೆ. ಈ ದಿನ ಸಂಧಾನ ಮುರಿಯಿತು. ನಿನ್ನ ಮಗನಾದ ಕರ್ಣನನ್ನು ಬೇಡಿಕೋ'' ಎಂದು ಆಕೆಗೆ ಸೂಚಿಸಿ ಆತನು ಹಿಂತಿರುಗಿದನು. ಆಗ ವಿದುರ, ಭಾರದ್ವಾಜ, ಗೌತಮ, ಭೀಷ್ಮ, ಧೃತ ರಾಷ್ಟ್ರ, ಗಾಂಧಾರಿ, ಕರ್ಣ, ವಿಕರ್ಣ, ಶಲ್ಯ, ಸುಬಾಹು, ಅಶ್ವತ್ಥಾಮ ಮೊದಲಾದವರ ಉತ್ಸಾಹ ಅಡಗಿತು. ಅವರೆಲ್ಲ ಕೃಷ್ಣನನ್ನೇ ಹಿಂಬಾಲಿಸಿ ಬಂದರು. ಕೃಷ್ಣನು ಅವರಿಗೆ "ದುರ್ಯೋಧನನು ಆಸೆಯನ್ನು ಬಿಟ್ಟು ಕುರುಕುಲಕ್ಕೆ ಹಿತವನ್ನು ಚಿಂತಿಸುವಂತೆ ನೀವು ನಯದಿಂದ ಏಕಾಂತದಲ್ಲಿ ಆತನಿಗೆ ಹೇಳಿ. ಪಾಂಡವರೊಡನೆ ಸಂಧಿಯೇ ಸರಸ. ಯುದ್ಧವು ಈ ವಂಶಕ್ಕೆ ತೀರ್ಮಾನ. ಇದು ಖಂಡಿತ'' ಎಂದು ತಿಳಿಸಿ, ಎಲ್ಲರನ್ನೂ

ಬೀಳ್ಕೊಟ್ಟು ಸ್ವಲ್ಪ ನಿಂತುಕೊಂಡು, ಕರ್ಣನನ್ನು ರಥದ ಸಮೀಪಕ್ಕೆ ಕರೆದು "ಕರ್ಣ! ನನ್ನನ್ನು ಕಳುಹಿಸಿಕೊಡಲು ಸ್ವಲ್ಪದೂರ ನನ್ನೊಡನೆ ಬಾ" ಎಂದು ಆತನಿಗೆ ತಿಳಿಸಿ, ತಾಪಸರನ್ನೆಲ್ಲಾ ಕಳುಹಿಸಿದನು.

೧೦ನೆಯ ಸಂಧಿ

ಒಲಿದವರನ್ನೇ ಕಾಪಾಡುವ ಇಚ್ಛೆ ಕೃಷ್ಣನಿಗೆ ಬಹಳ. ಕೋಪಿಸಿದರೆ ತಲೆಬರಹವನ್ನೇ ಈತನು ತೊಡೆಯುತ್ತಾನಲ್ಲದೆ ಸೈರಿಸುವುದಿಲ್ಲ. ಕೃಷ್ಣನು ಭಜಕರಿಗೆ ಬೆಂಬಲನೆಂಬ ಬಿರುದನ್ನು ಪಡೆದಿರುತ್ತಾನೆ. ಭೇದೋಪಾಯ ದಿಂದ ಇನ್ನು ಈ ಕುರುಕುಲವನ್ನು ಕೊಂದಂತೆಯೇ ಸರಿ.

ಮೈದುನತನದ ಸರಸದಿಂದ ಕೃಷ್ಣನು ಕರ್ಣನನ್ನು ಸಮೀಪಕ್ಕೆಳೆದು ಪೀಠದಲ್ಲಿ ಕುಳ್ಳಿರಿಸಿದನು. ಆಗ ಕರ್ಣನು ದೈನ್ಯದಿಂದ "ದೇವ! ನಿಮ್ಮೊಡನೆ ಕುಳಿತುಕೊಳ್ಳಲು ನಾನು ನಿಮಗೆ ಸಮಾನನೇ? ನಾನು ಹೆದರುತ್ತೇನೆ." ಎಂದು ಹೇಳಿದನು.

ಇದನ್ನು ಕೇಳಿ ಕೃಷ್ಣನು ತೊಡೆಮುಟ್ಟುವಂತೆ ಆತನ ಪಕ್ಕಕ್ಕೆ ತಾನೇ ಸರಿದು "ಕರ್ಣ! ನಿನ್ನಲ್ಲಿ, ಯಾದವರಲ್ಲಿ ಮತ್ತು ಕೌರವರಲ್ಲಿ ಭೇದವಿಲ್ಲ. ನಿನ್ನಾಣೆಯಾಗಿಯೂ ಹೇಳುತ್ತೇನೆ ಕೇಳು. ವಿಚಾರಮಾಡಿದರೆ ಎರಡು ವಂಶಗಳ ಮೂಲವೂ ಒಂದೇ, ಎರಡಲ್ಲ. ನೀನೂ ರಾಜನೇ. ನಿನಗೆ ಇದರ ಅರಿವಿಲ್ಲ" ಎಂದು ಕರ್ಣನ ಕಿವಿಯಲ್ಲಿ ಭಯವನ್ನು ಬಿತ್ತಿದನು.

ಅದಕ್ಕೆ ಕರ್ಣನು "ದಾನವಾಂತಕನೇ! ಹೇಳು; ವಂಶವಿಹೀನನಾದ ನಾನು ನಿಮ್ಮಡಿಗಳಿಗೆ ಸಮಾನನೇ? ಸಾಕು;" ಎಂದು ತಲೆಬಾಗಿ ಕೈಮುಗಿದನು.

ಆಗ ಕೃಷ್ಣನು "ಮಾನನಿಧಿಯೇ! ನನ್ನಾಣೆ, ಬಾ. ನೀನು ನಮ್ಮೆಲ್ಲರಿಗೂ ಸಮಾನನೇ. ಭಾನುಕುಲತಿಲಕ! ನೀನು ಬಲರಾಮನಿಗೆ ಸಮನಾದವನು." ಎಂದು ಹೇಳಿ ಕರ್ಣನನ್ನು ಸಮೀಪಕ್ಕೆ ಎಳೆದು ಆತನ ಅಂಗೈ ಮೇಲೆ ತನ್ನ ಅಂಗೈ ಇಟ್ಟು ವೀಳಯವನ್ನು ಕೊಟ್ಟು "ಸೂರ್ಯಪುತ್ರನೇ! ನಿನ್ನ ಕುಲವನ್ನು ನೀನು ತಿಳಿಯಲಿಲ್ಲವಲ್ಲಾ? ದುರ್ಯೋಧನನ ಹತ್ತಿರ ಸೇವಕವೃತ್ತಿಯಲ್ಲಿರುವುದು ನಿನಗೆ ಯೋಗ್ಯವಲ್ಲ. ಕುಂತಿಯು ದೂರ್ವಾಸರಿಂದ ತಾನು ವರವಾಗಿ ಪಡೆದ ಐದು ಮಂತ್ರಗಳಲ್ಲಿ ಮೊದಲನೆಯ ವರದಿಂದ ಹುಟ್ಟಿದವನು ನೀನು. ನೀನಾದ ಮೇಲೆ ಯುಧಿಷ್ಠಿರ; ಮೂರನೆಯವನು ಭೀಮ; ಅರ್ಜುನನು ನಾಲ್ಕನೆಯವ; ಐದನೆಯ ಮಂತ್ರದಿಂದ ಮಾದ್ರಿಯಲ್ಲಿ ನಕುಲಸಹದೇವರಿಬ್ಬರೂ ಹುಟ್ಟಿದರು. ಆದಕಾರಣ ನೀನೇ ಪಾಂಡವರೈವರಿಗೂ ಹಿರಿಯ. ನೀನಿರುವಾಗ ಈ ರಾಜ್ಯಕ್ಕಾಗಿ ಯುದ್ಧವು ಎರಡು ಪಕ್ಷಗಳಿಗೂ ಅಪೇಕ್ಷಿತವಲ್ಲ. ಕರ್ಣ! ನಿನ್ನ ಅಭ್ಯುದಯವನ್ನೇ ನಾನು ಬಯಸುತ್ತೇನೆ. ಪಾಂಡವರೈವರನ್ನೂ

ನಿನ್ನ ಚರಣಗಳಮೇಲೆ ಉರುಳಿಸುತ್ತೇನೆ. ನಡೆ ನನ್ನೊಡನೆ. ನಿನಗೆ ಹಸ್ತಿನಾವತಿಯ ಪಟ್ಟವನ್ನು ಕೊಡಿಸುತ್ತೇನೆ. ಎರಡು ಪಕ್ಷದವರೂ ನಿನ್ನನ್ನೇ ಸೇವಿಸುತ್ತಾರೆ. ಈ ಎರಡು ಸಂತತಿಯುವರೂ ನಿನಗೆ ಕಿಂಕರರು ಎನ್ನಿಸುಕೊಳ್ಳುವುದನ್ನು ಬಿಟ್ಟು, ನೀನು ದುರ್ಯೋಧನನ ಬಾಯ್ದಂಬುಲಕ್ಕೆ ಕೈ ಒಡ್ಡುವುದೇ ? ಎಡಗಡೆ ಕೌರವರು, ಬಲಗಡೆ ಪಾಂಡವರು, ಎದುರಿನಲ್ಲಿ ಮಾದ್ರ ಮಾಗಧ ಯಾದವಾದಿಗಳು ಇರಲು ನೀನು ಓಲಗ ಮಧ್ಯದಲ್ಲಿ ಕುಳಿತು ವಿಲಾಸದಿಂದಿರುವುದನ್ನು ಬಿಟ್ಟು, ಕೌರವನು ಮಾತಾಡಿಸಲು 'ಜೀಯ' 'ಹಸಾದ' ಎನ್ನುವುದು ಕಷ್ಟವಲ್ಲವೇ ನಿನಗೆ? ಶೌರ್ಯದಲ್ಲೋ ನಿನಗೆ ಎದುರೇ ಇಲ್ಲ ; ಕುಲದಲ್ಲೋ ಸೂರ್ಯನ ಮಗ; ಒಡಹುಟ್ಟಿದವರೋ ವೀರ ಪಾಂಡವರು ; ನಿನ್ನ ವೈಭವಕ್ಕೆ ಯಾರು ತಾನೇ ಸಮಾನರು ? ಕರ್ಣ! ನಡೆ, ನಡೆ. ನೀನು ರಾಜನಾಗಿರಲು ಬಳಿಕ ಕೌರವ ಪಾಂಡವರಿರ್ವರಿಗೂ ವೈರವಿಲ್ಲ'' ಎಂದು ಹೇಳಿದನು.

ಇದನ್ನು ಕೇಳಿದ ಕರ್ಣನ ಕುತ್ತಿಗೆಯ ನರಗಳು ಹಿಗ್ಗಿದವು. ಆತನಿಗೆ ಕಣ್ಣೀರು ಬಂದಿತು. ಆಗ ಕರ್ಣನು "ಅಕಟಾ! ದುರ್ಯೋಧನನಿಗೆ ಕೇಡಾಯಿತು'' ಎಂದು ಮನಸ್ಸಿನಲ್ಲೇ ವ್ಯಥೆಪಟ್ಟನು. "ಹರಿಯ ವೈರವು ಹೊಗೆಯಾಡದೆ ಉರಿಸದೆ ಸುಮ್ಮನೆ ಹೋಗುತ್ತದೆಯೇ? ಕೃಷ್ಣನು ನನ್ನ ವಂಶವನ್ನು ತಿಳಿಸಿ ನನ್ನನ್ನು ಕೊಂದನು. ಹೆಚ್ಚುಮಾತಿನಿಂದ ಏನು ಪ್ರಯೋಜನ? ಯುದ್ಧ ಮಾಡಿ ಕೊಲ್ಲಲು ಪಾಂಡವರು ಸೋದರರು, ಕೊಲ್ಲದೆ ಉಳಿಸಿದರೆ ಕೌರವನಿಗೆ ಭೂಮಿಯಲ್ಲಿ ಸ್ಥಳವಿಲ್ಲ. ಮಧುಸೂದನನು ಭೇದೋಪಾಯದಿಂದ ನನ್ನನ್ನು ಇರಿದನಲ್ಲಾ? ಅಕಟಾ!'' ಎಂದು ಕರ್ಣನು ಚಿಂತಾಸಾಗರದಲ್ಲಿ ಮುಳುಗಿ ಮೌನದಿಂದಿದ್ದನು.

ಆಗ ಕೃಷ್ಣನು ಕರ್ಣನನ್ನು ನೋಡಿ "ಏನು ಕರ್ಣ? ಚಿತ್ತಗ್ಲಾನಿ ಯಾವುದು? ಹೇಳು. ಕುಂತೀಮಕ್ಕಳೊಡನೆ ಇರುವುದು ನಿನಗೆ ಸೇರುವುದಿಲ್ಲವೇ? ಕೊರತೆಯಿಲ್ಲ, ನನ್ನಾಣೆ ಹೇಳು. ವ್ಯಥೆ ಏತಕ್ಕೆ? ಮರುಳುತನ ಬೇಡ. ನಾನು ನಿನಗೆ ಅಪಯಶಸ್ಸನ್ನು ಬಯಸುವವನಲ್ಲ'' ಎಂದು ಹೇಳಿದನು.

ಅದಕ್ಕೆ ಕರ್ಣನು "ಮರುಳುಮಾಧವ! ಈ ರಾಜ್ಯಸಂಪತ್ತಿಗೆ ನಾನು ಮನಸೋಲುವವನಲ್ಲ. ಪಾಂಡವರು ಮತ್ತು ಕೌರವರನ್ನು ಸೇರಿಸುವ ಮನಸ್ಸೂ ನನಗಿಲ್ಲ. ನನ್ನನ್ನು ಕಾಪಾಡಿದ ಒಡೆಯನಿಗೆ ಶತ್ರುಗಳ ಶಿರಸ್ಸನ್ನು ಒಪ್ಪಿಸುತ್ತೇನೆಂಬ ಭರದಲ್ಲಿ ನಾನಿದ್ದೆ. ಈಗ ನೀನು ಕೌರವೇಂದ್ರನನ್ನು ಕೊಂದೆ. ಪಾಂಡವರು ನನಗೆ ಒಡಹುಟ್ಟಿದವರೆಂದು ತಿಳಿಸಿ 'ನನ್ನ ಬಾಣಕ್ಕೆ ಅವರ ಮಾಂಸವು ಬಲಿ' ಎನ್ನುವ ಹಠವನ್ನು ಹೋಗಲಾಡಿಸಿದೆ. ಇನ್ನು ಹೇಳಿ ಫಲವೇನು? ನಾನು ಕೌರವೇಶ್ವರನನ್ನೇ ಅನುಸರಿಸುತ್ತೇನೆ. ನಿನ್ನೊಡನೆ ಬರುವುದಿಲ್ಲ. ನೀನು ನಿನ್ನವರನ್ನು ಕಾಪಾಡಿ ಭೂಮಿಯಲ್ಲಿ

ನಿಲ್ಲಿಸು; ಹೆಚ್ಚು ಮಾತೇನು? ನಾನು ಬಾಳುವುದು ಯಾರಿಗೂ ಇಷ್ಟವಿಲ್ಲ. ಕೌರವೇಶ್ವರನನ್ನು ಬಿಟ್ಟು ಈ ಲೋಕದಲ್ಲಿ ಮತ್ತಾರೂ ನನಗೆ ಆಪ್ತರಿಲ್ಲ. ಆತನು ನನ್ನನ್ನು ಮನ್ನಿಸಿ ಕಾಪಾಡಿರುತ್ತಾನೆ. ನನ್ನನ್ನು ಮರ್ಯಾದೆಯಿಂದ ಕಾಣುತ್ತಾನೆಯೇ ವಿನಾ ನನ್ನಲ್ಲಿ ಕೀಳುಭಾವನೆ ಆತನಿಗಿಲ್ಲ. ಅವನು ನನ್ನನ್ನು ನೋಡಿ ಸತ್ಕರಿಸಿ, ಬಿರುದನ್ನು ಹೊಗಳಿಸಿ ದಣಿಯುವುದೇ ಇಲ್ಲ. ಆ ಮಾನನಿಧಿಯನ್ನು ಹೇಗೆ ತಾನೆ ಮರೆಯಬಲ್ಲೆ ? ಕೃಷ್ಣ! ನನ್ನನ್ನು ಪೀಡಿಸಬೇಡ. ನೀನು ಕೋಪಿಸಬಾರದು; ನಾನು ಪಾಂಡವರ ಕಡೆಗೆ ಬಂದಿದ್ದೇ ಆದರೆ ರೂಢಿ ಮೆಚ್ಚುವುದಿಲ್ಲ. ಕೃಷ್ಣ ! ಕೇಳು; 'ಯುದ್ಧವು ಒಂದು ಯಜ್ಞ. ಇದಕ್ಕೆ ದೀಕ್ಷಿತ ನಾನು. ಇದರಲ್ಲಿ ರಕ್ತವೇ ಆಜ್ಯ; ಕರುಳುಗಳೇ ಚರು; ಎಲಬುಗಳೇ ಸಮಿತ್ತುಗಳು; ಮಾಂಸವೇ ಆಹುತಿ; ಕಪಾಲಗಳೇ ಪಾತ್ರೆಗಳು; ಕೂದಲೇ ದರ್ಭೆ.' ಮುಂದಿನ ಭಾರತವು ಮಾರಿಗೆ ಔತಣವಾಗಿದೆ. ಕೌರವನ ಋಣ ತೀರಿಸಲು ಯುದ್ಧದಲ್ಲಿ ಕೋಟಿ ಸುಭಟರನ್ನು ನಾಶಮಾಡುತ್ತೇನೆ. ಒಡೆಯನ ಕಾರ್ಯಕ್ಕಾಗಿ ಈ ನನ್ನ ಶರೀರವನ್ನೇ ನೀಗುತ್ತೇನೆ. ಆದರೆ ಸೂರ್ಯನಾಣೆಯಾಗಿಯೂ ನಾನು ಆ ಐವರು ವೀರರನ್ನು ಮಾತ್ರ ನೋಯಿಸುವುದಿಲ್ಲ' ಎಂದನು.

ಕೃಷ್ಣನು ಕರ್ಣನ ದೃಢವನ್ನು ಕಂಡು ಮನಸ್ಸಿನಲ್ಲಿ ಉತ್ಸಾಹಗೊಂಡನು. ಬಳಿಕ "ಕರ್ಣ ! ಈ ಐವರು ಸಹೋದರರ ಯೋಗಕ್ಷೇಮ ನಿನ್ನದೇ. ಈ ಎಲ್ಲ ವಿಷಯಗಳನ್ನು ನಿನಗೆ ತಿಳಿಸದಿರುವುದು ನನಗೆ ಉಚಿತವಲ್ಲವೆಂದು ತಿಳಿದು ಎಲ್ಲವನ್ನೂ ತಿಳಿಸಿರುತ್ತೇನೆ. ನೀನು ಸುಖಿಯಾಗು ಹೋಗು. ನಮ್ಮ ಕಡೆಗೆ ನೀನು ಬಂದರೆ ಒಳ್ಳೆಯದು; ಬರದಿದ್ದರೆ ಕರ್ಣ! ಕೇಳು; ಸವಿಮಾತುಗಳಿಂದ ಮಂದಬುದ್ಧಿಯಾದ ದುರ್ಯೋಧನನಿಗೆ ಬುದ್ಧಿವಾದ ಹೇಳು; ತಮ್ಮಂದಿರಿಗೆ ರಾಜ್ಯಕೊಡಿಸಿ ಅವರನ್ನು ಸೇರಿಸು. ಇದು ನ್ಯಾಯವಾಗಿದೆ. ಕೌರವೇಶ್ವರನು ನಿನ್ನ ಮಾತನ್ನು ಅಲ್ಲಗಳೆಯುವುದಿಲ್ಲ" ಎಂದು ಕೃಷ್ಣನು ಹೇಳಿದನು.

ಅದಕ್ಕೆ ಕರ್ಣನು "ಮುರವೈರಿ! ಎರಡು ಪಕ್ಷದವರಿಗೂ ಮಾತ್ಸರ್ಯ ಹೆಚ್ಚಿದೆ. ಯುದ್ಧಸನ್ನಾಹ ನಡೆದಿದೆ. ಈಗ ನಾನು ಹೇಳಿದರೆ ಕೌರವನಿಗೆ ಅದು ತಿಳಿಯುವುದಿಲ್ಲವೇ? ಅದರಿಂದ ಶೌರ್ಯಕ್ಕೆ ಕುಂದುಂಟಾಗುತ್ತದೆ. ಸಂಧಿಯ ಮಾತು ನನಗೆ ತಿಳಿಯದು. ದೇವ! ಈಗತಾನೆ ಸಂಧಾನ ಮುರಿದಿದೆ. ನೀನಾದರೋ ಪಾಂಡವರ ಕಡೆಯವನು. ಅಜ್ಞರಿಗೆ ಹುತ್ತಿನ ಬಳಿ ಬಿದ್ದಿರುವ ಹುಲ್ಲಿನ ಹಗ್ಗವೂ ಹಾವಿನಂತೆ ಭಾಸವಾಗುತ್ತದೆ. ಚಾಡಿಯ ಮಾತೂ ಮನಗೊಳ್ಳುತ್ತದೆ. ಆದಕಾರಣ ನನ್ನನ್ನು ಕಳುಹಿಸು" ಎಂದು ಕೃಷ್ಣನ ಪಾದಗಳಿಗೆ ನಮಸ್ಕರಿಸಿ ತನ್ನ ಮನೆಗೆ ಬಂದನು.

ಕೃಷ್ಣನ ಮಾತುಗಳು ಕರ್ಣನ ಮನಸ್ಸಿನಲ್ಲಿ ಬೇರೂರಿದುವು. ಆತನು "ಅಕಟಾ! ಕೃಷ್ಣನು ಹಾಳುಮಾಡಿದನು. ಕೌರವನು ಬಾಳಲು ತಿಳಿ

"ಕರ್ಣ ಔದಾರ್ಯದ ಕಲ್ಪವೃಕ್ಷ" !

ಯದೆ ಕೆಟ್ಟ. ಈ ಕೃಷ್ಣನು ಆತನನ್ನು ಕೊಲ್ಲದೇ ಬಿಡುವುದಿಲ್ಲ. ಕೌರವೇಶ್ವರನಿಗೆ ಆಪ್ತರೇ ಇಲ್ಲ." ಎಂದು ಮನಸ್ಸಿನಲ್ಲೇ ಯೋಚಿಸುತ್ತಾ ಆ ರಾತ್ರಿಯನ್ನು ಕಳೆದನು.

ಬಳಿಕ ಕರ್ಣನು, ಒಂದು ಭಾನುವಾರದ ದಿವಸ ಗಂಗೆಯ ತೀರದಲ್ಲಿ ಸೂರ್ಯನಿಗೆ ಅರ್ಘ್ಯಕೊಟ್ಟು ಸೌರಮಂತ್ರವನ್ನು ಜಪಿಸುತ್ತಿರುವಾಗ ಆ ಔದಾರ್ಯದ ಕಲ್ಪವೃಕ್ಷವನ್ನು ಕಾಣಲು ಕುಂತಿಯು ಅಲ್ಲಿಗೆ ಬಂದಳು. ತಾಯಿಯು ಬರಲು ಅವಳನ್ನು ಎದುರುಗೊಂಡು ಬಂದು ಕರ್ಣನು ಆಕೆಯ ಪಾದಗಳಿಗೆ ನಮಸ್ಕರಿಸಿದನು. ಆಗ ಕುಂತಿಯು ಆತನನ್ನು ಮೇಲಕ್ಕೆತ್ತಿ ಸಮೀಪಕ್ಕೆ ಎಳೆದು ಅಪ್ಪಿಕೊಂಡಳು. ಆಕೆಯ ಕಣ್ಣಿಂದ ನೀರು ಪ್ರವಾಹದಂತೆ ಹರಿಯಿತು; ಗಂಟಲಿನಲ್ಲಿ ಧ್ವನಿಯೇ ಹೊರಡದಂತಾಯಿತು. ಆಕೆಯು ಶೋಕಸಾಗರದಲ್ಲಿ ಮುಳುಗಿದಳು.

ಅದೇ ಸಮಯದಲ್ಲಿ ಗಂಗೆಯು ಹೆಣ್ಣುವೇಷದಿಂದ ಅಲ್ಲಿಗೆ ಬಂದು "ಕುಂತೀ! ನಿನ್ನ ಮಗನನ್ನು ಸ್ವೀಕರಿಸು. ನಾನು ಇಷ್ಟು ದಿನಗಳವರೆಗೂ ಈತನ ತೊಂದರೆಯನ್ನೆಲ್ಲ ನಿವಾರಿಸಿ ಕಾಪಾಡಿರುತ್ತೇನೆ. ನನ್ನ ಭಾಷೆ ಇಂದಿಗೆ ಮುಗಿಯಿತು" ಎಂದು ಹೇಳಿ ಕರ್ಣನನ್ನು ಕುಂತಿಗೆ ಒಪ್ಪಿಸಿದಳು.

ಆಗಲೇ ಸೂರ್ಯನೂ ಬಂದು ಕರ್ಣನ ಕಿವಿಯಲ್ಲಿ ಏಕಾಂತವಾಗಿ ಎಲ್ಲ ವಿಚಾರಗಳನ್ನು ಹೇಳಿ "ಮಗನೇ! ಕುಂತಿಯು ನಿನಗೆ ತಾಯಿ. ಕೃಷ್ಣನ ಹೇಳಿಕೆಯಂತೆ ನಿನ್ನನ್ನು ಬಾಣಬೇಡಲು ಆಕೆ ಬಂದಿರುತ್ತಾಳೆ. ಹಿಂದೆ ಇಂದ್ರನಿಗೆ ಕವಚಕೊಟ್ಟಂತೆ ಈಗಲೂ ನೀನು ಮರುಳಾಗಬೇಡ." ಎಂದು ತಿಳಿಸಿದನು. ಇದನ್ನು ಕೇಳಿ ಕರ್ಣನು "ನಿಮ್ಮ ಅಪ್ಪಣೆಯಂತೆ ನಡೆಯುತ್ತೇನೆ" ಎಂದು ಹೇಳಿ ಸೂರ್ಯನನ್ನು ಕಳುಹಿಸಿದನು. ಬಳಿಕ ತಾಯಿಯನ್ನು ಭಯಭಕ್ತಿಗಳಿಂದ ಮನ್ನಿಸಿ "ತಾಯೆ! ನೀವು ಬಂದ ಕಾರ್ಯವೇನು? ತಿಳಿಸಿ" ಎಂದು ಪ್ರಶ್ನಿಸಿದನು.

ಇದನ್ನು ಕೇಳಿ ಕುಂತಿಯು, ಕರ್ಣನನ್ನು ಎಳೆದು ಅಪ್ಪಿಕೊಂಡು ಶೋಕದಿಂದ "ಮಗನೇ! ನಿನ್ನ ತಮ್ಮಂದಿರನ್ನು ಕಾಪಾಡು. ಕೆಡುಕುತನವನ್ನು ಬಿಡು. ನೀನು ಮತ್ತೊಬ್ಬರ ಸೇವೆಮಾಡಬಹುದೇ? ನಿನಗೆ ಕೌರವ ಪಾಂಡವರಿಬ್ಬರೂ ಸಹೋದರರಲ್ಲವೇ? ನಾನು ಹೇಳುವಂತೆ ನಡೆ. ಚಾಡಿಕೋರರ ವೈರದ ಮಾತುಗಳನ್ನು ಕೇಳಬೇಡ. ಪಟ್ಟಕಟ್ಟಿಸಿಕೊ" ಎಂದಳು.

ಆಗ ಕರ್ಣನು "ನೀನು ನನಗೆ ತಾಯಿ ಎನ್ನುವುದನ್ನು ನಾನು ಬಲ್ಲೆ. ಕೃಷ್ಣನು ಹೇಳಿದಮೇಲೆ ಇದು ತಿಳಿಯಿತು. ಎರಡುಗುಂಪಿನಲ್ಲೂ ಪಟ್ಟಕ್ಕೆ ನಾನೇ ಹಿರಿಯ; ಅದೂ ನಿಜ ಆದರೆ ಕೌರವನು ನನ್ನನ್ನೇ ನಂಬಿ ಕಾಪಾಡಿರುತ್ತಾನೆ. ಈಗ ನಾನು ಸಾಯಲು ಹೆದರುತ್ತೇನೆಯೇ? ಅಂಥ ಬಾಳಿಕೆ ಏತಕ್ಕೆ ? ಅದನ್ನು ಸುಡು. ಕೃತಘ್ನನಿಗೆ ಸದ್ಗತಿ ಇಲ್ಲ. ಐವರು

ಮಕ್ಕಳಿಗೂ ನಾನೇ ಹಿರಿಯವನು. ಈ ಮಾತು ತಾಯಿಗೆ ಯೋಗ್ಯವಾದದ್ದೇ ಸರಿ. ಇದರಲ್ಲಿ ಸಂಶಯವಿಲ್ಲ; ಆ ಮಾತಿರಲಿ. ಈ ರಾಜ್ಯಲಕ್ಷ್ಮಿಯು ನನ್ನನ್ನು ಕಾಪಾಡಿದ ದುರ್ಯೋಧನನ ಅರಸಿಯಾಗಿರುತ್ತಾಳೆ. ನಾನು ವಾಸಿಸುತ್ತಿರುವುದೂ ಅಲ್ಲೇ. ಹೀಗಿರುವಾಗ ನಾನು ಭೂಮಿಯನ್ನು ಬಯಸುವುದು ಯೋಗ್ಯವೇ? ಇದನ್ನು ಯಾರುತಾನೆ ಮೆಚ್ಚುತ್ತಾರೆ? ಜಯಲಕ್ಷ್ಮಿ ನನ್ನನ್ನು ನೋಡಿ ಅಸಹ್ಯಪಡುವುದಿಲ್ಲವೇ? ಹೇಳು ತಾಯೆ! ಈ ದಿನ ನೀವು ಹೇಳಿದ ಮೇಲೆ ನಾನು ಸೂರ್ಯನ ಮಗ ಎನ್ನುವುದು ತಿಳಿಯಿತು. ಹಿಂದೆ ದುರ್ಯೋಧನನು ಏನನ್ನು ನೋಡಿ ನನ್ನನ್ನು ಕಾಪಾಡಿದ? ಇದುವರೆಗೂ ಅವನಿಂದ ಬದುಕಿ ಬಾಳಿ ಈಗ ನಾನು ಬಂದು ಪಾಂಡವರೊಡನೆ ಸೇರಿದರೆ ಲೋಕ ನಗುವುದಿಲ್ಲವೇ? ಆ ಮಾತಿರಲಿ. ನೀವು ಬಂದ ಕಾರ್ಯವೇನು? ಹೇಳಿ ಸಾಕು'' ಎಂದನು.

ಆಗ ಕುಂತಿಯು ''ಹಾಗಾದರೆ ಕಂದ! ಕೇಳು. ಐವರು ಸಹೋದರರನ್ನೂ ಕಾಪಾಡು. ಕೌರವನ ಸೇವೆಮಾಡುವ ಈ ದುರಾಗ್ರಹವು ನಿನಗೆ ಒಪ್ಪುವುದೇ ? ಒಂದುಸಾರಿ ಬಿಟ್ಟ ಬಾಣವನ್ನು ಮತ್ತೆ ತೊಡಬೇಡ. ವೈರವನ್ನು ಬಿಡು'' ಎಂದು ಹೇಳಲು ಕರ್ಣನು ಅದಕ್ಕೆ ಒಪ್ಪಿ ಅಲ್ಲಿಂದ ಹೊರಟು ಅರಮನೆಗೆ ಬಂದನು.

೧೧ನೆಯ ಸಂಧಿ

ಹೀಗೆ ಸಂಧಾನ ಮುರಿಯಲು ಕೃಷ್ಣನು ಉಪಪ್ಲಾವ್ಯನಗರಿಗೆ ಹಿಂತಿರುಗಿದನು. ತಾನು ಬಂದಿರುವ ಸುದ್ದಿಯನ್ನು ಧರ್ಮರಾಜಾದಿಗಳಿಗೆ ತಿಳಿಸಲು ಸಾತ್ಯಕಿಯನ್ನು ಕೃಷ್ಣನೇ ಕಳುಹಿಸಿದನು. ಕೃಷ್ಣನು ಬಂದಿರುವ ಸುದ್ದಿಯನ್ನು ಕೇಳಿ ಎಲ್ಲ ರಾಜರೂ ತಮ್ಮ ಸಮಸ್ತ ಸೈನ್ಯದೊಡನೆ ಆತನನ್ನು ಎದುರುಗೊಳ್ಳಲು ಬಂದರು.

ಭೀಮನು ದೂರದಿಂದಲೇ ಕೃಷ್ಣನ ದುಮ್ಮಾನದ ಮುಖವನ್ನು ನೋಡಿ ''ಕೌರವರು ಸಂಧಿಗೆ ಒಪ್ಪಿಲ್ಲ. ಈತನ ಮುಖವನ್ನು ನೋಡಿದರೆ ಯುದ್ಧವೇ ಖಂಡಿತ. ಇದೇ ಅಲ್ಲವೇ ಮಾರಿಗೆ ಉತ್ಸವ!'' ಎಂದು ಹೇಳುತ್ತಾ ಬಂದನು.

ದ್ರುಪದನೇ ಆದಿಯಾಗಿ ಎಲ್ಲ ನಾಯಕರೂ ಕೃಷ್ಣನನ್ನು ಕಂಡು ಆತನಿಗೆ ನಮಸ್ಕರಿಸಿದರು. ಧರ್ಮರಾಜನು ''ದೇವ! ಭೀಷ್ಮ, ವಿದುರ, ದ್ರೋಣ, ಕೃಪ, ಅಶ್ವತ್ಥಾಮ, ಧೃತರಾಷ್ಟ್ರ ಮೊದಲಾದವರೆಲ್ಲ ಕ್ಷೇಮವೇ? ಎಂದು ಕೃಷ್ಣನನ್ನು ಪ್ರಶ್ನಿಸಿದನು.

ಅದಕ್ಕೆ ಕೃಷ್ಣನು ''ರಾಜ! ಬಂಧುಗಳೆಲ್ಲ ಕ್ಷೇಮವಾಗಿರುತ್ತಾರೆ. ಅವರೆಲ್ಲ ನಿಮ್ಮ ಕ್ಷೇಮಕುಶಲಗಳನ್ನು ವಿಚಾರಿಸಿ ಹರಕೆಗಳನ್ನೂ ಹೇಳಿ ಕಳುಹಿಸಿರುತ್ತಾರೆ. ಮಹಾಸಂಗ್ರಾಮದಲ್ಲಿ ಬಾಣಗಳ ಕಾಣಿಕೆಯಿಂದ ನಿಮ್ಮಲ್ಲಿ ಪ್ರೇಮವನ್ನು ಬಳಸುವುದೇ ದುರ್ಯೋಧನನ ಮತ. ನೀವು ಅರ್ಧ

ಭೂಮಿಯನ್ನು ಕೇಳಿರುತ್ತೀರಿ. ಆದರೆ ಆತನು ಸಂಧಿಗೆ ಒಪ್ಪದೆ ನಿಮ್ಮಿತ್ತ ವರೆಗೂ ಯುದ್ಧಭೂಮಿಯನ್ನು ಕೊಟ್ಟಿರುತ್ತಾನೆ. ನೀವು ನಿಪುಣರೇ ಆಗಿದ್ದರೆ ಕೌರವರೊಡನೆ ಕುರುಕ್ಷೇತ್ರದಲ್ಲಿ ಯುದ್ಧಹೂಡಿ. ನಿಮ್ಮ ನಿಮ್ಮಲ್ಲಿ ಕೋಪಗೊಂಡರೆ ವ್ಯಸನಪಡುವವರೂ, ಮನಸ್ಸು ಕಲಕಿದರೆ ಶಾಂತರಾಗುವವರೂ, ನೀವು ನೀವೆ. ಈಗ ನಿಮ್ಮ ದೆಸೆಯಿಂದ ನನಗೆ ಸಭೆಯಲ್ಲಿ ಮಾನಹಾನಿಯಾಯಿತು'' ಎಂದು ಹೇಳಲು, ಧರ್ಮ ರಾಜನು ವ್ಯಥೆಪಟ್ಟನು. ಬಳಿಕ ನಕ್ಕು ''ದೇವ! ಕೋಪಿಸಿ ಕತ್ತಿಯನ್ನು ಹಿರಿದು ಆಕಾಶಕ್ಕೆ ಬೀಸಿ ಏನುತಾನೆ ಮಾಡಬಹುದು? ಕರುಣಾಸಾಗ ರನೇ! ಆ ಖಳರು ಕೊಟ್ಟ ತೊಂದರೆಯನ್ನು ನಮ್ಮಲ್ಲಿ ತಿಳಿದು ಎಲ್ಲವನ್ನೂ ಮರೆಯಬೇಕು'' ಎಂದು ಕೃಷ್ಣನ ಪಾದಗಳನ್ನು ಹಿಡಿದನು.

ಆಗ ಕೃಷ್ಣನು ''ಧರ್ಮರಾಜ! ಸುಮ್ಮನೆ ನನ್ನನ್ನು ಕಾಡಬೇಡ, ಏಳು, ಅವನ್ನೆಲ್ಲಾ ಆಗಲೇ ಮರೆತೆ. ಕೌರವರು ಮುಂದಾಲೋಚನೆ ಯಿಲ್ಲದೆ ತೊಂದರೆಪಡಿಸಿದರು. ನಾನೇಕೆ ದೂರುವುದು? ಅದು ಹೋಗಲಿ. ಎಲ್ಲ ಸಿದ್ಧತೆಗಳೂ ಆಗಿದ್ದರೆ ನಾಳೆಯೇ ಸಂಗ್ರಾಮ ನಡೆಯಲಿ. ಕೌರವರಿಗೆ ಸೈರಣೆಯೇ ತಿಳಿಯದು. ನೀನು ಕುರುಕ್ಷೇತ್ರಕ್ಕೆ ಹೊರಡು'' ಎಂದು ಹೇಳಿದನು.

ಕೃಷ್ಣನ ಮಾತನ್ನು ಕೇಳಿ ಭೀಮನು ''ಭೃತ್ಯರ ಹಾನಿಯನ್ನು ಹೊತ್ತು ಅವರ ಮಾನರಕ್ಷಣೆ ಮಾಡುವುದೇ ಒಡೆಯನಿಗೆ ಗುಣ. ಕೃಷ್ಣ! ನಮಗೆ ನೀನೇ ಒಡೆಯ. ಮಾನಭಂಗವನ್ನು ಹೊತ್ತು ನಮ್ಮ ಅಭಿ ಮಾನವನ್ನು ನೀನು ಉಳಿಸಿರುತ್ತೀಯೆ. ಸಂಧಾನ ಫಲಿಸದಂತೆ ಮಾಡಿ ನಮ್ಮನ್ನು ಕಾಪಾಡಿರುತ್ತೀಯೆ. ಈಗ ಮಾರಿಯ ಕೊರತೆ ಅಡಗದೇ ಇರು ವುದೇ ? ಯಮುನ ಪಟ್ಟಣ ತುಂಬುವುದಿಲ್ಲವೇ? ಶಾಕಿನಿಯರ ಮೈ ಒದ್ದೆ ಯಾಗುವುದಿಲ್ಲವೇ? ಡಾಕಿನಿಯರ ಮೈ ಕೊಬ್ಬುವುದಿಲ್ಲವೇ? ಕೌರವನ ತನಿ ಗರುಳ ದಂಡೆಯನ್ನು ಬಾಗಿಲಲ್ಲಿ ತೋರಣಕಟ್ಟಿ ಹಸ್ತಿನಾಪಟ್ಟಣವನ್ನು ಪ್ರವೇಶಿಸದೆ ಇರುವೆನೇ? ನೋಡು'' ಎಂದನು.

ಇದನ್ನು ಕೇಳಿ ಕೃಷ್ಣನು ''ಭೀಮ! ನಡೆ. ನಿನ್ನ ಪರಾಕ್ರಮ ವನ್ನು ತೋರಿಸು. ಈಗ ಈ ಕೋಲಾಹಲ ಏತಕ್ಕೆ? ಇನ್ನಾರು ತಿಂಗಳೇ? ನಾಳೆಯೇ ಪ್ರಯಾಣವೆಂದು ಸಾರಿಸು. ಏಳು'' ಎಂದನು.

ಬಳಿಕ ಎಲ್ಲರೂ ಉಪಪ್ಲಾವ್ಯನಗರಿಗೆ ಬಂದರು. ಕೃಷ್ಣನ ಹೇಳಿಕೆ ಯಂತೆ ಎಲ್ಲ ರಾಜರೂ ತಮ್ಮ ತಮ್ಮ ಚತುರಂಗಬಲದೊಡನೆ ಯುದ್ಧಕ್ಕೆ ಸಿದ್ಧರಾಗಿ ಬರುತ್ತಿರುವುದನ್ನು ನೋಡಿದರೆ ಸಾಗರದ ಪ್ರವಾಹದಂತೆ ಕಾಣುತ್ತಿತ್ತು. ಈ ಸೇನಾಸಾಗರದಲ್ಲಿ ರಾಜರ ಕಿರೀಟಗಳೇ ನವರತ್ನಗಳು. ರಾಜರು ಹಿಡಿದಿರುವ ಕತ್ತಿ, ಕೊಡಲಿ ಮೊದಲಾದ ಆಯುಧಗಳೇ ಅಲೆಗಳು. ರಥದ ಬಾವುಟಗಳೇ ನೊರೆ. ಆನೆಕುದುರೆಗಳೇ ಜಲಚರಗಳು.

ಭೀಮನ ಕೈಸನ್ನೆಯೇ ಗಾಳಿ. ಈ ಗಾಳಿಯ ಹೊಡೆತದಿಂದ ಸೇನಾ ಪ್ರವಾಹ ರಭಸವಾಗಿ ಬರುತ್ತಿತ್ತು.

ಭೀಮಾರ್ಜುನರು ಸೇನೆಯನ್ನು ತೋರಿಸುತ್ತ ಬರಲು, ಕೃಷ್ಣನು ಧರ್ಮರಾಜನೊಡನೆ ಆನೆಯಮೇಲೆ ಕುಳಿತು ಎಲ್ಲವನ್ನೂ ನೋಡಿದನು.

ದ್ರುಪದನು ತನ್ನ ಒಂದಕ್ಷೌಹಿಣೀಸೇನೆಯನ್ನೂ, ಯುಧಾಮನ್ಯು, ಉತ್ತಮೌಜ, ಶಿಖಂಡಿ, ಸುಚೇಕಿತಾನ, ಮೊದಲಾದ ಪಾಂಚಾಲದೇಶಕ್ಕೆ ಸೇರಿದ ರಾಜರ ಮತ್ತು ತುರುಕ, ಸಾಹಣ, ಸಮುದ್ರ, ಮರು, ಯವನ, ಖುರಸಹಣ, ಕಾಶಿರಾಜರಿಗೆ ಸೇರಿದ ಒಂದಕ್ಷೌಹಿಣೀ ಸೇನೆಯನ್ನೂ ತೋರಿಸಿದನು.

ವಿರಾಟರಾಜ, ಕಂಬುರಾಜ, ಶತದ್ಯುಮ್ನ, ಶತಚಂದ್ರ, ಶತಾನೀಕ, ಶತಾಯುಧ ಮೊದಲಾದ ಮತ್ಸ್ಯದೇಶದ ರಾಜರು ಒಟ್ಟು ಒಂದಕ್ಷೌಹಿಣೀ ಸೇನೆಯನ್ನು ತೋರಿಸಿದರು.

ಕೈಕಯರಾಜರು ಒಂದಕ್ಷೌಹಿಣೀಸೇನೆಯನ್ನೂ, ಪಾಂಡ್ಯ, ಸೃಂಜಯ, ಸೋಮಕ ಮೊದಲಾದ ದೊರೆಗಳು ಒಂದಕ್ಷೌಹಿಣೀ ಸೇನೆಯನ್ನೂ ತೋರಿಸಿದರು.

ಚೇದಿದೇಶದ ಧೃಷ್ಟಕೇತುವು ಒಂದಕ್ಷೌಹಿಣೀಬಲವನ್ನೂ, ಕುಂತೀಭೋಜನು ಒಂದಕ್ಷೌಹಿಣೀಸೇನೆಯನ್ನೂ ತೋರಿಸಿದರು.

ಹೀಗೆ ಒಟ್ಟು ಏಳಕ್ಷೌಹಿಣೀಸೇನೆ ಪಾಂಡವರ ಸಹಾಯಕ್ಕಾಗಿ ನೆರೆದಿತ್ತು.

ಪಾಂಡವರ ಕಡೆಗೆ, ನೀಲ, ಬೃಹತ್ಕ್ಷೇತ್ರ, ಸೂರ್ಯಧ್ವಜ, ಸುವರ್ಚಸ, ಚಿತ್ರವರ್ಮ, ಹಿರಣ್ಯವರ್ಮ, ಮೊದಲಾದವರೂ ಸಹಾಯಕ್ಕಾಗಿ ಬಂದರು.

ಹಿಂದೆ ಅರ್ಜುನನಿಗೆ ರಾತ್ರಿಯುದ್ಧಮಾಡಿ ಸೋತ ಅಂಗಾರವರ್ಮನು ತನ್ನ ಪರಿವಾರದೊಡನೆ ಯುಧಿಷ್ಠಿರನನ್ನು ಬಂದು ಕಂಡನು.

ದುರ್ಯೋಧನನನ್ನು ಕಟ್ಟಿ ಒಯ್ದ ಧೀರಸಾಹಸಿಯಾದ ಚಿತ್ರಸೇನನು ಮಿತ್ರಭಾವದಿಂದ ಧರ್ಮರಾಜನನ್ನು ಬಂದು ಕಂಡನು.

ಭಾರಿದೇಹನೂ, ಭಟಭಯಂಕರನೂ ಆದ ಘಟೋತ್ಕಚನು ತನ್ನ ಪರಿವಾರದೊಡನೆ ಧರ್ಮರಾಜನನ್ನು ಬಂದು ಕಂಡನು.

ಎಲ್ಲ ರಾಜರೂ ತಮ್ಮ ತಮ್ಮ ಸೇನೆಯೊಡನೆ ಉಪಪ್ಲಾವ್ಯನಗರದಲ್ಲಿ ನೆರೆದರು. ಬಳಿಕ ಧರ್ಮರಾಜನು ಆಪ್ತಸಚಿವರನ್ನು ಬರಮಾಡಿಸಿ ಅವರೆದುರಿನಲ್ಲಿ "ದೇವ! ಯುದ್ಧಕ್ಕೆ ಸೇನಾನಾಯಕನು ಬೇಕು. ಒಟ್ಟಾಗಿ ನೆರೆದಿರುವ ಈ ಸೇನೆಗೆ ನಾಯಕನಿಲ್ಲದಿದ್ದರೆ ಸತ್ವವಿಲ್ಲದೆ ಇರುವೆಯಂತೆ ಸೇನೆಯು ಚೆದುರಿಹೋಗುವ ಸಂಭವವುಂಟು. ಆದಕಾರಣ ಈ ಸೇನೆಗೆ ಯಾರನ್ನು ದಳಪತಿಯಾಗಿ ಮಾಡಬಹುದು? ಎಂದು ರಾಜಕಾರ್ಯವನ್ನು

ಕೃಷ್ಣನಿಗೆ ಅರಿಕೆಮಾಡಿದನು. ಇದನ್ನು ಕೇಳಿ ಕೆಲವರು ದ್ರುಪದನನ್ನೂ, ಮತ್ತೆ ಕೆಲವರು ವಿರಾಟನನ್ನೂ, ಇನ್ನು ಕೆಲವರು ಶಿಖಂಡಿಯನ್ನೂ, ಉಳಿದ ಕೆಲವರು ಘಟೋತ್ಕಚನನ್ನೂ ದಳಪತಿಯನ್ನಾಗಿ ಮಾಡಲು ಸೂಚಿಸಿದರು. ಹೀಗೆ ಅವರಲ್ಲೇ ಅನೇಕ ಮತವಾಗಲು, ಅರ್ಜುನನು "ದ್ರುಪದನ ಮಗ ಧೃಷ್ಟದ್ಯುಮ್ನನನ್ನು ಸೇನಾನಾಯಕನನ್ನಾಗಿ ಮಾಡುವುದು ನನಗೆ ಸಮ್ಮತ" ಎಂದು ತಿಳಿಸಿದನು. ಆಗ ಧರ್ಮರಾಜನು "ಕೃಷ್ಣ! ಈ ಭಿನ್ನಾಭಿಪ್ರಾಯಗಳಿಂದ ರಾಜಕಾರ್ಯದ ಸ್ಥಿತಿ ಕೆಟ್ಟಿದೆ. ಸೇನಾನಾಯಕನಾಗಲು ಯಾರು ಸಮರ್ಥರು? ನೀನೇ ತಿಳಿಸು." ಎಂದು ಹೇಳಲು, ಕೃಷ್ಣನು "ಧರ್ಮರಾಜ! ಹೇಳುವುದೇನಿದೆ? ಸೇನಾನಾಯಕಪಟ್ಟಕ್ಕೆ ಅರ್ಜುನನು ಯಾರನ್ನು ಸೂಚಿಸುತ್ತಾನೆಯೋ ಅದೇ ನನಗೂ ಒಪ್ಪಿಗೆ" ಎಂದನು.

ಕೂಡಲೇ ಧೃಷ್ಟದ್ಯುಮ್ನನನ್ನು ಕರೆಸಿದರು. ಸೇನಾಪಟ್ಟಕಟ್ಟುವ ಈ ಮಹೋತ್ಸವಕ್ಕಾಗಿ ಪಟ್ಟಣವನ್ನು ತಳಿರ್ತೋರಣಗಳಿಂದ ಅಲಂಕರಿಸಿದರು. ಎಲ್ಲೆಡೆಯಲ್ಲೂ ವೇದಘೋಷಧ್ವನಿ ಕೇಳಿಬರುತ್ತಿದ್ದಿತು. ಮಂಗಳವಾದ್ಯಗಳೂ ಮೊಳಗುತ್ತಿದ್ದವು. ಭಟರು ಬಿರುದುಗಳನ್ನು ಸಾರಿ ಹೇಳುತ್ತಿದ್ದರು. ಬಾಲಕಿಯರು ಆರತಿ ಎತ್ತಲು ತಟ್ಟೆಗಳನ್ನು ಹಿಡಿದು ನಿಂತಿದ್ದರು. ಸುಮುಹೂರ್ತದಲ್ಲಿ ಧೃಷ್ಟದ್ಯುಮ್ನನಿಗೆ ಪಾಂಡವ ಸೇನಾಪಟ್ಟವನ್ನು ಕಟ್ಟಿದರು.

ಬಳಿಕ "ಸೇನೆಯು ಧೃಷ್ಟದ್ಯುಮ್ನನ ಅಪ್ಪಣೆಯಂತೆ ನಡೆಯಬೇಕು" ಎಂದು ಎಲ್ಲರಾಜರ ಪಾಳಯದಲ್ಲೂ ಡಂಗುರಹೊಡಿಸಿದರು. ಶುಭ ಮುಹೂರ್ತದಲ್ಲಿ ಎಲ್ಲರೂ ಯುದ್ಧಕ್ಕಾಗಿ ಪ್ರಯಾಣಹೊರಟರು. ಪಾಂಡವರೂ ಕೃಷ್ಣನಿಗೆ ನಮಸ್ಕರಿಸಿ ತಮ್ಮ ತಮ್ಮ ರಥಗಳನ್ನೇರಿದರು. ಕೃಷ್ಣನು ರಥದಲ್ಲಿ ಕುಳಿತು ಮುಂದೆ ಹೊರಟನು. ಆತನ ರಥದ ಹಿಂದೆ ಧರ್ಮರಾಜನ ರಥವೂ, ಪಕ್ಕಗಳಲ್ಲಿ ಭೀಮಾರ್ಜುನರ ರಥಗಳೂ ಹೊರಟವು.

ಯುದ್ಧಭೂಮಿಗೆ ತೆರಳುತ್ತಿರುವ ಈ ಪಾಂಡವಸೇನೆಯನ್ನು ನೋಡಿ ದೇವತೆಗಳು "ಆದಿಶೇಷನಿಗೂ ಈ ಸೇನೆಯ ಭಾರವನ್ನು ಧರಿಸಲು ಸಾಧ್ಯವಾಗಲಾರದು" ಎಂದು ಹೇಳುತ್ತಿದ್ದರು. ಕಹಳೆ ಮೊದಲಾದ ವಾದ್ಯಘೋಷದೊಡನೆ ಸೇನೆ ಮುಂದೆ ಮುಂದೆ ನಡೆಯುತ್ತಿತ್ತು. ಸೇನೆಯ ಕಾಲ್ತುಳಿತಕ್ಕೆ ಭೂಮಿಯು ಕುಸಿದು ಆಮೆಗೆ ಮೇಲುಸಿರು ಬರುವಂತೆಯೂ, ದಿಗ್ಗಜಗಳು ಮೊಳಕಾಲೂರುವಂತೆಯೂ, ಶೇಷನು ಕುಸಿಯುವಂತೆಯೂ ತೋರುತ್ತಿತ್ತು.

ಆನೆಗಳ ಬೃಂಹಿತ, ಕುದುರೆಗಳ ಹೇಷಾಧ್ವನಿ, ತೇರುಗಳ ಚೀತ್ಕಾರ, ಬಿಲ್ಲುಗಳ ಟಂಕಾರ ಇವುಗಳ ಆರ್ಭಟ ಮೂರುಲೋಕಗಳನ್ನೂ ನಡುಗಿಸುವಂತಿತ್ತು. ಸೇನೆಯು ಅಟ್ಟಹಾಸದಿಂದ ಕುರುಕ್ಷೇತ್ರಕ್ಕೆ ಬಂದಿತು. ಯುದ್ಧಭೂಮಿಯಲ್ಲಿ ಕೃಷ್ಣನೇ ಮೊದಲಾದವರಿಗೆ ಇಳಿ

ಯಾಲು ಆಲಯಾಗಳನ್ನು ರಚಿಸಿದರು. ಧರ್ಮರಾಜನ ಅರಮನೆಗೆ ಬಲಗಡೆ ಕೃಷ್ಣನಿಗೂ ಅದರ ಸಮೀಪದಲ್ಲಿ ಅರ್ಜುನನಿಗೂ, ಕೃಷ್ಣನ ಅರಮನೆಯ ಹಿಂದೆ ನಕುಲನಿಗೂ, ಎಡಗಡೆ ಭೀಮನಿಗೂ, ಮುಂದೆ ಸಹದೇವನಿಗೂ ಅರಮನೆಗಳನ್ನು ಕಟ್ಟಿಸಿದರು. ಈ ಅರಮನೆಗಳ ಸುತ್ತಲೂ ಪಾಂಚಾಲ, ಮತ್ಸ್ಯ ಮೊದಲಾದ ದೊರೆಗಳಿಗೆ ಗೂಡಾರಗಳನ್ನೂ ಈ ಎಲ್ಲ ಗೂಡಾರಗಳ ರಕ್ಷಣೆಗಾಗಿ ಹೊರಗಡೆ ಸುತ್ತಲೂ ಕಲ್ಲುಕೋಟೆಯನ್ನೂ ಕಟ್ಟಿಸಿದರು. ಯುದ್ಧಸಾಮಗ್ರಿಗಳನ್ನೆಲ್ಲಾ ಅಳವಡಿಸಿಕೊಂಡರು. ಪಾಳಯದಲ್ಲಿ ಅಂಗಡಿಬೀದಿಗಳೂ ಸಿದ್ಧವಾದವು. "ದೇವತೆಗಳಿಗೇ ಸೃಷ್ಟಿಸಲು ಆಗದಿರುವ ಈ ಪಾಳಯದ ಸೃಷ್ಟಿ ಉಳಿದವರಿಗೆ ಸಾಧ್ಯವೇ?" ಎನ್ನುವಂತೆ ಪಾಂಡವರ ಸಮಗ್ರಬೀಡು ಕುರುಕ್ಷೇತ್ರದಲ್ಲಿ ರಂಜಿಸುತ್ತಿತ್ತು. ಸೇನೆಯಲ್ಲಿ ಭೀಮನದು ಅಗ್ರಬಲ. ಆತನು ಹಿಂಭಾಗದಲ್ಲೂ, ಬೀಡಿನ ಸುತ್ತಲೂ ಸಾತ್ಯಕಿ ನಕುಲ ಅರ್ಜುನರು, ಪಾಳಯದ ರಕ್ಷಣೆಗಾಗಿ ಕಾಯುತ್ತಿದ್ದರು. ರಾತ್ರಿಯಲ್ಲಿ ಘಟೋತ್ಕಚನೊಬ್ಬನೇ ಬಲವನ್ನು ಕಾಯುತ್ತಿದ್ದನು. ಪಾಂಡವರ ಉಳಿವಿಗೆ ಗದುಗಿನ ವೀರನಾರಾಯಣನೇ ಕಾವಲಾಗಿದ್ದನು.

ಕಾವ್ಯ ರಚನೆ

ಕುಮಾರವ್ಯಾಸನು ರಚಿಸಿರುವ ಈ ಕಥೆಗೆ ವ್ಯಾಸಭಾರತವೇ ಮೂಲ. ಈತನು ವ್ಯಾಸಭಾರತದ ಕಥೆಯಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿಕೊಂಡಿರುತ್ತಾನೆ. ಈ ಮಾರ್ಪಾಡುಗಳಲ್ಲಿ ಹೆಚ್ಚುಭಾಗವನ್ನು ಕನ್ನಡ ಆದಿಕವಿಯಾದ ಪಂಪನಿಂದ ಸಂಗ್ರಹಿಸಿರುತ್ತಾನೆ. ಸಂಸ್ಕೃತ ಭಾರತ, ಪಂಪಭಾರತ ಇವೆರಡನ್ನೂ ಹಾಸುಹೊಕ್ಕುಗಳನ್ನಾಗಿ ಅಳವಡಿಸಿಕೊಂಡು, ತಾನು ಕಥಾಪಟವನ್ನು ರಚಿಸಿರುತ್ತಾನೆ. ಈ ಕಥಾಪಟದಲ್ಲಿ ತನ್ನ ಕಾಲ್ಪನಿಕಚಿತ್ರವನ್ನು ಚಿತ್ರಿಸಿ ಭಾರತಕಥಾಚಿತ್ರವನ್ನು ಕನ್ನಡ ನಾಡಿನ ಎಲ್ಲ ಜನರ ಮುಂದಿರಿಸಿರುತ್ತಾನೆ.

ಮಹಾಭಾರತ ಪಂಪಭಾರತಗಳನ್ನು ಅನುಸರಿಸಿರುವುದಕ್ಕೆ ಲಕ್ಷ್ಯಗಳನ್ನು ಮುಂದೆ (ಪು. 1 ರಿಂದ) ಪ್ರತ್ಯೇಕವಾಗಿ ಕೊಟ್ಟಿದೆ.

ಕುಮಾರವ್ಯಾಸನು ಕಥಾದೃಷ್ಟಿಯಿಂದ ಮೂಲಭಾರತದಲ್ಲಿ * ಹೇಳಿರುವ ಇತರ ಉಪಾಖ್ಯಾನಗಳನ್ನು ಒಂದೊಂದು ಪದ್ಯದಿಂದ ಮಾತ್ರ ಸೂಚಿಸಿ, ಭಾರತಕಥೆಯನ್ನೇ ಮುಂದುವರಿಸುತ್ತಾನೆ. ವ್ಯಾಸಭಾರತದಂತೆ ಉಪಾಖ್ಯಾನಗಳ ಕಥೆಯನ್ನು ತನ್ನ ಕಾವ್ಯದಲ್ಲೂ ವಿವರಿಸಲು ಪ್ರಯತ್ನಿಸಿಲ್ಲ. ಅಂತೆಯೇ ವರ್ಣನೀಯಾಂಶಗಳನ್ನು ಸಂಗ್ರಹಿಸಿ ಅವುಗಳ ಅಭಿಪ್ರಾಯಬರುವಂತೆ ತನ್ನದೇ ಆದ ಒಂದು ಮಾರ್ಗದಿಂದ ವರ್ಣಿಸುತ್ತಾನೆ. ಕೆಲವುಕಡೆಗಳಲ್ಲಿ ಮೂಲವನ್ನೇ ಕನ್ನಡಕ್ಕೆ ಭಾಷಾಂತರ

* ಉದ್ಯೋಗಪರ್ವದ ಕಥಾದೃಷ್ಟಿಯಿಂದ.

ಮಾಡಿರುತ್ತಾನೆ. ಈ ವಿಧವಾದ ಕೃತಿಯ ರಚನೆಯನ್ನು ನೋಡಿದರೆ ಕವಿಗೆ ಅಸಾಧಾರಣ ಪ್ರತಿಭೆ ಇದ್ದಿತೆನ್ನುವುದು ಸ್ಪಷ್ಟಪಡುತ್ತದೆ.

ಕವಿಗೆ ಸಂಸ್ಕೃತ, ಕನ್ನಡ ಈ ಎರಡು ಭಾಷೆಗಳಲ್ಲೂ ಪೂರ್ಣ ಪಾಂಡಿತ್ಯವಿದ್ದಿತೆಂದು ಕಾವ್ಯವಿಮರ್ಶೆಯಿಂದ ತಿಳಿದು ಬರುತ್ತದೆ. ಆದುದರಿಂದಲೇ ಕವಿಯು ಸಂಸ್ಕೃತ ಶ್ಲೋಕಗಳನ್ನೇ ಕನ್ನಡಕ್ಕೆ ಭಾಷಾಂತರ ಮಾಡಿರುತ್ತಾನೆ. ಸಂಸ್ಕೃತಭಾರತದ ಶ್ಲೋಕಗಳನ್ನು ಮಾತ್ರವಲ್ಲದೆ ಹಲವು ಪ್ರಸಿದ್ಧ ನೀತಿಶ್ಲೋಕಗಳನ್ನೂ ಹಿತೋಪದೇಶ, ಶುಕ್ರನೀತಿ ಮೊದಲಾದ ನೀತಿಗ್ರಂಥಗಳಿಂದ ಸಂಗ್ರಹಿಸಿ ಕನ್ನಡಕ್ಕೆ ಭಾಷಾಂತರಮಾಡಿರುತ್ತಾನೆ. ಇದೇ ಈತನ ಅಸಾಧಾರಣಪಾಂಡಿತ್ಯದ ಕುರುಹು.

ಸಂಸ್ಕೃತಶ್ಲೋಕಗಳನ್ನು ಅವುಗಳಲ್ಲಿರುವ ಭಾವಗಳು ಕೆಡದಂತೆ ಕನ್ನಡಭಾಷೆಗೆ ಪರಿವರ್ತಿಸುವುದು ಸಾಮಾನ್ಯಪಂಡಿತನಿಗೆ ಸಾಧ್ಯವಲ್ಲ. ಕವಿಯು ಹೊಸದಾಗಿ ತನಗೆ ಸ್ಫೂರ್ತಿಬಂದಂತೆ ಕಾವ್ಯಗಳನ್ನು ರಚಿಸುವುದು ಸುಲಭ. ಮತ್ತೊಬ್ಬರ ಭಾವವನ್ನು ಕುಂದಿಲ್ಲದಂತೆ ಭಾಷಾಂತರಮಾಡಿ ಕಾವ್ಯವನ್ನು ರಚಿಸುವುದು ಕಷ್ಟ ಮತ್ತು ವಿರಳ. ಈ ಕಾರ್ಯಕ್ಕೆ ಕುಮಾರವ್ಯಾಸನು ಪ್ರಯತ್ನಿಸಿ ಅದರಲ್ಲಿ ಜಯಶೀಲನಾಗಿರುತ್ತಾನೆ. ಎಂದರೆ ಉತ್ಪ್ರೇಕ್ಷೆಯಲ್ಲ. ಆದುದರಿಂದಲೇ ಈತನ ಕಾವ್ಯವು ಪಂಡಿತ ಪಾಮರರಾದಿಯಾಗಿ ಎಲ್ಲ ಕನ್ನಡಿಗರಿಗೂ ಆದರಣೀಯವಾಗಿದೆ.

ಪಂಪಭಾರತವು ವಿದ್ವಾಂಸರ ಮೆಚ್ಚಿಗೆಯನ್ನು ಪಡೆದಿದೆಯೇ ವಿನಾ ಸಾಮಾನ್ಯಕನ್ನಡಿಗನಿಗೆ ಅದು ಅರ್ಥವಾಗುವುದಿಲ್ಲವೆಂದು ಕವಿಯು ಯೋಚಿಸಿ, ಸಾಮಾನ್ಯಜನರ ಬಳಕೆಯ ನುಡಿಗಳನ್ನೇ ತನ್ನ ಕಾವ್ಯದಲ್ಲಿ ಉಪಯೋಗಿಸಿರಬೇಕು.

ಕುಮಾರವ್ಯಾಸನು ತನ್ನ ಕಾವ್ಯದಲ್ಲಿ ಉಪಯೋಗಿಸಿರುವ ಜನಸಾಮಾನ್ಯದ ನುಡಿ, ನುಡಿಗಟ್ಟು, ಪಡೆನುಡಿಗಳಿಗೆ ಉದ್ಯೋಗಪರ್ವದಲ್ಲಿ ಕಂಡುಬರುವ ಕೆಲವು ನಿದರ್ಶನಗಳು

೧. ಸಾಮಾನ್ಯವಾಗಿ ಜನರು ಮಾತಾಡುವಾಗ 'ಇದು ಸತ್ಯ' ಎಂದು ತಿಳಿಸುವ ಸಂದರ್ಭಗಳಲ್ಲಿ 'ಆಣೆ ಇಡುವುದು' ಈಗಲೂ ಬಳಕೆಯಲ್ಲಿದೆ. ಇದನ್ನು ಕವಿಯು ಕಾವ್ಯದಲ್ಲಿ ಅನೇಕ ಕಡೆ ಪ್ರಯೋಗಿಸಿರುತ್ತಾನೆ. ಇದಕ್ಕಾಗಿ ಅರ್ಧಪದ್ಯವನ್ನೇ ವಿನಿಯೋಗ ಮಾಡಿರುವುದನ್ನು ಮುಂದಿನ ಪದ್ಯವು ವ್ಯಕ್ತಪಡಿಸುತ್ತದೆ.

"ದೇವಕಿಯ ಮೇಲಾಣೆ ವರವಸು
ದೇವನಂಘ್ರಿಗಳಾಣೆ ಮನ್ಮಥ
ದೇವನಾಣೆ ನಿದಾನವನು ಕೇಳಬಲೆ ನಿನ್ನಾಣೆ" ಸಂ. ೭. ಪ ೧೩

೨. 'ತಾನು ಶೂರ' ಎನ್ನುವ ಅಭಿಪ್ರಾಯವನ್ನು ಸೂಚಿಸುವುದಕ್ಕಾಗಿ ಮೀಸೆತಿರುಗಿಸುವುದು, ಮೀಸೆಯ ಮೇಲೆ ಕೈ ಇಡುವುದು. ಇವೇ ಮೊದಲಾದ ಸಾಮಾನ್ಯಜನರ ನಡವಳಿಕೆಗಳನ್ನು "ಬೆರಳಮೀಸೆಯೊಳಿಡುತ" *"ಮೀಸೆಯನು ಬೆರಳಲಿ ಮುರಿದು" ಎಂದು ಗ್ರಂಥದಲ್ಲಿ ಸೇರಿಸಿರುತ್ತಾನೆ.

೩. ಊರಿಂದ ಬಂದವರನ್ನು ಕ್ಷೇಮಸಮಾಚಾರ ವಿಚಾರಿಸಿ ಅವರಿಗೆ ವೀಳೆಯಕೊಟ್ಟು ಮನ್ನಿಸುವುದು.

ಉದಾ :—"ವೀಳಯವ ತಾ ಕೊಂಡು ಕುರುಭೂಪಾಲಪಾರ್ಥರಿಗಿತ್ತು"
ಸಂ.೧ ಪ.೨೬

"ಮಂದಿರದ ಸುಕ್ಷೇಮಕುಶಲವನಂದು ಕೇಳಿದು ವೀಳಯವನಾ
ಮಂದಿಗಿತ್ತನು" ಸಂ.೭ ಪ.೨೨

"ಗುರುಪಿತಾಮಹಗೌತಮರ ಸಚ್ಚರಣಕಮಲಂಗಳಿಗೆ ಕುಶಲವೆ
ಗುರುಸುತನು ಸುಕ್ಷೇಮಿಯೇ ಕುರುರಾಯನಿರವೆಂತು ।
ಕುರುಪತಿಯಸೋದರರು ಮಕ್ಕಳು ಸರಸಿಜಾನನೆ ಭಾನುಮತಿ ಮಿ
ಕ್ಕರಸಿಯರು ಕರ್ಣಾದಿಗಳಯಿರವೆಂತು ಹೇಳೆಂದ
ಸಂ.೨ ಪ.೩೪

೪. ಬ್ರಾಹ್ಮರು, ಪುಕ್ಕಟೆ, ಭಂಡ, ಮೊಮ್ಮಂದಿರು, ಅಣ್ಣತಮ್ಮಂದಿರು, ಪುಂಡ, ಸಂಗಾತ, ಉಂಡಾಡಿಭಟ್ಟ, ಬೀಡಾಡಿ, ಸುರಗಿರರು ಅವನಿಗಿವನಿ ಇವೇ ಮೊದಲಾದ ಕನ್ನಡಿಗರು ಬಳಸುವ ಮಾತುಗಳನ್ನು ಕವಿಯು ಕಾವ್ಯದಲ್ಲಿ ಪ್ರಯೋಗಿಸಿರುತ್ತಾನೆ.

೫. (i) "ಮಝು ಮಾಯೆ ಕುಂತೀಲಲನೆ ಹೆತ್ತಳು ಸುತರ"
ಸಂ.೬ ಪ.೧೧

(ii) "ಮುಳಿದು ಬಗುಳುವ ನಾಯ್ಗೆ ಚಂದ್ರಮನಳುಕುವನೆ?
ನರಿಯೊಱಲಿದರೆ ಕಳವಳಿಸುವುದೆ ಕಲಿಸಿಂಹ?"
ಸಂ.೯ ಪ.೪೮

(iii) "ನೊರಜುಹೊಕ್ಕೊಡೆ ಕದಡುವುದೆ ಸಾಗರದಜಲ?
ನೊಣವೆಱಗಿದರೆ ಕುಲಗಿರಿಗಳಲ್ಲಾಡುವುವೆ?
ತೆರಳಲಱಿವನೆ ಕೊಬ್ಬಿದೊಳ್ಳೆಯಮಱಿಗೆ ಗರುಡನು?"
ಸಂ.೯ ಪ.೪೯

★ಕುಮಾರವ್ಯಾಸನ ಕೃಷ್ಣನಿಗೆ ಮೀಸೆ ಇರುವುದು ಗಮನಾರ್ಹವಾದ ವಿಷಯವಾಗಿದೆ. ಮದ್ರಾಸಿನ ದೇವಾಲಯದಲ್ಲಿರುವ ಪಾರ್ಥಸಾರಥಿಗೆ ಮೀಸೆ ಈಗಲೂ ಇದೆ.

ಇದೇರೀತಿಯ ಅನೇಕ ನುಡಿಗಟ್ಟುಗಳನ್ನು ಕಾವ್ಯದಲ್ಲಿ ಬಳಸಿರುತ್ತಾನೆ.

ಕುಮಾರವ್ಯಾಸನಿಗೆ ಜ್ಯೌತಿಷದಲ್ಲಿ ಶಕುನ ವಿಚಾರವು ತಿಳಿದಿದ್ದಿತೆಂದು ಹೇಳಬಹುದು. ಈತನು ತನ್ನ ಕಾವ್ಯದಲ್ಲಿ ಮೂಲಭಾರತದಲ್ಲಿಲ್ಲದ ಕಡೆಗಳಲ್ಲೆಲ್ಲಾ ಇದನ್ನು ಸಮಯವರಿತು ಸೇರಿಸಿರುವುದು ಮುಂದಿನ ಲಕ್ಷ್ಯಗಳಿಂದ ವ್ಯಕ್ತವಾಗುತ್ತದೆ.

(i) "ಬೀಳುಕೊಂಡರ್ಜುನನು ಲಕ್ಷ್ಮೀಲೋಲನಲ್ಲಿಗೆ ಬರುತ ಕಂಡನು
ಲೀಲೆಯಲಿ ನರ್ತಿಸುವ ನವಿಲನು ಬಲದೊಳಡಹಾಯ್ದು ।
ಮೇಲೆ ಹಂಗನ ಬಲನ ಹರಿಣೀಜಾಲದೆಡನನು ತಿದ್ದುವಳಿಯ ವಿ
ಶಾಲಶಕುನವನಾಲಿಸುತ ಹರುಷದಲಿ ನಡೆತಂದ ॥

ಸಂ.೧ ಪ.೧೮

(ii) "ಮುರರಿಪು ಫಲುಗುಣಗೆ ಮೈಗೊಡುವನೋ ಕೌರವನಿ
ಗೊಳಗಹನೊ ತಿಳಿಯಲರಿದೆನುತಿರಲು ಬಲಗಣ್ಣಲುಗಿತು"

ಸಂ.೨ ಪ.೧

(iii) "ಕರತಳದಿಂದ ನಾಸಿಕದೆರಲ ಚಂದ್ರೋದಯವನೀಕ್ಷಿಸಿ
ಹೊಱವಂಟ" ಸಂ.೭ ಪ.೫

ಕುಮಾರವ್ಯಾಸನು ವ್ಯಾಸಭಾರತದ ಶ್ಲೋಕಗಳನ್ನು ಕನ್ನಡಕ್ಕೆ ಭಾಷಾಂತರಮಾಡಿರುವುದಕ್ಕೂ, ಭಾವಾನುವಾದ ಮಾಡಿರುವುದಕ್ಕೂ ಉದ್ಯೋಗಪರ್ವದಲ್ಲಿ ದೊರೆಯುವ ಉದಾಹರಣೆಗಳು.

೧. "ಧಾರ್ತರಾಷ್ಟ್ರೋ ಹ್ಯಯುದ್ಧೇನ ನ ರಾಜ್ಯಂ ದಾತುಮಿಚ್ಛತಿ"

ವ್ಯಾ. ಭಾ.ಅ.3 ಶ್ಲೋ. 22

"ಕಾಳಗದೊಳಲಗಿನ ಮೊನೆಯೊಳಲ್ಲದೆ ಮಹಿಯ ಕೊಡುವನೆ
ಕೌರವೇಶ್ವರನು" ಕು.ವ್ಯಾ. ಭಾ.ಸಂ.೧ ಪ. ೧೦

೨. "ವಿವಾಹಾರ್ಥಮಾನೀತಾ ವಯಂ"

ವ್ಯಾ.ಭಾ.ಅ. 5 ಶ್ಲೋ.5

"ಮದುವೆಗೋಸುಗ ಬಂದೆವಾವ್"

ಕು.ವ್ಯಾ.ಭಾ.ಸಂ.೧ ಪ.೧೨

೩. "ಮತ್ಸಂಹನನತುಲ್ಯಾನಾಂ ಗೋಪಾನಾಮರ್ಬುದಂ ಮಹತ್ ।
ನಾರಾಯಣ ಇತಿ ಖ್ಯಾತಾಃ ಸರ್ವೇ ಸಂಗ್ರಾಮಯೋಧಿನಃ ॥
ತೇ ವಾ ಯುಧಿ ದುರಾಧರ್ಷಾ ಭವಂತ್ವೇಕಸ್ಯ ಸೈನಿಕಾಃ ।
ಅಯುಧ್ಯಮಾನಸ್ಸಂಗ್ರಾಮೇ ನ್ಯಸ್ತಶಸ್ತ್ರೋಽಹಮೇಕತಃ ॥"
ವ್ಯಾ.ಭಾ.ಅ.7 ಶ್ಲೋ. 20-21

"ಆದಡಾವಿಹೆವೊಂದುಕಡೆಯಲಿ ಕಾದುವವರಾವಲ್ಲ ಬಲಸಹ
ಯಾದವರು ಕೃತವರ್ಮ ನಾರಾಯಣಮಹಾಸೇನೆ ।
ಕಾದುವವರಿವರೊಂದು ಕಡೆಯೆರಡಾದುದಿದಱೊಳು ಮೆಚ್ಚಿದುದ ನೀ
ನಾದರಿಸಿ ವರಿಸೆಂದು ಪಾರ್ಥಂಗಸುರರಿಪು ನುಡಿದ ॥"
ಕು.ವ್ಯಾ.ಭಾ.ಸಂ.೧ ಪ.೩೩

೪. "ಏಕಯಾ ದ್ವೌ ವಿನಿಶ್ಚಿತ್ಯ ತ್ರೀಂಶ್ಚತುರ್ಭಿರ್ವಶೇ ಕುರು ।
ಪಂಚ ಜಿತ್ವಾ ವಿದಿತ್ವಾ ಷಟ್ ಸಪ್ತ ಹಿತ್ವಾ ಸುಖೀ ಭವ ॥"
ವ್ಯಾ.ಭಾ.ಅ.32 ಶ್ಲೋ.52

"ಒಂದರಿಂದೆರಡಹುದನಱಿ ಮೂಱಿಂದವನು ತಿಳಿ ನಾಲ್ಕಱೊಳು ಮನ
ಸಂದಿಸದಿರೈದಱೊಳು ವರ್ಜಿಪುದಾಱನೇಳಱೊಳು ॥"
ಕು.ವ್ಯಾ.ಭಾ.ಸಂ.೩ ಪ.೩

೫. "ಸತ್ಯಂ ಸ್ವರ್ಗಸ್ಯ ಸೋಪಾನಂ ಪಾರಾವಾರಸ್ಯ ನೌರಿವ"
ವ್ಯಾ.ಭಾ.ಅ. 32 ಶ್ಲೋ 55

"ಭೂಪ ಕೇಳೈ ಸತ್ಯವೊಂದೇ ಸೋಪನವು ಸಗ್ಗಕ್ಕೆ ಜನ್ಮದ
ಕೂಪರಕ್ಕಿದು ನಾವೆಯಾಗಿಹುದೆಂದನಾ ವಿದುರ ॥"
ಕು.ವ್ಯಾ.ಭಾ.ಸಂ.೩ ಪ.೮

೬. "ದ್ವಾವಿಮೌ ಪುರುಷವ್ಯಾಘ್ರ ಸೂರ್ಯಮಂಡಲಭೇದಿನೌ ।
ಪರಿವ್ರಾಡ್ಯೋಗಯುಕ್ತಶ್ಚ ರಣೇ ಚಾಭಿಮುಖೋ ಹತಃ ॥"
ವ್ಯಾ.ಭಾ.ಅ.32 ಶ್ಲೋ.69

"ಧರೆಯೊಳಗೆ ರವಿಮಂಡಲವನೊಡೆದುರವಣಿಸಿ ಹಾಯ್ವವ
ರು ದಿಟವಿಬ್ಬರು ಕಣಾ ಸನ್ಯಾಸಿಯಾಗಿಯೆ ಯೋಗಮಾರ್ಗದೊಳು ।
ಹರಣವನು ಬಿಟ್ಟವರು ಘನಸಂಗರದೊಳಭಿಮುಖರಾಗಿ ಮರಣಾಂ
ತರವನೈದಿದವರುಗಳವನೀಪಾಲ ಕೇಳೆಂದ ॥"
ಕು.ವ್ಯಾ.ಭಾ.ಸಂ.೩ ಪ.೧೮

೭. "ದ್ವಾವಿಮೌ ಪುರುಷೌ ರಾಜನ್ ಸ್ವರ್ಗಸ್ಯೋಪರಿ ತಿಷ್ಠತಃ ।
ಪ್ರಭುಶ್ಚ ಕ್ಷಮಯಾ ಯುಕ್ತೋ ದರಿದ್ರಶ್ಚ ಪ್ರದಾನವಾನ್ ॥"
ವ್ಯಾ.ಭಾ.ಅ.32 ಶ್ಲೋ.66

"ಸುರರ ಮೇಳದೊಳಾಡುವವರಿಬ್ಬರೆ ಕಣಾ ಪ್ರಭುವಾಗಿಯುಃ ಕ್ಷಮೆ
ವೆರಸಿದವನು ದರಿದ್ರನಾಗಿಯುಃ ದಾನಿಯೆನಿಸುವನು ॥"
ಕು.ವ್ಯಾ.ಭಾ.ಸಂ.೩ ಪ.೨೦

೮. "ದ್ವಾವಿಮೌ ಗ್ರಸತೇ ಭೂಮಿಃ ಸರ್ಪೋ ಬಿಲಶಯಾವಿವ ।
ರಾಜಾನಂ ಚಾಪ್ಯಯೋದ್ಧಾರಂ ಬ್ರಾಹ್ಮಣಂ ಚಾಪ್ರವಾಸಿನಂ ॥"
ವ್ಯಾ.ಭಾ.ಅ.32 ಶ್ಲೋ.61

"ಧರಣಿನುಂಗುವಳಿಬ್ಬರನು ಸಂಗರವ ಜಯಿಸದ ನೃಪನ ದೇಶಾಂ
ತರವ ಚರಿಸದ ಪಂಡಿತನನಿದು ಶಾಸ್ತ್ರಸಿದ್ಧವಲೆ।
ಅರಸುಗುಲದಲಿ ಪುಟ್ಟಿ ಸಾಪತ್ನರಿಗಳುಕಿ ದೇಹಾಭಿಲಾಷೆಯೊ
ಳುರಗನಂತೊಳಗಿಹುದು ಲೇಸಲ್ಲೆಂದನಾ ವಿದುರ ॥
ಕು.ವ್ಯಾ.ಭಾ.ಸಂ.೩ ಪ.೨೧

೯. "ತ್ರಿವಿಧಾಃ ಪುರುಷಾ ರಾಜನ್ನುತ್ತಮಾಧಮಮಧ್ಯಮಾಃ ।
ನಿಯೋಜಯೇದ್ಯಥಾವತ್ತಾನ್ ತ್ರಿವಿಧೇಷ್ವೇವ ಕರ್ಮಸು ॥
ತ್ರಯ ಏವಾ ಧನಾ ರಾಜನ್ ಭಾರ್ಯಾ ದಾಸಸ್ತಥಾ ಸುತಃ ।
ಯತ್ತೇ ಸಮಧಿಗಚ್ಛಂತಿ ಯಸ್ಯೈತೇ ತಸ್ಯ ತದ್ಧನಂ ॥"
ವ್ಯಾ.ಭಾ.ಅ.32 ಶ್ಲೋ.71–72

"ಪಿತನಿರಲು ದಾತಾರನಿರೆ ನಿಜಪತಿಯಿರಲು ಸುತದಾಸಸತಿಯೀ
ತ್ರಿತಯದೊಳ್ ಸ್ವಾತಂತ್ರ್ಯ ತಾನಿಲ್ಲಾವ ಕಾಲದೊಳು ।
ಕ್ಷಿತಿಯೊಳುತ್ತಮ ಮಧ್ಯಮಾಧಮಗತಿಯ ಪುರುಷತ್ರಯವ
ನವರಾಯತವನವರಿಂಗಿತವನಱಿವೈ ರಾಯ ನೀನೆಂದ ॥"
ಕು.ವ್ಯಾ.ಭಾ.ಸಂ.೩ ಪ.೨೬

೧೦. "ಚತ್ವಾರಿ ತೇ ತಾತ ಗೃಹೇ ವಸಂತು
ಶ್ರಿಯಾಭಿಜುಷ್ಟಸ್ಯ ಗೃಹಸ್ಥಧರ್ಮೇ
ವೃದ್ಧೋ ಜ್ಞಾತಿರವಸನ್ನಃ ಕುಲೀನಃ
ಸಖಾ ದರಿದ್ರೋ ಭಗಿನೀ ಚಾನಪತ್ಯಾ ॥"
ವ್ಯಾ.ಭಾ.ಅ. 32 ಶ್ಲೋ.78

" ಹಿರಿಯ ಮಾನೋನ್ನತಿಕೆಯನು ಬಂಧುರದ ಧನವನು ಗಾರುಹಸ್ತ್ಯದ
ಪರಮಧರ್ಮವನಾವ ಬಯಸುವನವನ ಭವನದೊಳು ।
ನಿರುತವೃದ್ಧಜ್ಞಾತಿವಂಶೋತ್ತರವಿಷಣ್ಣನು ಪ್ರಿಯದರಿದ್ರನು
ವರಭಗಿನಿಯನಪತ್ಯೆಯಿಂತೀ ನಾಲ್ವರಿರಲೆಂದ ॥ "

ಕು.ವ್ಯಾ.ಭಾ.ಸಂ. ಪ. ೩೩೩

೧೧. " ಚತ್ವಾರ್ಯಾಹ ಮಹಾರಾಜ ಸಾದ್ಯಸ್ಕಾನಿ ಬೃಹಸ್ಪತಿಃ ।
ಪೃಚ್ಛತೇ ತ್ರಿದಶೇಂದ್ರಾಯ ತಾನೀಮಾನಿ ನಿಬೋಧ ಮೇ ॥
ದೇವತಾನಾಂ ಚ ಸಂಕಲ್ಪಂ ಅನುಭಾವಂ ಚ ಧೀಮತಾಂ ।
ವಿನಯಂ ಕೃತವಿದ್ಯಾನಾಂ ವಿನಾಶಂ ಪಾಪಕರ್ಮಣಾಂ ॥"

ವ್ಯಾ.ಭಾ.ಅ. 32 ಶ್ಲೋ. 79–80

" ಧರಣಿಪತಿ ಚಿತ್ತೈಸು ಪೂರ್ವದಲೊರೆದನಿಂದ್ರಂಗಮರಗುರು
ದೇವರೊಳು ಸಂಕಲ್ಪವನು ಕೃತವಿದ್ಯರೊಳು ವಿನಯವನು ।
ಹಿರಿಯರೊಳು ಸಂಭಾವನೆಯ ಸಂಹರಣಪದವನು ಪಾಪಕಾರ್ಯದೊ
ಳಿರದೆ ಮಾಡುವುದೆಂಬ ನಾಲ್ಕನು ರಾಯ ಕೇಳೆಂದ ॥"

ಕು.ವ್ಯಾ.ಭಾ.ಸಂ.೩ ಪ೩೪

೧೨. " ಪಂಚಾಗ್ನಯೋ ಮನುಷ್ಯೇಣ ಪರಿಚರ್ಯಾಃ ಪ್ರಯತ್ನತಃ ।
ಪಿತಾ ಮಾತಾಗ್ನಿರಾತ್ಮಾ ಚ ಗುರುಶ್ಚ ಭರತರ್ಷಭ ॥
ಪಂಚೈವ ಪೂಜಯನ್ ಲೋಕೇ ಯಶಃ ಪ್ರಾಪ್ನೋತಿ ಕೇವಲಂ ।
ದೇವಾನ್ ಪಿತೄನ್ ಮನುಷ್ಯಾಂಶ್ಚ ಭಿಕ್ಷೂನತಿಥಿಪಂಚಮಾನ್ ॥"

ವ್ಯಾ.ಭಾ.ಅ.32 ಶ್ಲೋ.81–82

" ಪಿತನು ಗುರು ಶಿಖಿಯಾತ್ಮ ತಾಯೆಂಬತುಳಪಂಚಾಗ್ನಿಯನು ಕ್ರಮದಿಂ
ಪ್ರತಿದಿನವು ಪರಿಚರಿಯಮಾಳ್ಪುದು ಲೇಸ ಬಯಸುವೊಡೆ ।
ಪಿತೃಗಳನು ದೇವರನು ಭೂತಗಳತಿಥಿಗಳ ಯತಿಗಳನು ಪೂಜಿಸಿ
ವಿತತಧರ್ಮವ ಕೀರ್ತಿಯನು ಪಡೆದವನೆ ಸುತನೆಂದ ॥ "

ಕು.ವ್ಯಾ.ಭಾ.ಸಂ. ೩ಪ.೩೬

೧೩. " ಷಡ್ದೋಷಾಃ ಪುರುಷೇಣೇಹ ಹಾತವ್ಯಾ ಭೂತಿಮಿಚ್ಛತಾ ।
ನಿದ್ರಾ ತಂದ್ರೀ ಭಯಂ ಕ್ರೋಧ ಆಲಸ್ಯಂ ದೀರ್ಘಸೂತ್ರತಾ ॥ "

ವ್ಯಾ.ಭಾ.ಅ.32 ಶ್ಲೋ.85

" ಸಿರಿಗೆ ಕಂಟಕವಾಱುದೋಷವನೊರೆವೆನಾಲಸ್ಯವನು ಭಯವನಾ
ಮಱವೆಯನು ನಿದ್ರೆಯನು ಕೋಪವ ದೀರ್ಘಸೂತ್ರತೆಯ।
ಪರಿಹರಿಸಬಲ್ಲವನಿಪಾಲಂಗೆರವೆನಿಸದೈಶ್ವರ್ಯವವನೂ
ರ್ವರೆಯೊಳಗೆ ರಾಜೋತ್ತಮನು ಧೃತರಾಷ್ಟ್ರ ಕೇಳೆಂದ ॥"

ಕು.ವ್ಯಾ.ಭಾ.ಸಂ.೩ ಪ.೪೩

೧೪. "ಷಡಿಮಾನ್ ಪುರುಷೋ ಜಹ್ಯಾತ್ ಭಿನ್ನಾಂ ನಾವಮಿವಾರ್ಣವೇ।
ಅಪ್ರವಕ್ತಾರಮಾಚಾರ್ಯಂ ಅನಧೀಯಾನಮೃತ್ವಿಜಂ ॥
ಅರಕ್ಷಿತಾರಂ ರಾಜಾನಂ ಭಾರ್ಯಾಂ ಚಾಪ್ರಿಯವಾದಿನೀಂ।
ಗ್ರಾಮಕಾಮಂ ಚ ಗೋಪಾಲಂ ವನಕಾಮಂ ಚ ನಾಪಿತಂ ॥"

ವ್ಯಾ.ಭಾ.ಅ.32 ಶ್ಲೋ.86–87

" ಬಿಸುಟು ಕಳೆವುದು ನೀತಿಶಾಸ್ತ್ರವನುಸಿರದಾಚಾರಿಯನ ವೇದ
ಪ್ರಸರವಿಲ್ಲದ ಋತ್ವಿಜನ ರಕ್ಷಿಸದ ಭೂಭುಜನ।
ಒಸೆಯದಬಲೆಯನೂರೊಳಾಡುವ ಪಶುವ ಕಾಯ್ವನನಡವಿಗುಱಿಯಹ
ನುಸಿಯ ನಾಪಿತನಿಂತಱುವರನು ರಾಯ ಕೇಳೆಂದ ॥"

ಕು.ವ್ಯಾ.ಭಾ.ಸಂ.೩. ಪ.೪೬

೧೫. " ಸತ್ಯಾಂಕಮುಪಧಾನಂ ತು ಕೃತ್ವಾ ಶೇತೇ ಜನಾರ್ದನಃ।
ಅರ್ಜುನಾಂಕಗತೌ ಪಾದೌ ಕೇಶವಸ್ಯೋಪಲಕ್ಷಯೇ ॥"

ವ್ಯಾ.ಭಾ.ಅ.47. ಶ್ಲೋ.6

" ದೇವನಿದ್ದನು ಸತ್ಯಭಾಮಾದೇವಿಯರ ನಸುಮಲಗಿಯರ್ಜುನ
ದೇವನಂಕದ ಮೇಲೆ ಸಿರಿಪದಕಮಲವನು ನೀಡಿ ॥"

ಕು.ವ್ಯಾ.ಭಾ.ಸಂ ೫. ಪ ೫.

೧೬. " ಸತ್ಕೃತಶ್ಚಾನ್ನಪಾನಾಭ್ಯಾಂ ಅಹಂ ವೈ ಲಬ್ಧಸತ್ಕ್ರಿಯಃ।
ಅಂಜಲಿಂ ಮೂರ್ಧ್ನಿ ಸಂಧಾಯ ಸಂದೇಶಂ ಚಾಭ್ಯಚೋದಯಂ॥"

ವ್ಯಾ.ಭಾ.47 ಶ್ಲೋ. 14

" ನಾವು ಬರಲೆಮಗುಚಿತದಲಿ ಸಂಭಾವನೆಯ ಮಾಡಿದರು ನಮಗಿ
ನ್ನಾವುದನು ನೇಮಿಸಿದಿರೆನಲಿಂತೆಂದನಸುರಾರಿ ॥"

ಕು.ವ್ಯಾ.ಭಾ.ಸಂ.೫. ಪ.೫

೧೭. “ಗೋವಿಂದೇತಿ ಯದಾಕ್ರಂದತ್ ಕೃಷ್ಣಾ ಮಾಂ ದೂರವಾಸಿನಂ।
ಋಣಂ ಪ್ರವೃದ್ಧಮಿವ ಮೇ ಹೃದಯಾನ್ನಾಪಸರ್ಪತಿ ॥”

ವ್ಯಾ.ಭಾ.47 ಶ್ಲೋ. 23

“ಕಮಲಮುಖಿ ಸುಲಿಪಡೆದು ಲಕ್ಷ್ಮೀರಮಣ ಲಕ್ಷ್ಮೀರಮಣ ಲಕ್ಷ್ಮೀ
ರಮಣ ಎಂದೊಱಲಿದರೆ ಸಂಜಯ ನೊಂದೆ ನಾನೆಂದ ॥”

ಕು.ವ್ಯಾ.ಭಾ.ಸಂ.೫. ಪ.೬

೧೮. “ಕುಶಸ್ಥಲಂ ವೃಕಸ್ಥಲಂ ಮಾಸಂತೀಂ ವಾರಣಾವತಂ।
ಅವಸಾನಂ ಚ ಗೋವಿಂದ! ಕಿಂಚಿದೇವಾತ್ರ ಪಂಚಮಂ॥
ಪಂಚ ನಸ್ತಾತ ದೀಯಂತಾಂ ಗ್ರಾಮಾ ವಾ ನಗರಾಣಿ ವಾ।
ವಸೇಮ ಸಹಿತಾ ಯೇಷು ಮಾ ಚ ನೋ ಭರತಾನಶನ್॥”

ವ್ಯಾ.ಭಾ.ಅ.65 ಶ್ಲೋ.21–22

“ವರಕುಶಸ್ಥಳವನು ವೃಕಸ್ಥಳಪುರವ ಮಾಸಂತಿಯನು ಕೌರವ
ಧರಣಿಪಾಲನೊಳೀಸಿ ಕೊಡುವುದು ವಾರಣಾವತವ।
ಶರಧಿಮೇರೆಯೊಳೈದನೆಯ ಪುರವರವನೊಲಿದುದ ಕೊಡಲಿ ಮನಮ
ತ್ಸರವ ಮಱೆದೋಲೈಸುವೆವು ಧೃತರಾಷ್ಟ್ರಭೂಪತಿಯ ॥”

ಕು.ವ್ಯಾ.ಸಂ.೬. ಪ.೫

೧೯. “ಏತಚ್ಛ್ರುತ್ವಾ ಮಹಾಬಾಹುಃ ಕೇಶವಃ ಪ್ರಹಸನ್ನಿವ।
ಅಭೂತಪೂರ್ವಂ ಭೀಮಸ್ಯ ಮಾರ್ದವೋಪಹಿತಂ ವಚಃ॥
ಗಿರೇರಿವ ಲಘುತ್ವಂ ತತ್ **ಶೀತತ್ವಮಿವ ಪಾವಕೇ**।
ಮತ್ವಾ ರಾಮಾನುಜಶ್ಶೌರಿಃ ಶಾರ್ಙ್ಗಧನ್ವಾ ವೃಕೋದರಂ॥”

ವ್ಯಾ.ಭಾ.ಅ.68. ಶ್ಲೋ.1–2

“ಎಲೆ ಮಹಾದೇವಾಯ್ತು ಹಾಲಾಹಲ ಸುಧಾರಸವುಕ್ಕಿ**ದುರಿಯು
ಗ್ಗಳವು ಸೀತಳವಾಯ್ತು** ಸಿಡಿಲಾಟೋಪ ನಯವಾಯ್ತು।
ಕೊಳುಗುಳಕೆ ಪವಮಾನನಂದನನಳುಕಿದನು ಮಝು ಮಾಯೆ ಕುಂತೀ
ಲಲನೆ ಹೆತ್ತಳು ಸುತರನೆಂದನು ಶೌರಿ ನಸುನಗುತ ॥

ಕು.ವ್ಯಾ.ಭಾ.ಸಂ.೬. ಪ.೧೧

೨೦. “ರಥಮಾರೋಪ್ಯತಾಂ ಶಂಖಃ ಚಕ್ರಂ ಚ ಗದಯಾ ಸಹ।
ಉಪಾಸಙ್ಗಾಶ್ಚ ಶಕ್ತ್ಯಶ್ಚ ಸರ್ವಪ್ರಹರಣಾನಿ ಚ॥

ದುರ್ಯೋಧನೋ ಹಿ ದುಷ್ಟಾತ್ಮಾ ಕರ್ಣಶ್ಚ ಸಹಸೌಬಲಃ ।
ನ ಚ ಶತ್ರುರವಜ್ಞೇಯೋ ದುರ್ಬಲೋಽಪಿ ಬಲೀಯಸಾ ॥"
ವ್ಯಾ.ಭಾ.ಅ.74. ಶ್ಲೋ12-13

"ಧನುವ ಶಸ್ತ್ರಸುದರ್ಶನಂಗಳ ಕನಕಕವಚ ಕೃಪಾಣವನು ಸಂ
ದನದೊಳಿರಿಸೆಂದಸುರರಿಪು ಸಾತ್ಯಕಿಗೆ ನೇಮಿಸಿದ ॥"
ಕು.ವ್ಯಾ.ಭಾ.ಸಂ.೭ ಪ.೬

೨೧. "ವಾಜಿಭಿಸ್ಸೈನ್ಯಸುಗ್ರೀವಮೇಘಪುಷ್ಪಬಲಾಹಕೈಃ ।
ಸೂತಸ್ಸಂಪಾದಯಾಂಚಕ್ರೇ ಸಂಪನ್ನೈಸ್ಸರ್ವಸಂಪದಾ ॥"
ವ್ಯಾ.ಭಾ.ಅ.74. ಶ್ಲೋ.19

"ಘನಬಳಾಹಕ ಸೈನ್ಯಸುಗ್ರೀವನನು ನಿರ್ಮಳ ಮೇಘಪುಷ್ಪನ
ನನುವಿನಲಿ ಹೂಡಿದನು ಸಾತ್ಯಕಿ ಹೇಮಮಯರಥಕೆ ॥
ಕು.ವ್ಯಾ.ಭಾ.ಸಂ.೭. ಪ.೬

೨೨. "ಮಮ ಪುತ್ರಾಶ್ಚ ಪೌತ್ರಾಶ್ಚ ಸರ್ವೇ ದುರ್ಯೋಧನಾದೃತೇ ।
ಪ್ರತ್ಯುದ್ಯಾಸ್ಯಂತಿ ದಾಶಾರ್ಹಂ ರಥೈರ್ವ್ಯಷ್ಟೈಸ್ಸ್ವಲಂಕೃತಾಃ ॥"
ವ್ಯಾ.ಭಾ.ಅ.76. ಶ್ಲೋ.14

"ಎಲೆ ವಿದುರ ಕೇಳೈ ಸುಯೋಧನನುಳಿಯಲಖಿಳಮಹಾಮಹೀಶರು
ನಳಿನನಾಭನನಿದಿರುಗೊಳಲಿ" ಕು.ವ್ಯಾ.ಭಾ.ಸಂ.೭. ಪ.೧೭

೨೩. "ಯತ್ತತ್ ಸತ್ಕಾರಸಂಯುಕ್ತಂ ದೇಯಂ ವಸು ಜನಾರ್ದನೇ ।
ಅನೇಕರೂಪಂ ರಾಜೇಂದ್ರ! ತನ್ನ ದೇಯಂ ಕದಾಚನ ॥"
ವ್ಯಾ.ಭಾ.ಅ.77. ಶ್ಲೋ.೩

" ತೆಗೆದ ವಸ್ತುವನೀಯದಿರು ಹರಿ ಹಗೆ ಕಣಾ "
ಕು.ವ್ಯಾ.ಭಾ.ಸಂ. ೭. ಪ. ೧೮

೨೪. " ಇದಂ ತು ಸುಮಹತ್ಕಾರ್ಯಂ ಶೃಣು ಮೇ ಯತ್ ಸಮರ್ಥಿತಂ ।
ಪರಾಯಣಂ ಪಾಂಡವಾನಾಂ ನಿಯಂಸ್ಯಾಮಿ ಜನಾರ್ದನಂ ।
ತಸ್ಮಿನ್ ಬದ್ಧೇ ಭವಿಷ್ಯಂತಿ ವೃಷ್ಣಯಃ ಪೃಥಿವೀ ತಥಾ ।
ಪಾಂಡವಾಶ್ಚ ವಿಧೇಯಾ ಮೇ ಸ ಚ ಪ್ರಾತರಿಹೇಷ್ಯತಿ ॥"
ವ್ಯಾ.ಭಾ.ಅ.77. ಶ್ಲೋ. 13-14

" ನಗರಿಗಾತನು ಬರಲಿ ಯಾದವನಗಡುತನಕೌಷಧಿಯ ಬಲ್ಲೆನು
ಬಿಗಿದು ಕೆಡಹುವೆನೆಂದು ನುಡಿದನು ಕೌರವರ ರಾಯ ॥"

ಕು.ವ್ಯಾ.ಭಾ.ಸಂ. ೭. ಪ. ೧೮

೨೫. " ಪಾಪಸ್ಯಾಸ್ಯ ನೃಶಂಸಸ್ಯ ತ್ಯಕ್ತಧರ್ಮಸ್ಯ ದುರ್ಮತೇಃ ।
ನೋತ್ಸಹೇऽನರ್ಥಸಂಯುಕ್ತಾಃ ಶ್ರೋತುಂ ವಾಚಃ ಕಥಂಚನ ॥
ಇತ್ಯುಕ್ತ್ವಾ ಭರತಶ್ರೇಷ್ಠೋ ವೃದ್ಧಃ ಪರಮಮನ್ಯುಮಾನ್ ।
ಉತ್ಥಾಯ ತಸ್ಮಾತ್ ಪ್ರಾತಿಷ್ಠತ್ ಭೀಷ್ಮಸ್ಸತ್ಯಪರಾಕ್ರಮಃ ॥"

ವ್ಯಾ.ಭಾ.ಅ. 77. ಶ್ಲೋ. 22–23

" ಈತ ನುಡಿವೀ ಮಾತಕೇಳಲು ಪಾತಕವು ಬಹುದೆಂದು ಗಂಗಾ
ಜಾತನೋಲಗದಿಂದ ಸರಿದನು ತನ್ನ ಮಂದಿರಕೆ ॥"

ಕು.ವ್ಯಾ ಭಾ.ಸಂ. ೭. ಪ. ೧೯

೨೬. " ಅವತೀರ್ಯ ರಥಾಚ್ಛೌರಿಃ ಕೈಲಾಸಶಿಖರೋಪಮಾತ್ ।
ನಗಮೇಘಪ್ರತೀಕಾಶಾಂ ಜ್ವಲಂತೀಮಿವ ತೇಜಸಾ ॥"

ವ್ಯಾ.ಭಾ.ಅ. 81. ಶ್ಲೋ. 45

" ಸುರಗಿರಿಯ ತುದಿಯಿಂದ ಮುರಿಮಿಂಚುಗಳ ಮುಗಿ
ಲಿಳಿದಂತೆ ಭೂತಳಕೆ ಅಂದು ನೀಲಾಚಲನಿಕಾಯದ
ಸುಂದರಾಂಗದ ಕೌಸ್ತುಭಪ್ರಭೆಯಿಂದ ಕಾಂಚನರಥವ
ನಿಳಿದನು ದಾನವಧ್ವಂಸಿ ॥" ಕು.ವ್ಯಾ.ಭಾ.ಸಂ.೮. ಪ.೬೨

೨೭. " ಸಂಪ್ರೀತಿಭೋಜ್ಯಾನ್ಯನ್ನಾನಿ ಆಪದ್ಭೋಜ್ಯಾನಿ ವಾ ಪುನಃ ।
ನ ಚ ಸಂಪ್ರೀಯಸೇ ರಾಜನ್ ! ನ ಚೈವಾಪದ್ಗತಾ ವಯಂ ॥"

ವ್ಯಾ.ಭಾ.ಅ. 79. ಶ್ಲೋ. 27

"ಪ್ರಿಯದಲುಂಬುದು ಮೇಣು ವಿಪದಾಶ್ರಯದಲುಂಬುದು ಮಾನವರಿಗಿದು
ನಿಯತವಂತಲ್ಲಿದುವೆ ಕೇಳ್ಕೈ ಕೌರವರರಾಯ ।
ಪ್ರಿಯನು ನೀನೆಮಗಲ್ಲ ವಿಪದಾಶ್ರಯವು ತಾ ಮುನ್ನಿಲ್ಲ ನಿನ್ನಾ
ಲಯದೊಳೆಂತೆಮಗೂಟ ಸಂಭವಿಸುವುದು ಹೇಳೆಂದ ॥"

ಕು.ವ್ಯಾ.ಭಾ.ಸಂ.೮. ಪ.೭೫

೨೮. " ದ್ವಿಷದನ್ನಂ ನ ಭೋಕ್ತವ್ಯಂ ದ್ವಿಷಂತಂ ನೈವ ಭೋಜಯೇತ್ ।
ಪಾಂಡವಾನ್ ದ್ವಿಷಸೇ ರಾಜನ್ ಮಮ ಪ್ರಾಣಾ ಹಿ ಪಾಂಡವಾಃ ॥"

ವ್ಯಾ.ಭಾ.ಅ.79. ಶ್ಲೋ. 34

"ಹಗೆಯನುಣಿಸುವುದಾಗದೈ ವೈರಿಗಳ ನಿಳಯದೊಳನ್ನಪಾನಾ
ದಿಗಳ ಕೊಳಲಾಗದು ನಿದಾನಿಸೆ ರಾಜನೀತಿಯಿದು।
ಬಗೆಯೆ ನೀ ಪಾಂಡವರಿಗಹಿತನು ವಿಗಡಪಾಂಡವರೆನ್ನ ಜೀವನ
ಹಗೆಯ ನಂಬುವೆನೆಂತು ಹೇಳೈ ಕೌರವರರಾಯ॥"

ಕು.ವ್ಯಾ.ಭಾ.ಸಂ.೮. ಪ.೭೬

೨೯. "ದುರ್ಯೋಧನ! ನ ಶೋಚಾಮಿ ತ್ವಾಮಹಂ ಭರತರ್ಷಭ।
ಇಮೌ ತು ವೃದ್ಧೌ ಶೋಚಾಮಿ ಗಾಂಧಾರೀಂ ಪಿತರಂ ಚ ತೇ॥
ಯಾವನಾಥೌ ಭವಿಷ್ಯೇತೇ ತ್ವಯಾ ನಾಥೇನ ದುರ್ಹೃದಾ।
ಹತಮಿತ್ರೌ ಹತಾಮಾತ್ಯೌ ಲೂನಪಕ್ಷಾವಿವಾಂಡಜೌ॥
ಭಿಕ್ಷುಕೌ ವಿಚರಿಷ್ಯೇತೇ ಶೋಚಂತೌ ಪೃಥಿವೀಮಿಮಾಂ॥"

ವ್ಯಾ.ಭಾ.ಅ. 112. ಶ್ಲೋ. 20–21–22

"ಕಡೆಗೆ ಧೃತರಾಷ್ಟ್ರಾವನೀಶನು ಮಡದಿಸಹಿತಲನಾಥನಾಗಿಯೆ
ಕೆಡುವನೆಂಬುದ ಬಲ್ಲೆನಾ ಪಾಂಡವರ ರಾಜ್ಯದಲಿ।
ಪಡಿಗೆ ಪವಮಾನಜನ ಸಮುಝುವ ಪಡೆಯದಿಹತರುವಾಯ ನಿನಗದು
ನಡಸಿಕೊಡುವುದು ತಪ್ಪದಕಟಕಟೆಂದನಾ ವಿದುರ॥"

ಕು.ವ್ಯಾ.ಭಾ.ಸಂ.೯, ಪ.೩೪

೩೦. "ಯಾವದ್ಧಿ ತೀಕ್ಷ್ಣಯಾ ಸೂಚ್ಯಾ ವಿಧ್ಯೇದಗ್ರೇಣ ಮಾಧವ।
ತಾವದಪ್ಯಪರಿತ್ಯಾಜ್ಯಂ ಭೂಮೇರ್ನಃ ಪಾಂಡವಾನ್ ಪ್ರತಿ॥"

ವ್ಯಾ.ಭಾ.ಅ. 114. ಶ್ಲೋ. 26

"ನೆಲನ ಕಡೆಯಲಿ ಮುಳ್ಳುಮೊನೆಯುಚ್ಚಳಿಪ ಧರಣಿಯ
ನಿತ್ತೆನಾದಡೆ ಬಳಿಕ ನೀ ನಗು ಹೋಗು"

ಕು.ವ್ಯಾ.ಭಾ.ಸಂ.೯. ಪ. ೩೨

೩೧. "ಏವಂ ಬ್ರುವತಿ ದಾಶಾರ್ಹೇ ದುರ್ಯೋಧನಮಮರ್ಷಣಂ।
ದುಶ್ಶಾಸನ ಇದಂ ವಾಕ್ಯಂ ಅಬ್ರವೀತ್ ಕುರುಸಂಸದಿ॥
ನ ಚೇತ್ ಸಂಧಾಸ್ಯಸೇ ರಾಜನ್ ಸ್ವೇನ ಕಾಮೇನ ಪಾಂಡವೈಃ।
ಬಧ್ವಾ ಕಿಲ ತ್ವಾಂ ದಾಸ್ಯಂತಿ ಕುಂತೀಪುತ್ರಾಯ ಕೌರವಾಃ॥
ವೈಕರ್ತನಂ ತ್ವಾಂ ಚ ಮಾಂ ಚ ತ್ರೀನೇತಾನ್ ಮನುಜರ್ಷಭ।
ಪಾಂಡವೇಭ್ಯಃ ಪ್ರದಾಸ್ಯಂತಿ ಭೀಷ್ಮೋ ದ್ರೋಣಃ ಪಿತಾ ಚ ತೇ॥"

ವ್ಯಾ.ಭಾ.ಅ.115 ಶ್ಲೋ.23–24–25

"ಮನದ ಸಂಕೇತದಲಿ ದುರ್ಯೋಧನನ ಕಟ್ಟಲು ವಿದುರ ಗಂಗಾ
ತನಯ ಧೃತರಾಷ್ಟ್ರಾವನಿಪರಾಲೋಚಿಸಿದ ಹದನ ।
ಮನದೊಳಱಿದನು ಬಳಿಕ ದುಶ್ಶಾಸನನು ದುರ್ಯೋಧನಗೆ
ಯಿನಿಬರನೆನಹ ಬಿನ್ನಹವಮಾಡಿದನು ಖಾತಿಯಲಿ ಕಳವಳಿಸೆ ॥"

ಕು.ವ್ಯಾ.ಭಾ.ಸಂ.೯ ಪ. ೩೫

೩೨. "ಅಂಗುಷ್ಠಮಾತ್ರಾಸ್ತ್ರಿದಶಾ ಬಭೂವುಃ ಪಾವಕಾರ್ಚಿಷಃ ।
ತಸ್ಯ ಬ್ರಹ್ಮಾ ಲಲಾಟಸ್ಥೋ ರುದ್ರೋ ವಕ್ಷಸಿ ಚಾಭವತ್॥
ಲೋಕಪಾಲಾ ಭುಜೇಷ್ವಾಸನ್ನಗ್ನಿರಾಸ್ಯಾದಜಾಯತ ।
ಆದಿತ್ಯಾಶ್ಚೈವ ಸಾಧ್ಯಾಶ್ಚ ವಸವೋಽಥಾಶ್ವಿನಾವಪಿ ॥
ಮರುತಶ್ಚ ಸಹೇಂದ್ರೇಣ ವಿಶ್ವೇದೇವಾಸ್ತಥೈವ ಚ ।
ಬಭೂವುಶ್ಚೈವ ಯಕ್ಷಾಶ್ಚ ಗಂಧರ್ವೋರಗರಾಕ್ಷಸಾಃ ॥
ಪ್ರಾದುರಾಸ್ತಾಂ ತದಾ ದೋರ್ಭ್ಯಾಂ ಸಂಕರ್ಷಣಧನಂಜಯೌ ।
ದಕ್ಷಿಣೇ ಚಾರ್ಜುನೋ ಧನ್ವೀ ಹಲೀ ರಾಮಶ್ಚ ಸವ್ಯತಃ ॥
ಭೀಮೋ ಯುಧಿಷ್ಠಿರಶ್ಚೈವ ಮಾದ್ರೀಪುತ್ರೌ ಚ ಪೃಷ್ಠತಃ।
ಅಂಧಕಾ ವೃಷ್ಣಯಶ್ಚೈವ ಪ್ರದ್ಯುಮ್ನಪ್ರಮುಖಾಸ್ತತಃ ॥
ಅಗ್ರೇ ಬಭೂವುಃ ಕೃಷ್ಣಸ್ಯ ಸಮುದ್ಯತಮಹಾಯುಧಾಃ ।
ನೇತ್ರಾಭ್ಯಾಂ ನಾಸಿಕಾಭ್ಯಾಂ ಚ ಶ್ರೋತ್ರಾಭ್ಯಾಂ ಚ ಸಮಂತತಃ ।
ಪ್ರಾದುರಾಸನ್ ಮಹಾರೌದ್ರಾಃ ಸಧೂಮಾಃ ಪಾವಕಾರ್ಚಿಷಃ ॥
ರೋಮಕೂಪೇಷು ಚ ತಥಾ ಸೂರ್ಯಸ್ಯೇವ ಮರೀಚಯಃ॥"

ವ್ಯಾ.ಭಾ.ಅ.118 ಶ್ಲೋ. 5–10, 12, 13

"ಚರಣದುಂಗುಟದಲ್ಲಿ ದೇವರು ತುಱುಗಿದರು ನೊಸಲಿನಲಿ ಕಮಲಜ
ನುರದಲಗ್ಗದ ರುದ್ರನಾಸ್ಯದೊಳಗ್ನಿವಾಯುಗಳು।
ಬೆರಳಲಿಂದ್ರಾದಿಗಳು ನಯನಾಂಬುರುಹದಲಿ ರವಿ ನಾಭಿಯಲಿ ನಭ
ವರಭುಜಾಗ್ರದೊಳಖಿಳದಿಗುಪಾಲಕರು ರಂಜಿಸಿತು ॥
ಸುರರು ಖಚರರು ಕಿನ್ನರರು ಕಿಂಪುರುಷರನುಪಮಸಿದ್ಧ ವಿದ್ಯಾ
ಧರರು ವಸುಗಳು ಮನುಗಳಾದಿತ್ಯರು ಭುಜಂಗಮರು।
ಗರುಡಗಂಧರ್ವಾಶ್ವಿನೀದೇವರು ಸವಿಶ್ವೇದೇವರಖಿಲಾ
ಪ್ಸರೆಯರೆಸೆದರು ರೋಮರೋಮದ ಕುಳಿಯ ಚೌಕದಲಿ ॥
ಬಲದಭುಜದಲಿ ಪಾರ್ಥನೆಡದಲಿ ಹಲಧರನು ಚರಣದಲಿ ಧರ್ಮಜ
ಕಲವೃಕೋದರ ನಕುಲ ಸಹದೇವಾದಿ ಯಾದವರು ।
ಲಲಿತಕಾಂತಿಯೊಳಖಿಳತಾರಾವಳಿಗಳಮಳಗ್ರಹವಿರಲು ತೊಳ
ತೊಳಗಿ ಮೆಱೆದನು ವಿಶ್ವರೂಪವಿಹಾರಿ ಮುರವೈರಿ ॥

"ಕಿವಿಗಳಲಿ ಕಂಗಳಲಿ ನಾಸಾವಿವರದಲಿ ಹೊಗೆ ಮಸಗಿ ದಳ್ಳುರಿ
ತಿವಿದುದಾಕಾಶವನು ಕವಿದುದು ಕಾಂತಿ ದೆಸೆದೆಸೆಗೆ।
ರವಿಯ ತಗಡೆನೆ ತಳಿತವಾಯುಧನಿವಹ ಸಾಸಿರಭುಜದ ಬಹುಳತೆ
ಯವಗಡಿಸಿ ವೈಕುಂಠನೆಸೆದನು ವಿಶ್ವರೂಪದಲಿ ‖"

ಕು.ವ್ಯಾ.ಭಾ.ಸಂ.೯ ಪ. ೬೦–೬೩

೩೩. "ತದ್ದೃಷ್ಟ್ವಾ ಮಹದಾಶ್ಚರ್ಯಂ ಮಾಧವಸ್ಯ ಸಭಾತಲೇ।
ದೇವದುಂದುಭಯೋ ನೇದುಃ ಪುಷ್ಪವರ್ಷಂ ಪಪಾತ ಚ ‖"

ವ್ಯಾ.ಭಾ.ಅ.118 ಶ್ಲೋ. 18

"ಅರಳಮಳೆ ಸೂಸಿದವು ದುಂದುಭಿ ಮೊರೆದುದಾಕಾಶದಲಿ
ಮುದದಲಿ"

ಕು.ವ್ಯಾ.ಭಾ.ಸಂ.೯ ಪ.೬೪

ಪಂಪಭಾರತ–ಕುಮಾರವ್ಯಾಸಭಾರತ

ಕುಮಾರವ್ಯಾಸನು ಪಂಪನನ್ನು ಹಲವು ವಿಚಾರಗಳಲ್ಲಿ ಅನುಸರಿಸಿರುತ್ತಾನೆ. ಇದನ್ನು ಮೂರುಪಂಗಡಗಳನ್ನಾಗಿ ವಿಭಾಗಿಸಬಹುದು.

೧. ಗ್ರಂಥರಚನೆ ೨. ವರ್ಣನೆ ಮತ್ತು ಭಾವಾನುವಾದ ೩. ಕಥಾಸಂದರ್ಭ.

೧. ಗ್ರಂಥರಚನೆ

(i) ಪಂಪನು ತನಗೆ ಹಿಂದಿದ್ದ ಯಾವ ಕವಿಯನ್ನೂ ಭಾರತಕಾವ್ಯದಲ್ಲಿ ಸ್ತುತಿಸಿಲ್ಲ.

"ವ್ಯಾಸಮುನೀಂದ್ರ ರುಂದ್ರವಚನಾಮೃತವಾರ್ಧಿಯ
ನೀಸುವೆಂ ಕವಿವ್ಯಾಸನೆನೆಂಬ ಗರ್ವಮೆನಗಿಲ್ಲ"

ಎಂದು ವ್ಯಾಸನನ್ನುಮಾತ್ರ ಸ್ಮರಿಸಿರುತ್ತಾನೆ. ಪಂಪನಂತೆಯೇ ಕುಮಾರವ್ಯಾಸನು ಹಿಂದಿದ್ದ ಯಾವ ಕವಿಯನ್ನೂ ತನ್ನ ಗ್ರಂಥದಲ್ಲಿ ಸ್ತುತಿಸಿಲ್ಲ.

"ತರಳನನು ತನ್ನವನೆನಿಸಿ ಪತಿಕರಿಸಿ ಮಗನೆಂದೊಲಿದು ಕರುಣದಿ
ವರವನಿತ್ತನು ದೇವ ವೇದವ್ಯಾಸಮುನಿರಾಯ।"

ಪಂಪಭಾರತದಲ್ಲಿ ಉದ್ಯೋಗಪರ್ವದ ಕಥೆ ಒಂಬತ್ತನೆಯ ಆಶ್ವಾಸದಲ್ಲಿದೆ.

"ವಿದ್ಯಾಶರಧಿ ವೇದವ್ಯಾಸಮುನಿ ಮಾಳ್ಕೆಮಗೆ ಸನ್ಮತಿಯ"
ಎಂದು ವೇದವ್ಯಾಸರನ್ನು ಸ್ತುತಿಸಿರುತ್ತಾನೆ.

(ii) ಪಂಪನು, "ಪೆಱವುಮುಪಾಖ್ಯಾನಕತೆಗಳೊಳವೊಂದಂ
ಕುಂದಲೀಯದೆ ಪೇಳ್ದೆಂ"

"ಕತೆ ಪಿರಿದಾದೊಡಂ ಕತೆಯ ಮೆಯ್ಗಿಡಲೀಯದೆ ನುಂ ಸಮಸ್ತ ಭಾರತಮನಪೂರ್ವಮಾಗೆ ಸಲೆ ಪೇಳ್ದ ಕವೀಶ್ವರರಿಲ್ಲ" ಎಂದು ಹೇಳಿಕೊಂಡಿರುತ್ತಾನೆ.

ಕುಮಾರವ್ಯಾಸನಿಗೆ ತಾನು ಪಂಪನಿಗಿಂತಲೂ ಹೆಚ್ಚು ಪ್ರಸಿದ್ಧಿ ಪಡೆಯಬೇಕೆಂಬ ಆಶೆ ಇದ್ದಿರಬಹುದು. ಅದಕ್ಕಾಗಿಯೇ ಈತನು *ವ್ಯಾಸ ಭಾರತದಲ್ಲಿ ಪ್ರಾಸಂಗಿಕವಾಗಿ ಹೇಳಿರುವ ಉಪಾಖ್ಯಾನಗಳನ್ನೂ ತನ್ನ ಗ್ರಂಥದಲ್ಲಿ ಒಂದೊಂದು ಪದ್ಯದಿಂದಲೇ ತಿಳಿಸುತ್ತಾನೆ.

(iii) ಪಂಪನು ತಾನು ರಚಿಸಿರುವ ಭಾರತದ ಒಂಬತ್ತನೆಯ ಆಶ್ವಾಸದಲ್ಲಿ ಪಾಂಡವರ ಸೇನೆಯು ಕುರುಕ್ಷೇತ್ರದಲ್ಲಿ ಬೀಡುಬಿಟ್ಟವರೆಗಿನ ಕಥಾಭಾಗವನ್ನು ಹೇಳಿರುತ್ತಾನೆ. ಮೂಲಭಾರತದ ಉದ್ಯೋಗಪರ್ವ ದಲ್ಲಿರುವ, ಕೌರವಸೇನೆ ಯುದ್ಧಭೂಮಿಗೆ ಬರುವುದು, ಭೀಷ್ಮನಿಗೆ ಸೇನಾ ನಾಯಕಪಟ್ಟಕಟ್ಟುವುದು ಈ ಕಥಾಭಾಗಗಳನ್ನು ಹತ್ತನೆಯ ಆಶ್ವಾಸದಲ್ಲಿ ಹೇಳಿರುತ್ತಾನೆ. ಈ ಅಂಶದಲ್ಲಿ ಕುಮಾರವ್ಯಾಸನು ತಾನೂ ಪಂಪನನ್ನೇ ಅನುಸರಿಸಿ ಪಾಂಡವಸೇನೆಯು ಕುರುಕ್ಷೇತ್ರಕ್ಕೆ ಬಂದು ನೆಲಸುವವರೆಗಿನ ಕಥಾಭಾಗವನ್ನು ಮಾತ್ರ ಉದ್ಯೋಗಪರ್ವದಲ್ಲಿ ತಿಳಿಸುತ್ತಾನೆ.

(iv) ಕೃಷ್ಣನು ದುರ್ಯೋಧನನನ್ನು ಕಾಣಲು ಬರುವ ಸುದ್ದಿಯನ್ನು ವಿದುರನು ಆತನಿಗೆ ತಿಳಿಸಲು, ಮಾರನೆಯ ದಿನ ದುರ್ಯೋಧನನೇ ಸಭೆಯನ್ನು ರಚಿಸಿದನೆಂದು ಪಂಪನು ತಿಳಿಸಿರುವ ಸನ್ನಿವೇಶವನ್ನೇ ಕುಮಾರವ್ಯಾಸನೂ ಅನುಸರಿಸಿರುತ್ತಾನೆ.

೨. ವರ್ಣನೆ ಮತ್ತು ಭಾವಾನುವಾದ

(i) "ಸೀತೆಯ ದೂಸಱಿಂದಳಿದ ರಾವಣನಂತಿರೆ ನೀನು ವಿನಾಗಳ್" ಪಂ.ಭಾ.ಆ.೯. ಪ.೪೯

---

*ಉದ್ಯೋಗಪರ್ವದಲ್ಲಿ ಬರುವ ಈ ಪ್ರಾಸಂಗಿಕ ಉಪಾಖ್ಯಾನಗಳಲ್ಲಿ ಪಂಪನು ಒಂದನ್ನೂ ತನ್ನ ಭಾರತದಲ್ಲಿ ತಿಳಿಸಿಲ್ಲ. ಕುಮಾರವ್ಯಾಸನು ವಿದುಲೋಪಾಖ್ಯಾನವನ್ನು ಬಿಟ್ಟು ಉಳಿದೆಲ್ಲ ಉಪಾಖ್ಯಾನಗಳನ್ನೂ ಹೇಳಿರುತ್ತಾನೆ. ಉಪಾಖ್ಯಾನಗಳ ಹೆಸರನ್ನು ಮುಂದೆ ಪುಟ lxxxi ರಲ್ಲಿ ಕೊಟ್ಟಿದೆ.

"ರಾವಣನ ಪರಿ ನೆಲಸಿತಿವನೊಳು ಸಾವಿಗಂಜುವನಲ್ಲ"
ಕು.ವ್ಯಾ.ಭಾ.ಸಂ.೮. ಪ.೫೩

(ii) "ನಾಮೆಲ್ಲಮೊಂದೆ ಗರುಡಿಯೊಳೋದಿದ ಮಾನಸರೆ"
ಪಂ.ಭಾ.ಆ.೯ ಪದ್ಯ ೪೮ ಆದಮೇಲೆ ಇರುವ ಗದ್ಯ

"ನಿಮ್ಮ ಗರುಡಿಯಲಿ ಎನಗೆ ಶ್ರಮವುಂಟು"
ಕು.ವ್ಯಾ.ಭಾ.ಸಂ.೧. ಪ.೪೨

(iii) "ತೊಲಗದೆ ಗೋವುಗ್ಗಾದ ಕಿಱಿಯಂದಿನ ಗೋವಿಕೆ ನಿನ್ನ ಚಿತ್ತದೊಳ್" ಪಂ.ಭಾ.ಆ.೯. ಪ.೪೪

"ದನವ ಕಾವುದು ತೀರಿತೇ" ಕು.ವ್ಯಾ.ಭಾ.ಸಂ.೯. ಪ.೩೩

"ಗೋವಳಿಗತನ ನಿಮ್ಮ ಮೈಸಿರಿ"
ಕು.ವ್ಯಾ.ಭಾ.ಸಂ.೮. ಪ.೬೯

(iv) "ಭಾಗಮನಾಸೆವಟ್ಟಳಿಪಿ ಬೇಳ್ಪುದು ನಿನ್ನ ಕಲ್ತವಿದ್ಯೆ"
ಪಂ.ಭಾ.ಆ.೯.ಪ.೪೬

"ಬೇಡಲಱಿವನು" ಕು.ವ್ಯಾ.ಭಾ.ಸಂ.೯. ಪ.೯

(v) "ಶತ್ರುಯೋಧನನೊಡ್ಡೋಲಗವಿಂದ್ರನೋಲಗಮುಮಂ ಕೀಳ್ಮಾಡಿ ಕಣ್ಗೊಪ್ಪುಗುಂ" ಪಂ.ಭಾ.ಆ.೯. ಪ.೨೯

"ಅಮರಾವತಿಯ ರಾಯನ ಸಭೆಯು ಗೆಲಿದುದು ಕೌರವಾಸ್ಥಾನ" ಕು.ವ್ಯಾ.ಭಾ.ಸಂ.೮. ಪ.೪೨

"ಭೂಪಾಲನೋಲಗವೆಸೆದುದಿಂದ್ರನ ಸಭೆಗೆ ವೆಗ್ಗಳಿಸಿ
ಕು.ವ್ಯಾ.ಭಾ.ಸಂ.೨. ಪ.೨೮

(vi) "ನುಡಿದಂ ಪಾಸುಂ ಪೊಕ್ಕುಂ ಪರೆದು ಸಭಾಸದನಂ ತೊಳಗಿ ಬೆಳಗೆ ದಂತಪ್ರಭೆಗಳ್" ಪಂ.ಭಾ.ಆ.೯. ಪ.೩೪

"ತೊಳಪ ದಶನಮಯೂಖತತಿ ಹೊಳೆಹೊಳೆಯೆ ನುಡಿದನು"
ಕು.ವ್ಯಾ.ಭಾ.ಸಂ.೮. ಪ.೭೮

(vii) "ಕಾದದೆ ಪನ್ನಗಧ್ವಜನಿಳಾತಳಮಂ ಕುಡಂ"
ಪಂ.ಭಾ.ಆ.೯. ಪ.೧೮

ಕಾಳಗದೊಳಲಗಿನ್ನಿಮೊನೆಯೊಳಲ್ಲದೆ ಮಹಿಯ ಕೊಡುವನೆ
ಶರವೇಶ್ವರನು"   ಕು.ವ್ಯಾ.ಭಾ.ಸಂ. ೧. ಪ.೧೦

(viii) "ತೊಡೆಸೋಂಕಿ ಕುಳ್ಳಿರಿಸಿ"
ಪಂ.ಭಾ.ಆ. ೯. ಪದ್ಯ ೨೮ ಆದಮೇಲೆ ಇರುವ ಗದ್ಯ

"ತೊಡೆಸೋಂಕಿನಲಿ ಸಾರಿದು" ಕು.ವ್ಯಾ.ಭಾ.ಸಂ.೧೦ ಪ.೨

(ix) " ಮಱುದಿವಸಂ ನೇಸಱ್ ಮೂಡಿದಾಗಳಾದಿತ್ಯನಂತನೇಕ ಮಣಿಮಯೂಖವಿಜೃಂಭ[ಮಾ]ಣಾಖಂಡಳ ವಿಳಂಬಿತಾಭೀಳ ಕೋದಂಡ ವಿಳಾಸವಿಭ್ರಮ ಸಿಂಹಾಸನಾಸೀನನುಂ ಪ್ರಮದಾಹಸ್ತವಿನ್ಯಸ್ತ ವಾಮ ಕ್ರಮುಕಮಳನುಮನವರತಸ್ಫುರಿತ ತಾರಕಾಕಾರ ಮುಕ್ತಾಭರಣ ಕಿರಣ ನಿಕರವಿಳಸಿತವಿಶಾಲೋರಸ್ಥಳನುಮನಂತಸಾಮಂತಮುಕುಟ ಮಾಣಿಕ್ಯ ಮಯೂಖಮಂಜರೀಜಾಳಪಲ್ಲವಿತಾಸ್ಥಾನಮಂಟಪನುಮಾಗಿ ಸಭಾಮಂಟ ಪದೊಳೊಡ್ಡೋಲಗಂಗೊಟ್ಟೆಡೆವಱಿಯದವರವರ ಪಡೆದ ಪ್ರತಿಪತ್ತಿಗಳ ನಱಿದಿಕ್ಕಿದ ಲೋಹಾಸನಂಗಳೊಳಂ ಮಣಿಖಚಿತ ಕನಕಪೀಠಂಗಳೊಳಂ ಕಟ್ಟಿದ ಚಿನ್ನದ ಬೊಂದರಿಗೆಯೊಳಂ ಭೀಷ್ಮದ್ರೋಣಾಶ್ವತ್ಥಾಮಕೃಪ ಕೃತವರ್ಮ ಶಲ್ಯ ಶಕುನಿ ಬಾಹ್ಲೀಕ ಸೋಮದತ್ತ ಭಗದತ್ತ ಭೂರಿ ಶ್ರವಃ ಪ್ರಭೃತಿಗಳನಿರಿಸಿ ಮತ್ತಮನೇಕದೇಶಾಧೀಶ್ವರರರೆಲ್ಲರುಮನೆಡೆ ಯಱಿದು ಕುಳ್ಳಿರಿಸಿ ಪೆಂಡವಾಸದೊಳ್ವೆಂಡಿರನೆರಡೋಳಿಯೊಳಮಿರಿಸಿ ನೂರ್ವರ್ ತಮ್ಮಂದಿರುಮಂ ಪಿಂತಿರಿಸಿ ಲಕ್ಕಣಂ ಮೊದಲಾಗೆ ನೂರ್ವರ್ ಮಕ್ಕಳುಮಂ ಮುಂತಿರಿಸಿ ಯುವರಾಜನಪ್ಪಣುಗದುಶ್ಶಾಸನನುಮನಂಗ ರಾಜನಪ್ಪಣುಗಾಳ್ ಕರ್ಣನುಮನೆರಡುಂ ಕೆಲದೊಳಂ ತೊಡೆಸೋಂಕೆ ಕುಳ್ಳಿರಿಸಿ."

ಪಂ.ಭಾ.ಆ.೯. ಪದ್ಯ ೨೮ ಆದಮೇಲೆ ಇರುವ ಗದ

"ಜಾಳಿಸಿತು ತಮ ಮೂಡಣಾದ್ರಿಯ ಮೇಲೆ ತಲೆದೋಱಿದನು ರವಿ
ಭೂಪಾಲ ಕೌರವನಂದಿನೊಡ್ಡೋಲಗವ ರಚಿಸಿದನು ।
ಕರಸಿದನು ಮಣಿಮುಕುಟಕಿರಣದ ಗರುವರನು ಗಾಢಪ್ರತಾಪರ
ಬರಿಸಿದನು ತೂಕದ ಮಹಾಮಂಡಳಿಕಮನ್ನೆಯರ ।
ಧುರವಿಜಯಸಿದ್ಧರನು ಚಾಮೀಕರದ ಗದ್ದುಗೆಯಖಿಳಸಾವಂ
ತರನು ಪೃಥ್ವೀಪಾಲರನು ನೆರಹಿದನು ಕುರುರಾಯ ॥

ಬಲದಗದ್ದುಗೆಗಳಲಿ ಭಟರಗ್ಗಳೆಯರವಿಸುತ ನದಿಯಮಗ ನೃಪ
ತಿಲಕ ದುಶ್ಶಾಸನ ಕೃಪದ್ರೋಣಾದಿನಾಯಕರು ।

ಹೊಳೆವ ರತುನದ ಸಾಲಮಕುಟದ ಚೆಲುವಿಕೆಯ ಸೌರಂಭದಲಿ ಗಜ
ಗಲಿಸಿದವು ಮಾಣಿಕ್ಯಮಯಭೂಷಣವಿಲಾಸದಲಿ ।

ಮದವದತಿಬಲಶಕುನಿ ಸೈಂಧವನದಟನೃಪಕಾಂಭೋಜನತಿಸಂ
ಪದನು ಭೂರಿಶ್ರವ ಸುಲೋಚನ ವೀರವೃಷಸೇನ ।

ಕದನಕಾಲಾನಲರು ವರಹೇಮದಮಕುಟದವರರಸನೆಡವಂ
ಕದಲಿ ಕುಳ್ಳಿರ್ದರು ಮಹಾಯಃಸ್ಥಾನರಚನೆಯಲಿ ॥

ತರುಣಶೃಂಗಾರದ ಸಭಾಬಂಧುರದ ನೂರ್ವರು ಕೌರವೇಂದ್ರನ
ವರಕುಮಾರರು ಮಂದೆ ಮೆಱೆದರು ಲಕ್ಷಣಾದಿಗಳು ।

ವರಕಿರೀಟದ ಕಾಲತೊಡರಿನ ಕೊರಳಪದಕದ ಕೈಯಸುರಗಿಗ
ಳರಸನನುಜರು ನೂರ್ವರೆಡವಂಕದಲಿ ಮೋಹಿದರು ॥

ಮಿಸುಪ ತಮ್ಮ ಮುಖೇಂದುವನು ಸೈರಿಸದ ಚಂದ್ರನ ಕಿತ್ತು ನಭದಲಿ
ಬಿಸುಟು ಬೇರ್ಗಳ ಹಿಡಿದರೋ ಹೇಳೆನಲು ಸಭೆಯೊಳಗೆ ।

ಶಶಿವದನೆಯರ ಕೈಯಸೀಗುರಿಯೆಸೆದುದಿಕ್ಕೆಲದಲಿ ಸುಯೋಧನ
ವಸುಮತೀಶನ ವೈಭವದಲಾಸ್ಥಾನ ಚೆಲುವಾಯ್ತು ॥"

ಕು.ವ್ಯಾ.ಭಾ.ಸಂ.೮. ಪ.೨೮–೩೪

(x) "ಕರಮೆನಗುಱದಿರ್ಕುಮೆ ನಿನ್ನ ಪೇಳ್ದ ಧರ್ಮಶ್ರವಣಂ"

ಪಂ.ಭಾ.ಆ.೯. ಪ.೪೫

"ಧರ್ಮಶ್ರವಣಕೋಸುಗ ಬಾರೆವಾವ್"

ಕು.ವ್ಯಾ.ಭಾ.ಸಂ.೧. ಪ೩೧

(xi) "ಮುನ್ನಱುಪಿಂಗಳ್ ಜಱುಚುತ್ತುಮಿರ್ಪುದೆ"

ಪಂ.ಭಾ.ಆ೯. ಪ.೬೨

"ಗಜಬಜಿಸಲೇಕಿನ್ನಾಱುತಿಂಗಳೆ"

ಕು.ವ್ಯಾ.ಭಾ.ಸಂ.೧೧. ಪ.೧೧

೩. ಕಥಾಸಂದರ್ಭ

ಕುಮಾರವ್ಯಾಸನು ಔಚಿತ್ಯವರಿತು ಪಂಪಭಾರತದ ಕೆಲವು ಕಥಾ ಸಂದರ್ಭಗಳನ್ನು ತಾನೂ ಉಪಯೋಗಿಸಿಕೊಂಡಿರುತ್ತಾನೆ.

೧. *ಪ್ರಧಾನಕಾರ್ಯಮಂ ತಮ್ಮೊಳಾಳೋಚಿಸಿ ವಿಕ್ರಮಾರ್ಜುನನಂ ನೀನೆ ಪೋಗಲ್ವೇಳ್ಕುಮೆಂಬುದುಮಪ್ರತಿರಥಂ ರಥಮನೇಱಿ ಮನಃ ಪವನವೇಗದಿಂ ದ್ವಾರಾವತಿಯನೆಯ್ದಿ ರಾಜಮಂದಿರಮಂ ಪೊಕ್ಕು ದುಗ್ಧಾಬ್ಧಿಧವಳಶಯ್ಯಾತಳದೊಳ್ ಮಱೆದೊಱಗಿದ ಮಧುಮಥನನೆತ್ತಲಣ್ಮದೆ ಕಾಲದೆಸೆಯೊಳುಸಿರದೆ ಕುಳ್ಳಿರೆ ದುರ್ಯೋಧನನುಮಾಗಳೆ ಬಂದು ಬಲಿಬಂಧನನ ತಲೆದೆಸೆಯೊಳ್ ಕುಳ್ಳಿರೆ ಕಿಱಿದಾನುಂ ಬೇಗದಿಂ."

ಪಂ.ಭಾ.ಆ.೯. ಪದ್ಯ ೧೦ ಆದಮೇಲಿರುವ ಗದ್ಯ

"ಧರ್ಮಜನಳುಕಿ ಕಳುಹಿದನಿಂದ್ರನಂದನನ"

ಕು.ವ್ಯಾ.ಭಾ.ಸಂ.೧. ಪ೧೭

"ಮುಕುಳಕರಪುಟನಾಗಿ ಭಯಭರ ಚಕಿತಚಿತ್ತಶರೀರನಬುಜಾಂ
ಬಕನನೆಬ್ಬಿಸಲಮ್ಮದೊಯ್ಯನೆ ಚರಣಸೀಮೆಯಲಿ ।
ಅಕುಟಿಲನು ಸಾರಿದನು ಬಳಿಕೀ ವಿಕಳದುರ್ಯೋಧನನು ನಿಗಮ
ಪ್ರಕರಮೌಳಿಯ ಮೌಳಿಯತ್ತಲು ಸಾರ್ದ ಮಂಡಿಸಿದ ॥"

ಕು.ವ್ಯಾ.ಭಾ.ಸಂ೧. ಪ.೨೪

೨. †"ನೀವಿರ್ವರುಂ ಬಂದಂದಮುಮಾ ಮನೆವಾಳ್ತೆಯಂ ಪೇಳಿಮೆಂ
ದೊಡೆಮ್ಮೆಮ್ಮಂ ಕೆಯ್ಕೊಂಡು ಗೆಲಿಸಲ್ವೇಳ್ಕುಮೆಂದು ಬಂದೆವು"

ಪಂ.ಭಾ.ಆ.೯. ಪದ್ಯ ೧೧ ಆದಮೇಲಿರುವ ಗದ್ಯ

"ಕಡುಮಾನ್ಯರೆಮ್ಮಾಲಯಕೆ ಬರವೇನೆನಲು ಕುರುರಾಯ
ನಿಂತೆಂದ" ಕು.ವ್ಯಾ.ಭಾ.ಸಂ.೧. ಪ.೨೬

"ಸೋದರರ ಮನ ಕದಡಿದವು ದಾಯಾದವಿಷಯದೊಳಿಂದು
ಧರಣಿಗೆ ಕಾದುವೆವು ನೀವಿಬ್ಬರಿಗೆ ಬಲವಾಗಬೇಕೆಂದ"

ಕು.ವ್ಯಾ.ಭಾ.ಸಂ. ೧. ಪ.೨೭

---

* ವ್ಯಾಸಭಾರತದಲ್ಲಿ "ಅರ್ಜುನನನ್ನು ದ್ವಾರಕಿಗೆ ಯಾರೂ ಕಳುಹಿಸುವುದಿಲ್ಲ. ಆತನು ತಾನಾಗಿಯೇ ಹೋಗುತ್ತಾನೆ. ದುರ್ಯೋಧನನು ಮೊದಲು ಹೋಗಿ ಕೃಷ್ಣನ ತಲೆಯ ಹತ್ತಿರ ಕುಳಿತುಕೊಂಡಿರಲು ಅರ್ಜುನನು ಆತನ ಪಾದದ ಹತ್ತಿರಕ್ಕೆ ಹೋಗುತ್ತಾನೆ" ಎಂದಿದೆ.

† ವ್ಯಾಸಭಾರತದಲ್ಲಿ 'ತಾನು ಮೊದಲು ಬಂದಿರುವ ಕಾರಣ ತನಗೆ ಸಹಾಯ ಮಾಡಬೇಕು ಎಂದು ದುರ್ಯೋಧನನು ಹೇಳುತ್ತಾನೆ" ಎಂದಿದೆ.

೩. *"ಅಂತು ವಿದುರನಜನನುಚಿತ ಪ್ರತಿಪತ್ತಿಗಳಿಂ ಸಂತಸಂಬಡಿಸಿ ಬಂದ ಬರವನಾಗಳೆ ಸುಯೋಧನಂಗಱಿಪುವುದುಂ ರಾಜರಾಜನುಱಿದೆ ಕಿಱಿನಗೆ ನಕ್ಕು ನಾಳಿನೋಲಗದೊಳ್ ತಂದು ಕಾಣಿಸೆಂಬುದಂ"

ಪಂ.ಭಾ.ಆ. ೯ ಪದ್ಯ ೨೮ ಆದಮೇಲಿರುವ ಗದ್ಯ

"ವಿದುರನ ಕರೆದು ಕೌರವನರಮನೆಯ ಸಮಯವನು
ನೋಡಿದು ಹೇಳು ನಮಗೆಂದ" ಕು.ವ್ಯಾ.ಭಾ ಸಂ.೮ ಪ.೨೪

"ಎನಲು ಕುರುಕುಲಸಾಗರಾಗ್ನಿಯ ಮನೆಗೆ ಬಂದನು ವಿದುರ ಹರಿ
ಬೆಸಸೆ" ಕು.ವ್ಯಾ.ಭಾ.ಸಂ. ೮ ಪ.೨೫

"ಓಲಗದೊಳಿರ್ದಖಿಳಮೂರ್ಖರ ಮೌಳಿಯನು ಕಂಡವಧರಿಸು ಸಿರಿ
ಲೋಲ ಬಿಜಯಂಗೈಯಲವಸರವುಂಟೆ ಹೇಳೆನಲು ।
ನಾಳೆ ಕಾಣಿಸಿಕೊಂಬೆವಿಂದೇನು" ಕು.ವ್ಯಾ.ಭಾ.ಸಂ. ೮. ಪ.೨೬

"ನಾಳೆ ಬರಹೇಳೆಂದು ವಿದುರನ ಬೀಳುಕೊಟ್ಟನು"

ಕು.ವ್ಯಾ.ಭಾ.ಸಂ.೮ ಪ.೨೮

೪. "ಎಳ್ವೋಗು ದೂತನಪ್ಪನ
ಬೆಳ್ಪನ ನುಡಿಗೇಳ್ದು ಮುಳಿಯಲಾಗದು ನೀನುಂ ।
ಪೆಳ್ಪಟ್ಟು ವಿದುರನೆಂಬೀ
ತೊಳ್ಪಟ್ಟಿಯ ಮನೆಯ ಕೂಳೆ ನುಡಿಯಿಸೆ ನುಡಿದೈ ॥"

ವಚನ :—ಎನೆ ವಿದುರನತಿಕುಪಿತಮನನಾಗಿ—

†"ಕಡುಮುಳಿದು ನಿನ್ನ ತೊಡೆಗಳ
ನುಡಿವೆಡೆಯೊಳ್ ಭೀಮಸೇನನಾನಾಪದದೊಳ್ ।
ಪಿಡಿಯಲ್ಕೆಂದಿರ್ದೆನಿದಂ
ಪಿಡಿಯೆಂ ಪೋಗೆಂದು ಸಭೆಯೊಳುಡಿದಂ ಬಿಲ್ಲಂ ॥"

ಪಂ.ಭಾ.ಆ.೯ ಪ.೫೮–೫೯

---

* ವ್ಯಾಸಭಾರತದಲ್ಲಿ ವಿದುರನು ದುರ್ಯೋಧನನಿಗೆ ಕೃಷ್ಣನು ಬಂದಿರುವ ಸುದ್ದಿಯನ್ನು ತಿಳಿಸುವ ಸನ್ನಿವೇಶವಿಲ್ಲ. ದುರ್ಯೋಧನನೇ ಕೃಷ್ಣನನ್ನು ಸಭೆಗೆ ಕರೆದುಕೊಂಡು ಹೋಗುತ್ತಾನೆ.

† ಈ ಪ್ರಸಂಗ ವ್ಯಾಸಭಾರತದಲ್ಲಿಲ್ಲ.

"ಈ ಕೃಪನನೀ ದ್ರೋಣನೀ ಗಂಗಾಕುಮಾರನ ಮನೆಯ ಹೊಗದವಿ
ವೇಕಿ ತೊತ್ತಿನಮಗನ ಮನೆಯಲಿ ಹಸಿವ ನೂಕಿದಿರಿ ।"

ಕು.ವ್ಯಾ.ಭಾ.ಸಂ.೮ ಪ.೭೧

"ಕಡುಮುಳಿದು ಕಲಿಭೀಮ ನಿನ್ನಯ ತೊಡೆಗಳನು ಮುಱಿವಾ ಸಮಯದಲಿ
ಬಿಡದೆ ನಿನ್ನನು ಕಾಯಬೇಕೆಂದುಳುಹಿದೆನು ಧನುವ ।
ಕೆಡೆನುಡಿಸಿಕೊಂಡಿನ್ನು ಕಾವೆನೆ ಪೊಡವಿಪತಿ ಕೇಳೆನುತ ವಿದುರನು
ಹಿಡಿದ ಬಿಲ್ಲನು ಮುಱಿದನಾ ಕುರುಸೇನೆ ಕಳವಳಿಸೆ ॥"

ಕು.ವ್ಯಾ.ಭಾ.ಸಂ.೮ ಪ.೭೩

೫. "ನೀಮುಂ ನಿಮ್ಮ ಚೊಟ್ಟಲಮಗನಪ್ಪ ಸೂರ್ಯಸೂನುವಂ ಸೂರ್ಯದಿನದಂದು ಕಂಡು ಕಾರ್ಯಸಿದ್ಧಿಯಂ ಮಾಡಿಬನ್ನಿಮೆಂದು ಕೊಂತಿಯಂ ಬೀಳ್ಕೊಂಡು ಪರಕೆಯಂ (ಕೈಕೊಂ)ಡು ರಥಾಂಗಧರಂ ರಥಮನೇಱಿ ಕರ್ಣನ ಮನೆಯ ಮುಂದನೆ ಬಂದು ಮೇಲೆ ಬಿ(ಳ್ದ)ಮ್ಮಂ ಕಿಱಿದಂತರಂ ಕಳಿಪಿ ಮಗುಳ್ವೆ ಬಾ ಪೋಪಮೆಂದು ತನ್ನೊಡನೆ ರಥಮನೇಱಿಸಿಕೊಂಡು ಪೋಗಿ ಮುಂದೊಂದೆಡೆಯೊಳ್"

ಪಂ.ಭಾ.೪೯ ಪದ್ಯ ೬೩ ಆದಮೇಲಿರುವ ಗದ್ಯ

*"ನಿನ್ನಯ ಕಂದ ಕರ್ಣನ ಬೇಡಿಕೊಳು ನೀನೆಂದು ಸೂಚಿಸಿ
ಮರಳಿದನು ಮುರವೈರಿ" ಕು.ವ್ಯಾ.ಭಾ.ಸಂ.೯ ಪ. ೭೮

"ನಿಂದು ತಾ ರವಿಸುತನ ಕರೆದನು ರಥದ ಹೊರೆಗಾಗಿ ।
ಬಂದು ಕಿಱಿದೆಡೆಗಾಗಿ ಕಳುಹುವುದೆಂದು ನೇಮಿಸಿ"

ಕು.ವ್ಯಾ.ಭಾ.ಸಂ.೯ ಪ.೮೧

"ಇನತನೂಜನ ಕೂಡೆ ಮೈದುನತನದ ಸರಸವನೆಸಗಿ ರಥದೊಳು
ದನುಜರಿಪು ಬರಸೆಳದು ಕುಳ್ಳಿರಿಸಿದನು ಪೀಠದಲಿ॥"

ಕು.ವ್ಯಾ.ಭಾ.ಸಂ.೧೦ ಪ.೧

---

* ಕೃಷ್ಣನು ಕುಂತಿಗೆ ಕರ್ಣನನ್ನು ಬೇಡುವಂತೆ ಸೂಚಿಸುವುದು ವ್ಯಾಸ ಭಾರತದಲ್ಲಿಲ್ಲ.

೬. “ಅವಾರ್ಯವೀರ್ಯಂ ಸೂರ್ಯದಿನದಂದು ಮಂದಾಕಿನಿಯಂ ಮೀಯಲೆಂದು ಬಂದು ಅಘಮರ್ಷಣಪೂರ್ವಕಂ ಮಿಂದು ಕನಕಪಾತ್ರದೊಳ್ ತೆಕ್ಕನೆ ತೀವಿದ ಕನಕಕಮಳಂಗಳಿಂದಾದಿತ್ಯತೇಜನಾದಿತ್ಯಂಗರ್ಘ್ಯಮೆತ್ತಿ ಸೂರ್ಯಜಂ ಸೂರ್ಯಮಂತ್ರಂಗಳನೋದಿ ನೀರಂ ಸೂಸಿ ತ್ರಿಃಪ್ರದಕ್ಷಿಣಂ ಗೆಯ್ವಾಗಳ್”—ಪಂ. ಭಾ. ಆ.೯ ಪದ್ಯ ೭೨ ಆದಮೇಲಿರುವ ಗದ್ಯ. “ಅಂತು ಕಂಡು ಸಾಷ್ಟಾಂಗವೆಱಗಿ ಪೊಡವಟ್ಟ ನಿಜನಂದನನ ನಳ್ಕಱಿಂದಪ್ಪಿಕೊಂಡು ಪರಮಾಶೀರ್ವಚನಂಗಳಿಂ ಪರಸಿದಳ್.” ಆಗ “ಗಂಗಾದೇವಿಯುಂ ದಿವ್ಯಮೂರ್ತಿಯಂ ಕೆಯ್ಕೊಂಡು ಬಂದು—

ಒಪ್ಪಿಸಿದೆಂ ಕೆಯ್ಯಡೆಯೆಂ
ದಪ್ಪೈಸಿದ ನಿನ್ನ ಮಗನನೀಗಳೆ ನಿನಗೆಂ ।
ದಪ್ಪೈಸಿ ಗಂಗೆ ಪೋಪುದು
ಮೊಪ್ಪುವ ನಿಜಬಿಂಬದೊಳಗಣಿಂದ ದಿನಪಂ ॥

ಪೊಱಮಟ್ಟು ಬರಲ್ ತನ್ನಡಿ
ಗೆಱಗಿದ ನಿಜಸುತನನಕ್ಕಱಿಂ ಪರಸಿ ಮನಂ ।
ಮಱುಗಿ ರವಿ ನುಡಿದನೆನ್ನುಮ
ನುಱದೆ ಮರುಳ್ಮಗನೆ ಹರಿಗೆ ಕವಚಮನಿತ್ತೈ ।

ನುಡಿಯೆನದಂ ನಿನ್ನಂಬಿಕೆ
ಪಡೆಮಾತೇಂ ಕೊಂತಿ ಹರಿಯ ಮತದಿಂ ಕಾಯು ।
ಲ್ಕೊಡರಿಸಿ ಬಂದಳ್ ಸುತರಂ
ಕುಡದಿರ್ ಪುರಿಗಣೆಯನೆನಿತು ಲಲ್ಲೈಸಿದೊಡಂ ॥

ಎಂದರವಿಂದಪ್ರಿಯಸಖ ।
ನಂದಂಬರತಳಮನಡರ್ವುದುಂ ಕೆಯ್ಮುಗಿದಿಂ । ತೆಂದಂ”

ಪಂ.ಭಾ.ಆ ಪ. ೭೬—೭೯

“ವೀರರವಿಸುತನೊಂದುದಿನ ರವಿವಾರದಲಿ ಪರಿತೋಷ ಮಿಗೆ ಭಾ
ಗೀರಥೀ ತೀರದಲಿ ತಾತಂಗರ್ಘ್ಯವನು ಕೊಡುತ ।
ಸೌರಮಂತ್ರವ ಜಪಿಸುತಿರಲೌದಾರಿಯದ ಸುರತರುವ ಕುಂತೀ
ನಾರಿ ಕಾಣಲು ಬಂದಳಾತ್ಮಜನಿದ್ದ ನದಿಗಾಗಿ ॥
ಬರಲು ತಾಯ್ಗಿದಿರಾಗಿ ರವಿಸುತನಿರದೆ ಬಂದನು ದಂಡದಂತಿರೆ
ಚರಣದಲಿ ಮೈಯಿಕ್ಕಲಾತನ ನೊಸಲ ನೆಗಹಿದಳು ।
ಬರಸೆಳೆದು ಬಿಗಿಯಪ್ಪಿದಳು ನೀರುರವಣಿಸಿದವು ನಯನದಲಿ
ಸೆರೆ ಕೊರಳಿಗೌಕಿದುದಳಲಿನಬುಧಿಯೊಳದ್ದಳಾ ಕುಂತಿ ।

ಆ ಸಮಯದಲಿ ಗಂಗೆ ನಾರೀವೇಷದಲಿ ನಡೆತಂದಳೆಲೆ ಕುಂ
ತೀಸತಿಯ ಕೆಯ್ಯೆಡೆಯ ಕಂದನನೊಪ್ಪುಗೊಳು ನೀನು ।
ಈಸುದಿನವಿವನಾಗುಹೋಗಿನ ಗಾಸಿಯನು ತಲೆಗಾಯ್ದೆನೆನ್ನಯ
ಭಾಷೆ ಸಂದುದೆನುತ್ತ ತಾಯಿಗೆ ಕೊಟ್ಟಳಾತ್ಮಜನ ॥
ಇರಲಿರಲು ರವಿ ಬಂದನೆಕ್ಕಟಿಗರೆದನೀತನ ಕಿವಿಯೊಳೆಲ್ಲವ
ನೊಱೆದು ನಿನಗೆಲೆ ಮಗನೆ ಕುಂತೀದೇವಿ ತಾಯಹಳು ।
ಮುರಹರನ ಮತದಿಂದ ನಿನ್ನಯ ಸರಳ ಬೇಡಲು ಬಂದಳಂದಿನ
ಹರಿಗೆ ಕವಚವನಿತ್ತವೊಲು ಮರುಳಾಗಬೇಡೆಂದ ॥
ಬೆಸಸಿತಕ್ಕೆ ಹಸಾದವೆಂದನು ಬಿಸಜಬಂಧುವ ಕಳುಹಿದನು"

ಕು.ವ್ಯಾ.ಭಾ.ಸಂ.೧೦. ಪ.೨೭–೩೧

೭. "ಪಿಡಿಯೆಂ ಪುರಿಗಣೆಯಂ ನರ
ನೆಡೆಗೊಂಡೊಡಮುಳಿದ ನಿನ್ನ ಮಕ್ಕಳನಿನ್ನೇ ।
ರ್ದೊಡಮಳಿಯೆಂ ಪೆರ್ಜಸಮನೆ
ಪಿಡಿದೆನ್ನನೆ ರಣದೊಳಳಿವೆನಿರದಡಿಯೆತ್ತೆಂ ॥

ಪಂ.ಭಾ.ಆ.೯ ಪ.೮೭

"ಆದಡೈವರುಮಕ್ಕಳನು ತಲೆಗಾದು ತೋಱುವೆ ಕಂದ"
ಹೋದಬಾಣವ ಮರಳಿತೊಡದಿರು ಮಾದುಕಳೆ ವೈರವನೆನಲ್ಕೆ ಹ
ಸಾದವೆಂದನು ಬೀಳುಕೊಂಡನು ಬಂದನರಮನೆಗೆ ॥"

ಕು.ವ್ಯಾ.ಭಾ.ಸಂ.೧೦ ಪ.೩೬

---

* ವ್ಯಾಸಭಾರತದಲ್ಲಿ ಗಂಗೆಯು ಕರ್ಣನನ್ನು ಕುಂತಿಗೆ ಒಪ್ಪಿಸುವ ಕಥಾಭಾಗವಿಲ್ಲ. ಸೂರ್ಯನು ಕರ್ಣನಿಗೆ ಕಿವಿಯಲ್ಲಿ ಕುಂತಿಯು ಸರಳನ್ನು ಬೇಡಲು ಬಂದಿರುವಳೆಂದೂ, "ನೀನು ಮರುಳಾಗಬೇಡ" ಎಂದೂ ತಿಳಿಸುವುದಿಲ್ಲ,

"ಸತ್ಯಮಾಹ ಪೃಥಾ ವಾಕ್ಯಂ ಕರ್ಣ ಮಾತೃವಚಶ್ಶೃಣು ।
ಶ್ರೇಯಸ್ತೇ ಸ್ಯಾನ್ನರವ್ಯಾಘ್ರ ಸರ್ವಮಾಚರತಸ್ತಥಾ ॥"

ವ್ಯಾ.ಭಾ.ಅ. 133 ಶ್ಲೋ. 2

"ಕರ್ಣ ! ಕುಂತಿಯು ಹೇಳಿರುವ ಮಾತು ಸತ್ಯ. ತಾಯಿಯ ಮಾತನ್ನು ಕೇಳು. ಅದರಂತೆ ನಡೆದರೆ ನಿನಗೆ ಶ್ರೇಯಸ್ಸುಂಟಾಗುತ್ತದೆ" ಎಂದು ಸೂರ್ಯನು ಹೇಳುತ್ತಾನೆ.

* ಆ. "ಒಂದಕ್ಷೋಹಿಣೀ ಬಲಂ ಬೆರಸು ತಲೆಬಳಿವಳಿಯೆಂದಭಿಮನ್ಯುಗೆ ಕೂಸಂ ಕೊಟ್ಟ ಜಟ್ಟಿಗಂ ವಿರಾಟಂ ಶ್ವೇತನುತ್ತರಂ ಶಂಖನೆಂಬ ಮೂವರ್ ಮಕ್ಕಳುಂ ಶತಾನೀಕ ಶತದ್ಯುಮ್ನ ಶತಚಂದ್ರಂ ಮೊದಲಾಗಿ ಪನ್ನೊರ್ವರ್ ತಮ್ಮಂದಿರುಂ ಬೆರಸು ನೆಲನದಿರೆ ಮುಂಗೋಳೊಳ್ ನಡೆಯೆ."

ಪಂ.ಭಾ.ಆ.೯ ಪದ್ಯ ೯೫ ಆದಮೇಲೆ ಇರುವ ಗದ್ಯ

" ವರವಿರಾಟನು ಕಂಬುನೃಪನುತ್ತರ ಶತದ್ಯುಮ್ನಕನು ಶತಚಂ
ದ್ರರು ಶತಾನೀಕರು ಶತಾಯುಧರೆನಿಪ ಮತ್ಸ್ಯಪರು ।
ತುರಗಗಜರಥಪಾಯದಳ ಸಾಗರದ ಸಂರಂಭದಲಿ ನಿಜಸಂ
ವರಣೆಯನು ತೋಱಿದರು ತಮ್ಮಕ್ಷೋಹಿಣೀ ಬಲವ ॥ "

ಕು.ವ್ಯಾ.ಭಾ.ಸಂ. ೧೧. ಪ.೨೩

" ದ್ರೌಪದಿಯ ಕೊಟ್ಟ ನಣ್ಪುಮಂ ದ್ರೋಣನೊಳಾದ ಪರಿಭವಮುಮಂ ನೆನೆದೊಂದಕ್ಷೋಹಿಣೀಬಲಂ ಬೆರಸು ದ್ರುಪದಂ ಧೃಷ್ಟದ್ಯುಮ್ನ ಶಿಖಂಡಿ ಚೇಕಿತಾನ ಯುಧಾಮನ್ಯೂತ್ತಮೌಜಃಪುರುಕುತ್ಸವಿಚಿತ್ರಾದಿಗಳಪ್ಪ ತನ್ನ ಮಕ್ಕಳ್ವೆರಸು ನೆಲಂ ಮೂರಿವಿಟ್ಟಂತೆ ಬಲವಕ್ಕದೊಳ್ ನಡೆಯೆ."

ಪಂ.ಭಾ.

" ವರಯುಧಾಮನ್ಯೂತ್ತಮೌಜಸರುರುಶಿಖಂಡಿ ಸುಚೇಕಿತಾನರು
ಧುರಧುರಂಧರ ವೀರಪಾಂಚಾಲಕ್ಷಿತೀಶ್ವರರು ।
.... ಥಟ್ಟಕ್ಷೋಹಿಣಿಯ ತೋಱಿದನು ಪಾಂಚಾಲ ॥ "

ಕು.ವ್ಯಾ.ಭಾ.ಸಂ.೧೧ ಪ.೨೨

---

* ವ್ಯಾಸಭಾರತದಲ್ಲಿ—

" .... ಸಂಗ್ರಾಮೇ ನ ಹನಿಷ್ಯಾಮಿ ತೇ ಸುತಾನ್ ।
ಯುಧಿಷ್ಠಿರಂ ಚ ಭೀಮಂ ಚ ಯಮೌ ತಾವರ್ಜುನಾದೃತೇ ॥"

ಅ. 133 ಶ್ಲೋ. 20

"ನ ತೇ ಜಾತು ನ ಶಿಷ್ಯಂತಿ ಪುತ್ರಾಃ ಪಂಚ ಯಶಸ್ವಿನೀ ।"

ಅ. 133 ಶ್ಲೋ. 23

"ಅರ್ಜುನನನ್ನು ಬಿಟ್ಟು ಉಳಿದವರನ್ನು ಯುದ್ಧದಲ್ಲಿ ಕೊಲ್ಲುವುದಿಲ್ಲ. ಅಂತೂ ನಿನ್ನ ಐದುಮಕ್ಕಳು ನಾಶವಾಗುವುದಿಲ್ಲ. ಅಂದರೆ ಕರ್ಣಾರ್ಜುನರಲ್ಲಿ ಒಬ್ಬನು ಉಳಿಯುವುದರಿಂದ ಐದುಮಕ್ಕಳು ಮಾತ್ರ ಇದ್ದಂತಾಯಿತು" ಎಂದಿದೆ.

"ಕೇಕಯವಿಷಯಾಧೀಶ್ವರರಪ್ಪ ಕೈಕಯರಯ್ವರುಮೊಂದಕ್ಷೋಹಿಣೀಬಲದೊಡನೆ ಸಿಡಿಲನುರುಳಿಮಾಡಿದಂತು ಪಿಂಗೋಳೊಳ್ ನಡೆಯೆ, ಪಾಂಡ್ಯಂ ಶ್ರೀಜಯ ಸೋಮಕರೊಡನೊಂದಕ್ಷೋಹಿಣೀ ಬಲಂಬೆರಸು ಸುತ್ತಿಱಿದು ಬಳಸಿಬರೆ"

ಪಂ.ಭಾ.

"ಜಯಸಮರ ಸಾಮಗ್ರಬಲ ಕೈಕಯನೃಪಾಲರು ತಮ್ಮೊಳಕ್ಷೋ
ಣಿಯನು ತೋಱಿದರಂದು ಗಜಕಂಧರದ ಭೂಪತಿಗೆ ।
ಭಯವಿಹೀನನು ಪಾಂಡ್ಯನೃಪ ಸೃಂಜಯನು ಸೋಮಕಭೂಪರಕ್ಷೋ
ಣಿಯನು ತೋಱಿದರವನಿ ಕುಸಿದುದು ದಳದ ಪದಹತಿಗೆ ॥"

ಕು.ವ್ಯಾ.ಭಾ.ಸಂ.೧೧. ಪ.೨೪

"ಹಿಡಿಂಬೆಗಂ ಭೀಮಂಗಂ ಪುಟ್ಟಿದ ಮಗಂ ಘಟೋತ್ಕಚ
ನಱುವತ್ತೆಂಟುಕೋಟಿರಾಕ್ಷಸಬಲಂ ಬೆರಸು ಬರೆ" ಪಂ.ಭಾ.

"ಭಾರಿದೇಹನು ಭಟಭಯಂಕರ ತೋರಹತ್ತನು ದೈತ್ಯಮಯ ಪರಿ
ವಾರಬಹುಳದಿ ಬಂದು ಕಂಡನು ಕಲಿಘಟೋತ್ಕಚನು ॥"

ಕು.ವ್ಯಾ.ಭಾ.ಸಂ.೧೧ ಪ.೨೮

"ಕೊಂತಿಯ ಮಾವನಪ್ಪ ಕೊಂತಿಭೋಜನುಂ ಸೋಮಕಂ
ಬೆರಸೊಂದಕ್ಷೋಹಿಣೀಬಲಂ ಬೆರಸು ಬರೆ"

ಪಂ.ಭಾ.ಅ.೯.ಪದ್ಯ ೯೫ ಆದಮೇಲೆ ಇರುವ ಗದ್ಯ

* "ತೋಱಿದನು ಕುಂತೀಭೋಜನಕ್ಷೋಣಿ"

ಕು.ವ್ಯಾ.ಭಾ.ಸಂ.೧೧ ಪದ್ಯ ೨೫

ಭಾಸನ ದೂತವಾಕ್ಯ—ಕುಮಾರವ್ಯಾಸ ಭಾರತ

ಕುಮಾರವ್ಯಾಸನು ಪಂಪಭಾರತದಿಂದ ಕೆಲವು ಕಥಾಸನ್ನಿವೇಶಗಳನ್ನು ಆರಿಸಿಕೊಂಡಿರುವಂತೆ, ಭಾಸನ ದೂತವಾಕ್ಯದಿಂದಲೂ ಕೆಲವು ಸನ್ನಿವೇಶಗಳನ್ನು ಆರಿಸಿಕೊಂಡಿರುತ್ತಾನೆ.

---

* ವ್ಯಾಸಭಾರತದಲ್ಲಿ ಈ ರಾಜರ ಹೆಸರುಗಳೂ, ಮತ್ತು ವಿವರಗಳೂ ಇಲ್ಲ.

೧. ದೂ. ವಾ.—

"ವಾಸುದೇವಃ—ಭೋಃ ಸುಯೋಧನ ! ಕಿಮಾಸ್ಸೆ !

ದುರ್ಯೋಧನಃ—(ಆಸನಾತ್ ಪತಿತ್ವಾ ಆತ್ಮಗತಂ) ಸುವ್ಯಕ್ತಂ ಪ್ರಾಪ್ತ ಏವ ಕೇಶವಃ।

ಉತ್ಸಾಹೇನ ಮತಿಂ ಕೃತ್ವಾಪ್ಯಾಸೀನೋಽಸ್ಮಿ ಸಮಾಹಿತಃ ।
ಕೇಶವಸ್ಯ ಪ್ರಭಾವೇನ ಚಲಿತೋಽಸ್ಮ್ಯಾಸನಾದಹಂ॥"

ಕು.ವ್ಯಾ.ಭಾ.—

* "ಕಡುಕುಮತಿ ಕೌರವನಿಳಿಯದಿರ್ದನು ಸಿಂಹವಿಷ್ಟರವ"

ಸಂ.೮. ಪ.೬೩

"ಸೆಣಸುಸೇರದ ದೇವನಿದಿರಲಿ ಮಣಿಯದಾತನ ಕಾಣುತವೆ ಧಾ
ರಿಣಿಯನೊತ್ತಿದನುಂಗುಟದ ತುದಿಯಿಂದ ನಸುನಗುತ।
ಮಣಿಖಚಿತಕಾಂಚನದ ಪೀಠದ ಗೊಣಸು ಮುಱಿದುದು ನಭದಿ ಸುರಸಂ
ದಣಿಗಳಾ ಎನೆ ಕೆಡೆದು ಬಿದ್ದನು ಹರಿಯ ಚರಣದಲಿ॥"

ಸಂ.೮ ಪ.೬೪

೨. ದೂ.ವಾ.—

ದುರ್ಯೋಧನಃ—ಕಥಂ ಯಾಸ್ಯತಿ ಕಿಂ ಕೇಶವಃ । ದುಶ್ಶಾಸನ ! ದುರ್ಮರ್ಷಣ ! ದುರ್ಮುಖ ! ದುರ್ಬುದ್ಧೇ ! ದುಷ್ಟೇಶ್ವರ ! ದೂತಸಮುದಾಚಾರಮತಿಕ್ರಾಂತಃ ಕೇಶವೋ ಬಧ್ಯತಾಂ । ಕಥಮಶಕ್ತಾಃ ! ದುಶ್ಶಾಸನ ! ನ ಸಮರ್ಥಃ ಖಲ್ವಸಿ । ಅಯಮಶಕ್ತಃ । ಮಾತುಲ ! ಬಧ್ಯತಾಮಯಂ ಕೇಶವಃ। ಕಥಂ ಪರಾಙ್ಮುಖಃ ಪತತಿ। ಭವತು, ಅಹಮೇವ ಪಾಶೈರ್ಬಧ್ನಾಮಿ ।

---

* ದುರ್ಯೋಧನನು ಆಸನದಿಂದ ಉರುಳಿಬೀಳುವ ಸನ್ನಿವೇಶ ವ್ಯಾಸಭಾರತದಲ್ಲಿಲ್ಲ. ಭಾಸನ ದೂತವಾಕ್ಯದಲ್ಲೂ ಆಸನದಿಂದ ಬಿದ್ದನೆಂದಿದೆಯೇ ವಿನಾ ಕೃಷ್ಣನ ಕಾಲುಗಳಮೇಲೆ ಬಿದ್ದನೆಂದಿಲ್ಲ.

ಪಂಪಭಾರತದಲ್ಲಿ, ದುರ್ಯೋಧನನು ಆಸನದಿಂದ ಉರುಳುವ ಸನ್ನಿವೇಶವು ಈ ಪ್ರಕರಣದಲ್ಲಿಲ್ಲ. ವಿದುರನು ಬಿಲ್ಲನ್ನು ಮುರಿದ ಬಳಿಕ ಖತಿಗೊಂಡ ದುರ್ಯೋಧನನು ಕೃಷ್ಣನಮೇಲೆ ಬೀಳುವ ಸಂದರ್ಭದಲ್ಲಿ—

"ಸುಯೋಧನಂ ತನ್ನ ಬಲದ ತೋಳುಡಿದಂತಾಗಿ ಸಿಗ್ಗಾಗಿ ಬಾಳಂ ಕಿಳ್ತುಕೊಂಡು ಮನದೊಳಾದೇವದಿಂ ದೇವಕೀನಂದನನ ಮೇಲೆವಾಯ್ವುದಂ ನಂಜನ ಮೇಲೆ ವಾಯ್ವ ನೊಳವಿನಂತುರುಳ್ತರೆ ಪಾಯ್ದು" ಎಂದು ಪಂ. ಭಾ. ಅ.೯. ಪದ್ಯ ೫೫ ಆದಮೇಲಿರುವ ಗದ್ಯದಲ್ಲಿ ಉರುಳುವ ಸನ್ನಿವೇಶವಿದೆ.

ಆಃ ತಿಷ್ಠೇದಾನೀಂ । **ಕಥಂ ನದೃಷ್ಟಃ ಕೇಶವಃ।** ಅಯಂ ಕೇಶವಃ । ಅಹೋ ಹ್ರಸ್ವತ್ವಂ ಕೇಶವಸ್ಯ । ಆಃ ತಿಷ್ಠೇದಾನೀಂ ಕಥಂ ನ ದೃಷ್ಟಃ ಕೇಶವಃ। ಅಯಂ ಕೇಶವಃ। ಅಹೋ ದೀರ್ಘತ್ವಂ ಕೇಶವಸ್ಯ। ಕಥಂ ನ ದೃಷ್ಟಃ ಕೇಶವಃ । ಅಯಂ ಕೇಶವಃ । **ಸರ್ವತ್ರ ಮಂತ್ರ ಶಾಲಾಯಾಂ ಕೇಶವಾ ಭವಂತಿ** । ಕಿಮಿದಾನೀಂ ಕರಿಷ್ಯೇ । ಭವತು ದೃಷ್ಟಂ । ಭೋ ! ಭೋ ! ರಾಜಾನಃ । ಏಕೇನೈಕಃ ಕೇಶವೋ ಬಧ್ಯತಾಂ! ಕಥಂ ಸ್ವಯಮೇವ ಪಾಶೈರ್ಬದ್ಧಾಃ ಪತಂತಿ ರಾಜಾನಃ।"

* **ಕು.ವ್ಯಾ.ಭಾ.**——

"ಒಳಗೆ ಹೊಳೆದನು ಬಾಹ್ಯದಲಿ ಪ್ರಜ್ವಲಿಸಿದನು ತಾನಲ್ಲದನ್ಯರ
ಬಳಕೆ ಬೇಱೊಂದಿಲ್ಲದಂತಿರೆ ಕೂಡೆ ತೋಱಿದನು ।
ಒಳಗೆ ಬಿಗಿವೆವೊ ಹೊಱಗೆ ಕೃಷ್ಣನ ಸಿಲುಕಿಸುವೆವೋ ತಿಳಿಯೆ ಕೃಷ್ಣರು
ಹಲಬರಾಗಿಹರಾರ ಕಟ್ಟುವೆವೆಂದರಾ ಖಳರು ॥" ಸಂ.೯. ಪ.೬೬

೩. **ದೂ.ವಾ.**——

" ದುರ್ಯೋಧನಃ——

ವನೇ ಪಿತೃವ್ಯೋ ಮೃಗಯಾಪ್ರಸಂಗತಃ
ಕೃತಾಪರಾಧೋ ಮುನಿಶಾಪಮಾಪ್ತವಾನ್।
ತದಾಪ್ರಭೃತ್ಯೇವ ಸದಾರನಿಸ್ಪೃಹಃ
ಪರಾತ್ಮಜಾನಾಂ ಪಿತೃತಾಂ ಕಥಂ ವ್ರಜೇತ್ ॥ "

[ದಾರನಿಸ್ಪೃಹನಾಗಿರುವ ಪಾಂಡುವು ಇತರರಿಂದ (ದೇವತೆಗಳಿಂದ) ಹುಟ್ಟಿದ ಇವರಿಗೆ ಹೇಗೆ ತಾನೆ ತಂದೆ ಆಗಬಲ್ಲ ?]

ಈ ಅಭಿಪ್ರಾಯವನ್ನೇ ಕುಮಾರವ್ಯಾಸನು——

" ತಮ್ಮ ಜನನವ ನೋಡಿ ನುಡಿಯಲಿ ಪಾಂಡು
ಸುತರಲ್ಲೆಂದು ಹೇಳೆಂದ" [ಸಂ.೨.ಪ.೩೮]

ಎಂದು ಹೇಳಿರುತ್ತಾನೆ.

---

* ಕೃಷ್ಣನನ್ನು ಕಟ್ಟಲು ಪ್ರಯತ್ನಿಸುವ ಸನ್ನಿವೇಶ ವ್ಯಾಸಭಾರತದಲ್ಲಿಲ್ಲ. ಕಟ್ಟುವ ಯೋಚನೆಯನ್ನು ಮಾತ್ರ ಮಾಡುತ್ತಾನೆಂದಿದೆ. ಕುಮಾರವ್ಯಾಸನು ಹೇಳಿರುವ ಈ ಸನ್ನಿವೇಶಕ್ಕೆ ಮೂಲ, ಭಾಸನ ದೂತವಾಕ್ಯವೇ ಆಗಿರಬಹುದು. ಅಂತೆಯೇ, "ಕಂಡರು ಹರಿಯರೂಪವನೊಬ್ಬ ಕೌರವನಲ್ಲದುಳಿದವರು" ಎಂದು ಹೇಳಿರುವುದಕ್ಕೂ "ಕಥಂ ನ ದೃಷ್ಟಃ ಕೇಶವಃ" ಎನ್ನುವುದೇ ಮೂಲವಾಗಿರ ಬಹುದು.

೪. ದೂ.ವಾ.—

“ ರಾಜ್ಯಂ ನಾಮ ನೃಪಾತ್ಮಜೈಃ ಸಹೃದಯೈರ್ಜಿತ್ವಾ ರಿಪೂನ್ ಭುಜ್ಯತೇ
ತಲ್ಲೋಕೇ ನ ತು ಯಾಚ್ಯತೇ ನ ತು ಪುನರ್ದೀನಾಯ ವಾ ದೀಯತೇ ।
ಕಾಂಕ್ಷಾ ಚೇನ್ನೃಪತಿತ್ವಮಾಪ್ತುಮಚಿರಾತ್ ಕುರ್ವಂತು ತೇ ಸಾಹಸಂ
ಸ್ವೈರಂ ವಾ ಪ್ರವಿಶಂತು ಶಾಂತಮತಿಭಿರ್ಜುಷ್ಟಂ ಶಮಾಯಾಶ್ರಮಂ ॥ ”

ಕುಮಾರವ್ಯಾಸನು ಈ ಶ್ಲೋಕದ ಅಭಿಪ್ರಾಯವನ್ನೇ—

“ನಾಡ ಬಯಸುವರೆಮ್ಮೊಡನೆ ಹೊಯ್ದಾಡುವುದು ಸಂಪ್ರತಿಗೆ ಚಿತ್ತವ
ಮಾಡಲಾಗದು ಸಂಧಿ ವೀರಕ್ಷತ್ರಿಯರ ಮತವೆ ।
ಬೇಡುವರು ಪಾರ್ಥಿವರೆ” ಸಂಧಿ.೨. ಪ.೩೮

“ ತುದಿಗೆ ತಾ ಸನ್ಯಾಸವನು ಮಾಡಿದನು ಮಗುಳಳುಪಿದರೆ ರಾ
ಜ್ಯದ ಪದವಿಯನುಚಿತವಾಯ್ತು ಯಮಜಂಗೆ ” ಸಂ.೨. ಪ.೩೯

ಎಂದು ಹೇಳಿರುತ್ತಾನೆ.

ಉದ್ಯೋಗಪರ್ವದಲ್ಲಿ ಬರುವ ಉಪಾಖ್ಯಾನಗಳು

ವ್ಯಾಸಭಾರತದಲ್ಲಿ ಪ್ರಾಸಂಗಿಕವಾಗಿ ಹೇಳಿರುವ ಉಪಾಖ್ಯಾನಗಳಲ್ಲಿ ಪ್ರಕೃತ ಸಂದರ್ಭಕ್ಕೆ ಬೇಕಾದ ಅಂಶವನ್ನು ಮಾತ್ರ ತೆಗೆದುಕೊಂಡು ವಿಸ್ತಾರವಾದ ಆ ಕಥೆಯನ್ನು ಒಂದೆರಡು ಪದ್ಯಗಳಲ್ಲೇ ಸಂಗ್ರಹವಾಗಿ ರಚಿಸಿರುವುದು ಕವಿಯ ಕವಿತಾಸಾಮರ್ಥ್ಯವನ್ನು ವ್ಯಕ್ತಪಡಿಸುತ್ತದೆ.

ನಹುಷೋಪಾಖ್ಯಾನ

೧. ವ್ಯಾಸಭಾರತದಲ್ಲಿ ಈ ಉಪಾಖ್ಯಾನವನ್ನು ಶಲ್ಯನು, ಪಾಂಡವರಿಗೆ “ ಸತ್ಯಕ್ಕೆ ಕಟ್ಟುಬಿದ್ದು ಸಿರಿಯನ್ನು ಕಳೆದುಕೊಂಡಿರುವ ನೀವು ಪುನಃ ಅದನ್ನು ಪಡೆಯುತ್ತೀರಿ ” ಎನ್ನುವ ಅಂಶವನ್ನು ಸೂಚಿಸುವುದಕ್ಕಾಗಿ ಹೇಳುತ್ತಾನೆ. ಅದನ್ನು ಕುಮಾರವ್ಯಾಸನು,

“ ಆದಡೇನೆಲೆ ಕಂದ ತಪ್ಪದು ಮೇದಿನಿಯು ಸಿರಿ ನಿಮಗೆ ಸತ್ಯವ
ಕಾದು ಹದಿಮೂಱುಬುದ ನವೆದಿರಿ ಮುಂದೆ ಲೇಸಹುದು ।
ಕಾದಿ ವೃತ್ರಾಸುರನ ಮುಱಿದಪವಾದದಲಿ ಸಿರಿ ಹೋಗಿ ದುಃಖಿತ
ನಾದನಿಂದ್ರನು ಮತ್ತೆ ಬದುಕಿದ ಶಚಿಯ ದೆಸೆಯಿಂದ ॥

ನಹುಷನನು ಕೆಡೆನೂಕಿ ಋಷಿಗಳ ಮಹಿಮೆಯಲಿ ಸಾಮ್ರಾಜ್ಯದಲಿ
ಸನ್ನಿಹಿತನಾದನು ಮತ್ತೆ ದಿವಿಜರರಾಯರೊಳಗಾಗಿ !

ಅಹಿತರವಗಡಿಸಿದರೆ ಕುಸಿದನು ಬಹಳಲೇಸನು ಬಳಿಕ ಕಂಡನು
ಮಹಿ ನಿಮಗೆ ಬೆಸೆಗೈಯೆ ಬದುಕುವಿರೆಂದನಾಶಲ್ಯ"

ಸಂಧಿ೨ ಪ.೧೫–೧೬

ಎಂದು ಎರಡು ಪದ್ಯಗಳಲ್ಲಿ ಹೇಳಿರುತ್ತಾನೆ.

೨. ಕೃಷ್ಣಾರ್ಜುನರೇ ನರನಾರಾಯಣರೆಂದು ತಿಳಿಸುವುದಕ್ಕಾಗಿ ಪರಶುರಾಮನು ದಂಭೋದ್ಭವ ಚರಿತ್ರೆಯನ್ನು ಹೇಳುತ್ತಾನೆ.

ಸಂಧಿ ೯ ಪ ೮–೯

೩. ದುರ್ಯೋಧನನ ಹೆಮ್ಮೆಯನ್ನು ಮುರಿಯುವುದಕ್ಕಾಗಿ ಗರುಡನ ದರ್ಪಭಂಗದ ಕಥೆಯನ್ನು ಕಣ್ವನು ಸೂಚಿಸುತ್ತಾನೆ.

ಸಂಧಿ ೯ ಪ.೧೦

೪. ಅತ್ಯಂತನಿರ್ಬಂಧವು ಅನರ್ಥಕ್ಕೆ ಕಾರಣವೆನ್ನುವುದನ್ನು ತಿಳಿಸುವುದಕ್ಕಾಗಿ ನಾರದನು ದುರ್ಯೋಧನನಿಗೆ ಗಾಲವೋಪಾಖ್ಯಾನ ವನ್ನೂ, ಯಯಾತಿಯ ದೃಷ್ಟಾಂತವನ್ನೂ ಹೇಳಿ ಗರ್ವಪಡಬಾರದೆಂದು ಆತನಿಗೆ ತಿಳಿಸುತ್ತಾನೆ. ಸಂಧಿ೯ ಪ.೧೧–೧೨

೫. ಕುಂತಿಯು ಕೃಷ್ಣನಿಗೆ ಹೇಳುವ ವಿದುಲೋಪಾಖ್ಯಾನವನ್ನು ಕುಮಾರವ್ಯಾಸನು ಬಿಟ್ಟಿರುತ್ತಾನೆ. ಇದಕ್ಕೆ ಕಾರಣವನ್ನು ಮುಂದೆ ಪು lxxxvi ರಲ್ಲಿ ಕೊಟ್ಟಿದೆ.

ಕುಮಾರವ್ಯಾಸನು ಕೆಲವು ಕಡೆ ವ್ಯಾಸಭಾರತದ ಕಥಾಸನ್ನಿವೇಶ ವನ್ನು ಪೂರ್ತಿಯಾಗಿ ಅನುಸರಿಸಿರುತ್ತಾನೆ. ಮತ್ತೆ ಕೆಲವುಕಡೆ ವ್ಯಾಸ ಭಾರತ ಮತ್ತು ಪಂಪಭಾರತ ಇವೆರಡರ ಅಭಿಪ್ರಾಯವನ್ನೂ ಒಟ್ಟು ಗೂಡಿಸುತ್ತಾನೆ.

ಕವಿಯು ಕಥಾದೃಷ್ಟಿಯಿಂದ ಸಂಸ್ಕೃತ ಕನ್ನಡಗಳೆರಡರಲ್ಲೂ ಆದಿ ಭಾರತವನ್ನನುಸರಿಸಿ ತನ್ನ ಕಾವ್ಯವನ್ನು ರಚಿಸಿದ್ದರೂ ಮಧ್ಯೆ ಮಧ್ಯೆ ಕೆಲವು ಮಾರ್ಪಾಡುಗಳನ್ನು ತಾನೂ ಮಾಡಿರುತ್ತಾನಲ್ಲದೆ ಹೊಸ ಸನ್ನಿ ವೇಶವನ್ನೂ ಕಲ್ಪಿಸಿರುತ್ತಾನೆ.

ಕವಿಯು ಸೇರಿಸಿರುವ ಹೊಸ ಸನ್ನಿವೇಶಗಳು

೧. ವಿದುರನನ್ನು ದುರ್ಯೋಧನನು ತೊತ್ತಿನಮಗನೆಂದು ಮೂದಲಿಸಿದಾಗ ವಿದುರನು "ನೀನಲ್ಲೈ ಅಜಪುತ್ರ" ಎಂದು ಹೇಳುವುದು.

೨. ಸಂಧಿವಿಚಾರದಲ್ಲಿ ಕೃಷ್ಣನು ಧರ್ಮರಾಜಾದಿಗಳ ಅಭಿ ಪ್ರಾಯವನ್ನು ಕೇಳುವ ಸಂದರ್ಭದಲ್ಲಿ ದ್ರೌಪದಿಗೂ ಹೇಳಿ ಕಳುಹಿಸಿ ಬರ ಮಾಡಿ ಆಕೆಯ ಅಭಿಮತವನ್ನು ಕೇಳುವುದು.

೩. ವ್ಯಾಸಭಾರತದಲ್ಲಿ "ದ್ರುಪದರಾಜಪುರೋಹಿತನು ರಾಜಕಾರ್ಯವನ್ನು ಸಭೆಯಲ್ಲಿ ಹೇಳುತ್ತಾನೆ. ಬಳಿಕ ಆತನಿಗೆ ರಾಜನು ಪ್ರತ್ಯುತ್ತರವನ್ನು ಹೇಳಿಕಳುಹಿಸುತ್ತಾನೆ. ಅನಂತರ ಧೃತರಾಷ್ಟ್ರನು ಸಂಜಯನನ್ನು ಕರೆದು "ಸಂಜಯ! ನೀನು ಪಾಂಡವರ ಸಮೀಪಕ್ಕೆ ಹೋಗಿ ಯುದ್ಧವು ಆಗದಂತೆ ಮಾತನಾಡಿ ಶಾಂತಿಯನ್ನು ಉಂಟುಮಾಡು." ಎಂದು ಹೇಳುತ್ತಾನೆ. ಅದರಂತೆಯೇ ಸಂಜಯನು ಹೋಗಿ ಪಾಂಡವರಿಗೆ ತಿಳಿಸುತ್ತಾನೆ. ಆಗ ಧರ್ಮರಾಜನು, "ನಾನು ಕೃಷ್ಣನ ಅನುಯಾಯಿ, ಆತನ ಹೇಳಿಕೆಯಂತೆಯೇ ಈಗ ದೂತನನ್ನು ಕಳುಹಿಸಿರುತ್ತೇನೆ. ನನಗೂ ಯುದ್ಧವಿಲ್ಲದೆ ಶಾಂತಿಯಿಂದಲೇ ಇರಬೇಕೆಂಬ ಅಭಿಪ್ರಾಯವಿದೆ. ದುರ್ಯೋಧನನು ನನಗೆ ಐದು ಗ್ರಾಮಗಳನ್ನು ಕೊಟ್ಟರೆ ಆಗ ಇದು ಸಾಧ್ಯ, ಇಲ್ಲದಿದ್ದರೆ ಯುದ್ಧವು ಖಂಡಿತ. ಕೃಷ್ಣನು ತಾನೇ ಧೃತರಾಷ್ಟ್ರನನ್ನು ಕಂಡು ಸಂಧಿಯ ವಿಚಾರವನ್ನು ಪ್ರಸ್ತಾಪಿಸುತ್ತಾನೆ ಎಂದು ಧೃತರಾಷ್ಟ್ರನಿಗೆ ತಿಳಿಸುವಂತೆ ಹೇಳಿಕಳುಹಿಸುತ್ತಾನೆ" ಎಂದಿದೆ.

ಕುಮಾರವ್ಯಾಸನು ಈ ಸನ್ನಿವೇಶವನ್ನು ಸ್ವಲ್ಪ *ಮಾರ್ಪಾಡು ಮಾಡಿರುತ್ತಾನೆ.

ದ್ರುಪದರಾಜಪುರೋಹಿತನ ಮಾತನ್ನು ಕೇಳಿ ದುರ್ಯೋಧನನು ಚಪಳಕರ್ಣನ ಕೂಡ ಯೋಚಿಸಿ ಕಾಳಗಮಾಡಲು ನಿಶ್ಚೈಸುತ್ತಾನೆ. ಬಳಿಕ ಹರ್ಷದಿಂದ ಸಂಜಯನನ್ನು ಆಗಲೆ ಕರೆಸಿ, ಸಂಜಯ! ಅರಿನೃಪರ ಪಾಳಯಕ್ಕೆ ಹೋಗಿ "ಧರೆಯ ಬೇಡಿಸಿ ಕಳುಹಿದಿರಿ ಸಂಗರದೊಳಸಿಧಾರೆಯಲಿ ಕೊಡುವೆವು ಬಱಿದೆ ಕೊಟ್ಟರಧರ್ಮವು" ಎಂದು ಧರ್ಮತನಯಂಗೆ ತಿಳಿಸುವಂತೆ ಹೇಳಿಕಳುಹಿಸುತ್ತಾನೆ.

ಧರ್ಮರಾಜನು ಇದಕ್ಕೆ ಪ್ರತ್ಯುತ್ತರವನ್ನು ಹೇಳಿಕಳುಹಿಸುವುದರಲ್ಲಿ, ದುರ್ಯೋಧನನಿಗ ಐದು ಪಟ್ಟಣಗಳನ್ನಾದರೂ ಕೊಡುವಂತೆ ತಿಳಿಸುವುದಾಗಲೀ, ಕೃಷ್ಣನು ಸಂಧಿಗಾಗಿ ಹಸ್ತಿನಾವತಿಗೆ ಹೋಗುವ ಸುದ್ದಿಯನ್ನಾಗಲೀ ಹೇಳಿಲ್ಲ.

೪. ಕೃಷ್ಣನ ವಿಶ್ವರೂಪವನ್ನು ಕಂಡು ಆತನನ್ನು ಗಾಂಧಾರಿ ಮತ್ತು ಭಾನುಮತಿ ಇವರು ಪ್ರಾರ್ಥಿಸುತ್ತಾರೆ. ಈ ಕಥಾಭಾಗವು ಮೂಲಭಾರತದಲ್ಲಿಲ್ಲ. ಕವಿಯು ಇದನ್ನು ಹೊಸದಾಗಿ ಸೇರಿಸಿರುತ್ತಾನೆ.

---

*ಧೃತರಾಷ್ಟ್ರನ ಸಭೆಯನ್ನು ದುರ್ಯೋಧನನ ಸಭೆಯನ್ನಾಗಿ ವ್ಯತ್ಯಾಸ ಮಾಡಿರುವುದರಿಂದ ದುರ್ಯೋಧನನ ಅಭಿಪ್ರಾಯಕ್ಕೆ ತಕ್ಕಂತೆ ಈ ಸಂದರ್ಭವನ್ನು ಮಾರ್ಪಡಿಸಿರುವುದು ನ್ಯಾಯವಾಗಿಯೇ ಇದೆ.

೫. ಸಂಧಿಯು ಮುರಿದ ಮೇಲೆ ಕೃಷ್ಣನು ಉಪಪ್ಲಾವ್ಯನಗರಕ್ಕೆ ಮರಳಿದಾಗ ತಾನು ಬಂದಿರುವ ಸುದ್ದಿಯನ್ನು ಧರ್ಮರಾಜನಿಗೆ ತಿಳಿಸು ವಂತೆ ಸಾತ್ಯಕಿಯೊಡನೆ ಹೇಳಿಕಳುಹಿಸುತ್ತಾನೆ. ಬಳಿಕ ಧರ್ಮರಾಜಾದಿ ಗಳು ಎದುರ್ಗೊಂಡು ಬಂದು ಕೃಷ್ಣನನ್ನು ಮರ್ಯಾದೆಯಿಂದ ಕರೆದು ಕೊಂಡು ಹೋಗುತ್ತಾರೆ. ಈ ಕಥಾಭಾಗವೂ ಕವಿಕೃತವೇ ಮೂಲಭಾರತ ದಲ್ಲಿಲ್ಲ.

ಕುಮಾರವ್ಯಾಸಭಾರತದ ಉದ್ಯೋಗ ಪರ್ವದಲ್ಲಿ ಕಂಡು ಬರುವ ಕೆಲವು ನ್ಯೂನತೆಗಳು

೧. ಕುಮಾರವ್ಯಾಸನು ದುರ್ಯೋಧನನ ಸಭೆಯನ್ನು ವರ್ಣಿಸು ವಾಗ ಸಭೆಯಲ್ಲಿ ಗಾಂಧಾರಿಯೂ ಇದ್ದಳು. "ಸತಿಸಹಿತ ಧೃತರಾಷ್ಟ್ರಭೂಪತಿ ಸುತನ ಬಲವಂಕದಲಿ ಕನಕೋಚಿತಪೀಠದಲೆಸೆದಳು" ಎಂದು ಮೊದಲು ತಿಳಿಸಿ, ಮುಂದೆ ದುರ್ಯೋಧನನು ಕೃಷ್ಣನನ್ನು ಕಟ್ಟಲು ಯೋಚಿಸಿರುವ ವಿಚಾರವನ್ನು ಧೃತರಾಷ್ಟ್ರನು ಕೇಳಿ ದುರ್ಯೋಧನನಿಗೆ ಬುದ್ಧಿಹೇಳಲು " ಅವಳ ಬರಹೇಳಿತ್ತ ಮಗನಾಟವನು ನೋಡಲಿ ಹೆತ್ತಮೋಹದ ಹವಣುಗಳ ಬೆಸಗೊಂಬ ಗಾಂಧಾರಿಯನು ಕರೆಯೆಂದ ‖"

ಕು.ವ್ಯಾ.ಭಾ.ಸಂ.೯ ಪ.೪೪

ಎಂದು ಗಾಂಧಾರಿಯನ್ನು ಕರೆಸುವಂತೆ ಹೇಳಿರುವುದರಿಂದ ಪರಸ್ಪರ ವಿರೋಧವು ಕಂಡುಬರುತ್ತದೆ.

೨. ಕರ್ಣನನ್ನು ಬೇಡುವಂತೆ ಕೃಷ್ಣನು ಕುಂತಿಗೆ ಹೇಳುವ ಸನ್ನಿವೇಶ ವ್ಯಾಸಭಾರತದಲ್ಲಿಲ್ಲ. ಅಲ್ಲಿ, ಕುಂತಿಯು ತಾನಾಗಿಯೇ ಕರ್ಣನ ಪರಾಕ್ರಮಕ್ಕೆ ಹೆದರಿ ತನ್ನ ಐದು ಮಕ್ಕಳನ್ನೂ ಕಾಪಾಡುವಂತೆ ಆತನನ್ನು ಬೇಡಲು ಹೋಗುತ್ತಾಳೆ ಎಂದಿದೆ.

ಪಂಪಭಾರತದಲ್ಲಿ ಈ ರೀತಿ ಇದೆ—

" ಅಂತು ಸಹಜಕವಚರತ್ನಕುಂಡಲಂಗಳ್ ನೆತ್ತರ್ ಪನಪನಪನಿಯೆ ತಿದಿಯುಗಿವಂತುಗಿದು ಕೊಟ್ಟುದರ್ಕೆ ಮೆಚ್ಚಿ ದೇವೇಂದ್ರನಾತಂಗಮೋಘ ಶಕ್ತಿಯನಿತ್ತನಾತನಂ ನಾನುಮೆನ್ನ ಬಲ್ಲ ಮಾಳ್ಕೆಯಿಂ ಭೇದಿಸಿದಪ್ಪೆಂ ನೀಮುಂ ನಿಮ್ಮ ಚೊಚ್ಚಿಲಮಗನಪ್ಪ ಸೂರ್ಯಸೂನುವಂ ಸೂರ್ಯದಿನ ದಂದು ಕಂಡು ಕಾರ್ಯಸಿದ್ಧಿಯಂ ಮಾಡಿಬನ್ನಿಂ" ಎಂದು ಕುಂತಿಗೆ ಕೃಷ್ಣನು ತಿಳಿಸುತ್ತಾನೆ. ಅದರಂತೆ ಆಕೆ ಕರ್ಣನ ಸಮೀಪಕ್ಕೆ ಬರುತ್ತಾಳೆ. ಆಗ ಸೂರ್ಯನು " ಕೊಂತಿ ಹರಿಯ ಮತದಿಂ ಕಾಯಲ್ಕೊಡರಿಸಿ ಬಂದಳ್ । ಸುತ ರಂ ಕುಡದಿರ್ ಪುರಿಗಣೆಯನೆನಿತುಲಲ್ಲೈಸಿದೊಡಂ ‖ " ಎಂದು ಕರ್ಣನಿಗೆ ಹೇಳುತ್ತಾನೆ. ಕುಂತಿಯು, ಮಗನೇ! ನಿನ್ನನ್ನು ನಂಬಿ ನಿನ್ನ ಸಹೋದ

ರರು ನಿನ್ನ ಅಪ್ಪಣೆಯಂತೆ ನಡೆಯುವರು ; ನೀನು ರಾಜ್ಯಭಾರ ಮಾಡು ; ಅವರು ದುರ್ಯೋಧನನ ಪ್ರೀತಿಗೆ ಪಾತ್ರರಾಗಿ ನಿನ್ನ ಅನುಜ್ಞೆಯಲ್ಲಿರುವುದರಿಂದ ಎರಡು ಕಡೆಯಲ್ಲಿಯೂ ಮನಸ್ತಾಪಕ್ಕೆ ಸ್ವಲ್ಪವೂ ಅವಕಾಶವಿರದು. ಇದಕ್ಕೆ ನೀನು ಒಡಂಬಡಬೇಕು" ಎಂದು ಹೇಳುತ್ತಾಳೆ. ಕರ್ಣನು ಇದನ್ನು ಒಪ್ಪುವುದಿಲ್ಲ, ಕೊನೆಗೆ ಕುಂತಿ ಕರ್ಣನ ಛಲವನ್ನು ಕಂಡು ಮನಮರುಗಿ "ನಾನು ಕೆಟ್ಟೆನು ; ಚಂದ್ರ ವಂಶವು ಇಂದೇ ನಾಶವಾಗಿಹೋಗುವುದಲ್ಲವೇ ? ನನಗಿನ್ನು ಬಾಳುವ ಆಸೆ ಎಲ್ಲಿಂದ ಬಂದೀತು ? ಉಳಿದ ಮಕ್ಕಳ ಆಸೆಯನ್ನೂ ನಾನು ಬಿಟ್ಟುಬಿಟ್ಟೆನು" ಎಂದು ಹೇಳುತ್ತಾಳೆ. ಆಗ ಕರ್ಣನು "ಪಿಡಿಯೆಂ ಪುರಿಗಣೆಯಂ" ಎಂದು ಹೇಳುತ್ತಾನೆ.

ಕುಮಾರವ್ಯಾಸನು ಈ ಸಂದರ್ಭದಲ್ಲಿ ಪಂಪಭಾರತದಿಂದ ಕೆಲವು ಅಂಶಗಳನ್ನು ಮಾತ್ರ ತೆಗೆದುಕೊಂಡಿರುತ್ತಾನೆ. ಇಂದ್ರನು ಕರ್ಣನಿಗೆ ಕೊಟ್ಟ ಶಕ್ತ್ಯಾಯುಧದ ವಿಷಯವನ್ನು ಕೃಷ್ಣನು ಕುಂತಿಗೆ ತಿಳಿಸುವ ವಿಚಾರವಿಲ್ಲ, ಆದಕಾರಣ ವ್ಯಾಸಭಾರತದಲ್ಲಿರುವಂತೆ ಕುಂತಿಯು, ತನ್ನ ಮಕ್ಕಳನ್ನು ಕಾಪಾಡಲು ಕೇಳಿಕೊಂಡಂತೆ ಹೇಳಿದ್ದರೆ ಸರಿಯಾಗಿತ್ತು.

ಕರ್ಣನಿಗಿರುವ ಈ ಅಸಾಧಾರಣ ಶಕ್ತ್ಯಾಯುಧದ ಅರಿವಿಲ್ಲದ ಕುಂತಿ ಆತನನ್ನು "ಹೋದ ಬಾಣವ ಮರಳಿ ತೊಡದಿರು" ಎಂದು ಕೇಳಿಕೊಳ್ಳುವಂತೆ ಹೇಳಿರುವುದು ಸರಿಯಲ್ಲ. ಕರ್ಣನಿಗೆ ದೇವೇಂದ್ರನು ಕೊಟ್ಟಿರುವ ಈ ಅಮೋಘಶಕ್ತಿ ವಿಚಾರವನ್ನು ಕುಂತಿಗೆ ಕೃಷ್ಣನು ಹೇಳುವ ಸನ್ನಿವೇಶವನ್ನು ಕುಮಾರವ್ಯಾಸನು ಬಿಟ್ಟಿರುವುದು ಒಂದು ಲೋಪ.

ವರ್ಣನೆ—ಅಲಂಕಾರಗಳು

ಕುಮಾರವ್ಯಾಸನಿಗೆ ಕೇವಲ ಕಥೆಯಲ್ಲಿ ಮಾತ್ರ ದೃಷ್ಟಿಯಿಲ್ಲ. ಕಾವ್ಯಮರ್ಯಾದೆಯಾದ ಅಲಂಕಾರ ಮತ್ತು ವರ್ಣನೆಗಳಲ್ಲೂ ದೃಷ್ಟಿಯುಂಟು.

ಈತನಿಗೆ ರಾಜಾಶ್ರಯವಿದ್ದಿತೆಂದು ತಿಳಿಸಲು ಕಾರಣಗಳು ಕಾವ್ಯದಲ್ಲಿ ಕಂಡುಬರುವುದಿಲ್ಲ. ಆದರೂ ಕವಿಯು ರಾಜಾಸ್ಥಾನದ ವರ್ಣನೆಯನ್ನು ಅನೇಕ ಪದ್ಯಗಳಿಂದ ಮಾಡಿರುತ್ತಾನೆ. ಧರ್ಮರಾಜನ ಆಸ್ಥಾನ ವರ್ಣನೆಗಿಂತ ಕೌರವನ ಠೀವಿಯ ಇರವನ್ನು ತೋರ್ಪಡಿಸುವುದಕ್ಕಾಗಿ ಆತನ ಆಸ್ಥಾನದ ಚಿತ್ರವನ್ನು ವಿವರವಾಗಿ ಚಿತ್ರಿಸಿರುತ್ತಾನೆ. ಇದಲ್ಲದೆ ಸಮುದ್ರ, ಸೇನೆ, ಉದ್ಯಾನ ಇವುಗಳ ವರ್ಣನೆಯನ್ನು ಸಮಯಾವರಿತು ಮಾಡಿರುತ್ತಾನೆ.

ಕವಿಯು ಕೌರವನ ಆಸ್ಥಾನವನ್ನು ವರ್ಣನೆಮಾಡುವ ಸಂದರ್ಭದಲ್ಲಿ "ಹಲವುಪಮೆಯುತ್ಪ್ರೇಕ್ಷೆ ಸುಲಲಿತಾಲಂಕೃತಿ ಚಮತ್ಕೃತಿಗಳ ಚತು

ಭಾಷಾವಿಶಾರದ ಕವಿಗಳೊಪ್ಪಿದರು ॥" "ನುಡಿದು ತಲೆದೂಗಿಸುವ ಮಱೆಗನ್ನಡದಲಾಹಾ ಎನಿಸಿ ಮೆಚ್ಚನು ಪಡೆವ ವಾಗ್ಮಿಗಳೋದಿ ಹೊಗಳಿಸಿಕೊಂಬ ಗಮಕಿಗಳು" ಎಂದು ಹೇಳಿರುವುದನ್ನು ನೋಡಿದರೆ, ತನ್ನ ಕಾವ್ಯದಲ್ಲೂ ರೂಪಕ, ಉಪಮಾನ, ಉತ್ಪ್ರೇಕ್ಷಾಲಂಕಾರಗಳೇ ಅಧಿಕವೆಂದೂ, ಈ ಕಾವ್ಯವನ್ನು ಜನರು ಗಮಕಿಗಳಿಂದ ಓದಿಸಿ ಕೇಳಿ ಮೆಚ್ಚುತ್ತಾರೆಂದೂ ತನ್ನ ಪ್ರೌಢಿಮೆಯನ್ನು ಗ್ರಂಥದಲ್ಲಿ ಸೂಚಿಸಿರುತ್ತಾನೆ. ಕವಿಯು ಚತುರ್ಭಾಷಾಪಂಡಿತನಾಗಿದ್ದಿರಬಹುದು. ನಮಗೆ ತಿಳಿದಂತೆ ಈತನಿಗೆ ಸಂಸ್ಕೃತ ಮತ್ತು ಕನ್ನಡ ಈ ಎರಡು ಭಾಷೆಗಳ ಪಾಂಡಿತ್ಯ ಪೂರ್ಣವಾಗಿದೆ ಎನ್ನುವ ಅಂಶವು ಸ್ಪಷ್ಟವಾಗಿದೆ. ಕಾವ್ಯದಲ್ಲಿ ಮರಾಠಿ ಪದಗಳನ್ನೂ ಅನೇಕವೇಳೆ ಪ್ರಯೋಗಿಸಿರುವ ಕಾರಣ ಕವಿಗೆ ಮರಾಠಿಯ ಪರಿಚಯವೂ ಇದ್ದಿರಬಹುದು. ಮತ್ತೊಂದು ಭಾಷೆ ಪ್ರಾಕೃತವಿರಬಹುದು.

ಅಲಂಕಾರ ಮತ್ತು ವರ್ಣನೆಗಳಿಗೆ ಉದಾಹರಣೆಗಳು—

ಉತ್ಪ್ರೇಕ್ಷೆ

"ಹರಿಯ ಪದಕಮಲಾಭಿಷೇಕದ ವರಪಯೋಬಿಂದುಗಳು ಕೌರವ
ನರಮನೆಯನೊಳಕೊಂಬವೊಲು ಕಡಲಾಗಿ ಹರಿತರಲು ।
ಅರರೆ ಪುರಹರನೊಡನೆ ಹಾಲಿನಶರಧಿ ಮೇರೆಯ ಮಱೆದುದಿಳೆಗ
ಚ್ಚರಿ ಎನುತ ಭೀಷ್ಮಾದಿಗಳು ಹೊಗಳಿದರು ಹರುಷದಲಿ ॥
ಸಂ. ೮ ಪ. ೫

ಮಿಸುಪ ತಮ್ಮ ಮುಖೇಂದುವನು ಸೈರಿಸದ ಚಂದ್ರನ ಕಿತ್ತು ನಭದಲಿ
ಬಿಸುಟು ಬೇರ್ಗಳ ಹಿಡಿದರೋ ಹೇಳೆನಲು ಸಭೆಯೊಳಗೆ ।
ಶಶಿವದನೆಯರ ಕೈಯಸೀಗುರಿಯೆಸೆದುದಿಕ್ಕೆಲದಲಿ
ಸಂ. ೮ ಪ. ೩೪

ಕುಲದವನ ಹೃದಯಾಂಧಕಾರವ ಕಳಚಲೆಂದು ಹಿಮಾಂಶು ಹರಹಿದ
ನೆಳೆಯಬೆಳೆದಿಂಗಳನೆನಲು ಸುರರಿಪುಕುಲಾಂತಕನು ।
ತೊಳಪ ದಶನಮಯೂಖತತಿ ಹೊಳೆಹೊಳೆಯೆ ನುಡಿದನು
ಸಂ. ೮ ಪ. ೨೪

ನವಬಲಾಹಕದೊಳಗೆ ಮಿಂಚಿನ ಗವಿಸಹಿತ ಮಱೆಮೇಘ
ವಾವಿರ್ಭವಿಸಿತೆನೆ ದಂಡಿಗೆಯನಿಳಿದಳು" ಸಂ. ೬ ಪ. ೧೮

ರೂಪಕ ಮತ್ತು ಉಪಮಾ

"ಭ್ರೂಲತೆಯ ಸುರಚಾಪದು ರುಕೇಶಾಳಿಗಳ ಕಾರ್ಮುಗಿಲಪಾಂಗದ

ಸಾಲ ಕುಡಿಮಿಂಚುಗಳ ನೂಪುರರವದ ಮೊಳಗುಗಳ ।
ಆ ಲತಾಂಗಿಯು ಗಮನವೇ ಮಳೆಗಾಲದಂತಿರೆ" ಸಂ. ೬ ಪ. ೧೭

ಉಪಮಾ

" ಕಾರಿರುಳಪಟ್ಟಣಕೆ ಚಂದ್ರನ ತೋರಣವ ಬಿಗಿದಂತೆ ದಾಡೆಗ
ಳೋರಣದ ಹೊಳೆಹುಗಳ ಹೊಗರಿಡುವೊಡಲ ಕಪ್ಪುಗಳ ।"
ಸಂ. ೧೧ ಪ. ೨೮

ರೂಪಕ

" ಬಿಂಬವನು ಬೇಱಿರಿಸಿ ಬಹುಮತವೆಂಬ ಬಿಸಿಲಲಿ
ರಾಜನಯವೆಂದೆಂಬ ನೈದಿಲು ನಲುವುಗೆಟ್ಟಿದೆ" ಸಂ.೧೧ ಪ. ೧೨

ದೃಷ್ಟಾಂತ

" ಬಂಧುಕೃತ್ಯದ ಮಾತು ಸೂರ್ಯಂಗಂಧಕಾರವು ಸೇರುವುದೆ"
ಸಂ. ೯ ಪ. ೨೩

ಲೋಕಸ್ವಭಾವದ ವರ್ಣನೆ

" ಪರಿಣತಪ್ರೌಢಿಗಳಿಗಂತಃಕರಣ ನೆನೆವುದು ಸುಜನರಿಗೆ ನಿ
ಷ್ಠುರತೆಗಲ್ಲದೆ ಮನವನೀಯದು ಮಹಿಯ ಮೂಢಜನ।
ಕರಗುವುದು ಶಶಿಕಾಂತ ಚಂದ್ರನಕಿರಣ ತಾಗಲು ವಜ್ರಹತಿಗ
ಬ್ಬರಿಸದಲ್ಲದೆ ಗಿರಿಗಳಳುಕವು ಭೀಷ್ಮ ಕೇಳೆಂದ॥" ಸಂ. ೯ ಪ. ೪೨

ಚಿಂತೆಯ ವರ್ಣನೆ

" ಕೊರಳ ಸೆರೆ ಹಿಗ್ಗಿದವು ದೃಗುಜಲವುರವಣಿಸಿ ಕಡುನೊಂದನಕಟಾ
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ"
ಸಂ. ೧೦ ಪ. ೯

ತಂಗಾಳಿಯ ವರ್ಣನೆ

" ಎಳಲತೆಯನೆಱಗಿಸುತ ಮಲೆತರೆ ತಳಿರುಗಳನಲ್ಲಾಡಿಸುತ ಪರಿ
ಮಳದ ಕಪ್ಪವ ಕೊಳುತ ಮಱಿದುಂಬಿಗಳ ಗೀತವನು।
ಸಲೆ ಸೊಗಸಿ ಮಕರಂದನದಿಯಲಿ ತಳಿತು ಬೀಡನು ಬಿಡುತ ವನದಲಿ
ಸುಳಿದುದೈ ತಂಗಾಳಿ ಭೂಮಿಪಾಲನಂದದಲಿ॥" ಸಂ. ೭. ಪ. ೨೫

ಪಾತ್ರವಿಚಾರ

ಕುಂತಿ-ದ್ರೌಪದಿ :— ಮೂಲಭಾರತದಲ್ಲಿ ಕುಂತಿಯು ವೀರಕ್ಷತ್ರಿಯ ರಮಣಿ ಎನ್ನುವದು ಸ್ಪಷ್ಟವಾಗಿದೆ. ಕುಮಾರವ್ಯಾಸನಿಗೆ ಅದು

ಸರಿತೋರಲಿಲ್ಲ. ಕರ್ಣನನ್ನು ಬೇಡಲು ಹೋದ ಆಕೆ ವೀರರಮಣಿ ಆಗಬಲ್ಲಳೇ ? ಎನ್ನುವುದೇ ಆತನ ಯೋಚನೆ. ಅದಕ್ಕಾಗಿಯೇ, ಕುಂತಿಯು ಕೃಷ್ಣನಿಗೆ ಹೇಳುವ ವಿದುಲೋಪಾಖ್ಯಾನವನ್ನೂ, ತನ್ನ ಮಕ್ಕಳಿಗೆ ಆತನೊಡನೆ ಹೇಳಿಕಳುಹಿಸುವ ವೀರರಿಗೆ ತಕ್ಕ ಸಂದೇಶಗಳನ್ನೂ ಕುಮಾರವ್ಯಾಸನು ತನ್ನ ಕಾವ್ಯದಲ್ಲಿ ಬಿಟ್ಟಿರುತ್ತಾನೆ. ಆದರೆ ಆ ವೀರಕ್ಷತ್ರಿಯರಮಣೀಪಟ್ಟವನ್ನು ದ್ರೌಪದಿಗೆ ಕೊಟ್ಟಿರುತ್ತಾನೆ.

ಕೃಷ್ಣನು ಸಂಧಿಯ ವಿಚಾರದಲ್ಲಿ ಭೀಮನ ಅಭಿಪ್ರಾಯವನ್ನು ಕೇಳಿದಾಗ ಆತನು ಮೊದಲು ಸಂಧಿಗೆ ಒಪ್ಪುತ್ತಾನೆ. ಈ ಅಭಿಪ್ರಾಯವನ್ನು ತಿಳಿದ ಬಳಿಕ ದ್ರೌಪದಿಯು

"ತನಯರೈವರು ಪೀರಸಹದೇವನು ಘಟೋತ್ಕಚನೀ ಸುಭದ್ರಾ
ತನಯನೆನ್ನಯ ತಂದೆ ಮೂಜಕ್ಷೋಹಿಣೀ ಸೇನೆ।
ಇನಿಬರೇ ಕಾದುವರು ದುಶ್ಶಾಸನನ ಕರುಳನು ತೆಗೆದು ಕುರುಕುಲ
ವನವ ಸುಡುವರು ನಿಮ್ಮ ಹಂಗೇಕೆಂದಳಿಂದುಮುಖಿ ‖"

ಸಂ. ೬ ಪ. ೨೬

ಎಂದು ಪತಿಗಳನ್ನು ಹಂಗಿಸುತ್ತಾಳೆ. ಇದನ್ನು ನೋಡಿದರೆ ಆಕೆಯ ಕ್ಷಾತ್ರ ಭಾವ ಎಂತಹುದು ಎನ್ನುವುದು ಸ್ಪಷ್ಟಪಡುತ್ತದೆ. ಭೀಮನಿಗೆ ಚೈತನ್ಯ ಕೊಟ್ಟು ಸಂಧಿಗೆ ವಿಮುಖನನ್ನಾಗಿ ಮಾಡಿದ ವೀರರಮಣಿ ದ್ರೌಪದಿ. ಈಕೆ ಕೃಷ್ಣನ ಭಕ್ತೆ. ಅದಕ್ಕಾಗಿಯೇ ಇವಳನ್ನು ಕಾಪಾಡಲು ಕೃಷ್ಣನು ಬದ್ಧಕಂಕಣನಾಗಿದ್ದುದು.

ಕುಮಾರವ್ಯಾಸನು ಈ ರೀತಿ ಕುಂತೀ-ದ್ರೌಪದಿಯರ ಪಾತ್ರಗಳಲ್ಲಿ ಮಾಡಿರುವ ಬದಲಾವಣೆಯು ಯುಕ್ತಿಯುಕ್ತವಾಗಿ ಕಂಡುಬರುತ್ತದೆ.

ಕೃಷ್ಣ:—ಕೃಷ್ಣ ಕಪಟನಾಟಕಸೂತ್ರಧಾರಿ. ಭಾರತವನ್ನು ಕೃಷ್ಣನ ಚರಿತ್ರೆಯೆಂದೇ ಹೇಳಬಹುದು. ಈ ಭಾರತಕಥೆಯಲ್ಲಿ ಕೃಷ್ಣನ ಪಾತ್ರವೇ ಮುಖ್ಯ. ಅದರಲ್ಲೂ ಉದ್ಯೋಗಪರ್ವದಲ್ಲಿ ಕೃಷ್ಣನ ಹೆಸರಿಲ್ಲದ ಒಂದು ಸಂಧಿಯೂ ಇಲ್ಲ. ಕೃಷ್ಣನು ಸಾಮಾನ್ಯ ಮನುಷ್ಯನಲ್ಲ. ದುಷ್ಟನಿಗ್ರಹ ಶಿಷ್ಟಪರಿಪಾಲನೆಗಾಗಿ ಭಗವಂತನೇ ಶ್ರೀ ಕೃಷ್ಣನಾಗಿ ಅವತರಿಸಿರುತ್ತಾನೆ. ಈ ವಿಚಾರ ದುರ್ಯೋಧನನಿಗೆ ತಿಳಿದಿದ್ದಿತು. ಅದಕ್ಕಾಗಿಯೇ ಸಹಾಯ ಕೇಳಲು ಮತ್ತಾರಲ್ಲಿಗೂ ಹೋಗದ ದುರ್ಯೋಧನ ತಾನೇ ಕೃಷ್ಣನನ್ನು ಸಹಾಯ ಕೇಳಲು ಹೋಗುತ್ತಾನೆ. ಕೃಷ್ಣನು ಸೂತ್ರಧಾರಿ ಎನ್ನುವುದನ್ನು,

"ಹಳಚವವು ಹಾಹೆಗಳು ಸೂತ್ರವ ನಲುಗಿದರೆ ತತ್ಪುಣ್ಯಪಾಪಾ
ವಳಿಗಳಾ ಹಾಹೆಗಳಿಗುಂಟೇ ಸೂತ್ರಧರನಿರಲು ।

ಕೊಲುವನನ್ಯರನನ್ಯರಿಂದವೆ ಕೊಲಿಸುವನು ಕಮಲಾಕ್ಷನಲ್ಲದೆ
ಯುಳಿದ ಜೀವವ್ರಾತಕೀ ಸ್ವಾತಂತ್ರ್ಯವಿಲ್ಲೆಂದ ॥" ಸಂ.೯ ಪ. ೭೩

ಎಂದು ದುರ್ಯೋಧನನೇ ಹೇಳುತ್ತಾನೆ.

ಕೃಷ್ಣನೆಂದರೆ ಕವಿಗೆ ಪರಮಾನಂದ. ಆತನನ್ನು ವರ್ಣಿಸಲು ಆರಂಭಿಸಿದರೆ ಆತನಿಗೆ ಎಚ್ಚರವೇ ಇರುವುದಿಲ್ಲ. ಅದನ್ನೇ ಈ ಕಾವ್ಯದಲ್ಲಿ ಭಾಗವತಶಿರೋಮಣಿಯಾದ ವಿದುರನ ನೆಪದಲ್ಲಿ ವರ್ಣಿಸಿರುತ್ತಾನೆ. ಭಗವದ್ಭಕ್ತನೆಂದರೆ ಕವಿಗೆ ಗೌರವ ಹೆಚ್ಚು. ಕೃಷ್ಣನನ್ನು ಸ್ತುತಿಸುವುದರಲ್ಲಿ ಕವಿಗೆ ತಣಿವೇ ಇಲ್ಲ. ಕೃಷ್ಣನು ವಿದುರನ ಮನೆಗೆ ಬಂದಾಗ ಹೇಗಿದ್ದನೆಂಬುದನ್ನು,

"ಸಿರಿಮೊಗದ ಕಿಱುಬೆಮರ ತೇಜಿಯಖುರಪುಟದ ಕೆಂಧೂಳಿ ಸೋಂಕಿದ
ಸಿರಿಮುಡಿಯ ಕೊನೆವಿಾಸೆಯಲಿ ಕೆಂಪಡರ್ದ ರೇಣುಗಳ।
ಖರಮರೀಚಿಯ ಝಳಕೆ ಬಾಡಿದ ತರುಣತುಳಸಿಯ ದಂಡೆಯೊಪ್ಪುವ
ಗರುವದೇವನ ಬರವ ಕಂಡನು ಬಾಗಿಲಲಿ ವಿದುರ॥"

ಸಂ. ೮ ಪ. ೭

ಎಂದು ಕವಿಯು ವರ್ಣಿಸಿರುತ್ತಾನೆ.

ಭಕ್ತರನ್ನು ಕಾಪಾಡುವುದೇ ಕೃಷ್ಣನ ಕರ್ತವ್ಯ ಎನ್ನುವುದನ್ನು ಕವಿಯು ಉದ್ಯೋಗಪರ್ವದಲ್ಲಿ ಸ್ಪಷ್ಟಪಡಿಸಿರುತ್ತಾನೆ. ಕಾವ್ಯಾರಂಭದಲ್ಲಿ "ಇದು ವಿಚಾರಿಸೆ ಬಱಿಯ ತುಳಸಿಯವುದಕದಂತಿರೆಯಿಲ್ಲ ನೋಳ್ಪುದು ಪದುಮನಾಭನ ಮಹಿಮೆ ಧರ್ಮವಿಚಾರಮಂತ್ರವನು" ಎಂದು ಹೇಳಿರುವುದನ್ನು ಭಾರತಸಾರವಾದ ಈ ಉದ್ಯೋಗಪರ್ವದಲ್ಲಿ ಕಾಣಬಹುದು.

ಕೃಷ್ಣನು ತನ್ನ ಭಕ್ತರಿಗಾಗಿ ಯಾವ ಕಾರ್ಯವನ್ನಾದರೂ ಮಾಡುವುದಕ್ಕೆ ಸಿದ್ಧನಾಗಿರುವನು ಎನ್ನುವುದನ್ನು "ತನಗಹಂಕೃತಿಯಿಲ್ಲ ವೈರೋಚನಿಯ ಪಡಿಹಾಱಿಕೆ ಕಿರೀಟಿಯ ಮನೆಯ ಬಂಡಿಯ ಬೋವತನ" ಎಂದು ಹೇಳಿರುತ್ತಾನೆ.

ಭಕ್ತೆಯಾದ ದ್ರೌಪದಿಯನ್ನು ರಕ್ಷಿಸುವ ಭಾರ ತನಗೆ ಸೇರಿದುದು. ತಾನು ಭಜಕರಿಗೆ ಭಂಟ, ನೆನೆವರ ನಂಟ ಎನ್ನುವುದನ್ನು,

"ಕಮಲಮುಖಿ ಸುಲಿವಡೆದು ಲಕ್ಷ್ಮೀರಮಣ ಲಕ್ಷ್ಮೀರಮಣ ಲಕ್ಷ್ಮೀ
ರಮಣ ಎಂದೊಱಲಿದರೆ ಸಂಜಯ ನೊಂದೆ ನಾನೆಂದ"

"ಕಾವುದೈ ಗೋವಿಂದ ಸಲಹೈ ದೇವಕೀಸುತ ಗಂಡರೈವರ
ಭಾವ ಬೆಟ್ಟಿತು ನೀನಲ್ಲೈ ದೇಸಿಗರ ದೇವನಲ್ಲೈ।

ದೇವ ಕೆಟ್ಟೆನು ಕೆಟ್ಟೆನೈ ಕರುಣಾವಲೋಕನದಿಂದ ಸಲಹೈ
ಜೀವನವನೆನಂದೊಱಲಿದರೆ ಹಂಗಿಗನು ತಾನೆಂದ ॥
ಭಂಟರಾವ್ ಭಜಕರಿಗೆ ನೆನೆವರ ನಂಟರೆಮಗೊಲಿದಂತೆ
ಹೊಗಳಿದರೆಂಟುಮಡಿ ಮೆಚ್ಚುವೆವು ಮೆಚ್ಚೆವು ತರ್ಕಸಾಧಕರ ॥ ”

ಸಂ. ೬ ಪ. ೫-೭-೮

ಎಂದು ಕೃಷ್ಣನಿಂದಲೇ ಹೇಳಿಸಿರುತ್ತಾನೆ.

ಕೃಷ್ಣನು, ಭಕ್ತರಿಗಾಗಿ ತಾನು ಮಾನಹಾನಿಗಳನ್ನೂ ಲೆಕ್ಕಿಸುವುದಿಲ್ಲ ಎನ್ನುವುದನ್ನು

“ ಎನಗೆ ನಿಮ್ಮಯ ದೂಸಱಿಂದಾಯ್ತುನಿತುಸಭೆಯಲಿ ಮಾನಹಾನಿಗಳು” ಎಂದು ಕೃಷ್ಣನು ಹೇಳಲು, ಧರ್ಮರಾಜನು “ ಖಳರು ಮಾಡಿದ ಖತಿಯನೆಮ್ಮೊಳು ತಿಳಿದು ಮಱೆಯಲು ಬೇಕು ಕರುಣಾಜಲಧಿ” ಎಂದು ಕೃಷ್ಣನ ಅಂಘ್ರಿಗಳನ್ನು ಹಿಡಿಯುತ್ತಾನೆ. ಆಗ ಕೃಷ್ಣನು “ ಬಱಿದೆ ಕಾಡದಿರೇಳು ಮನದಲಿ ಮಱೆದವಾಗಳೆ” ಎಂದು ಹೇಳುತ್ತಾನೆ. ಬಳಿಕ ಭೀಮನು “ ಹಾನಿಯನು ತಾ ಹೊತ್ತು ಭೃತ್ಯರ ಮಾನವನು ಪತಿಕರಿಸುವುದು ಒಡೆಯನ ಗುಣ” ಎಂದು ಹೇಳುವಂತೆ ಕವಿಯು ತಿಳಿಸಿರುತ್ತಾನೆ.

ಭೂಭಾರವನ್ನು ಇಳುಹಲು ಭಗವಂತನೇ ಕೃಷ್ಣನಾಗಿ ಭೂಮಿಯಲ್ಲಿ ಜನ್ಮವೆತ್ತಿರುತ್ತಾನೆ. ಉದ್ಯೋಗಪರ್ವದಿಂದ ಮುಂದಿನ ಕಥಾಭಾಗದಲ್ಲಿ ಈ ಕಾರಣದಿಂದಲೇ ಕೃಷ್ಣನ ಚಟುವಟಿಕೆ ಹೆಚ್ಚು. ಇದನ್ನೇ ಕವಿಯು,

“ ಭಾರಹೆಚ್ಚಿದಡೊಱಲಿ ಧರಣೀನಾರಿ ಬಿನ್ನಹಮಾಡಿದಡೆ ದೈತ್ಯಾರಿ ಬಿಜಯಂಗೈದನಿಲ್ಲಿಗೆ ಮನುಜವೇಷದಲಿ । ಧುರಿದನುಜರನೊರಸಿದನು ಕೈಯಾರೆ ಬಳಿಕರ್ಜುನನ ಕೈಯಲಿ ಕೌರವರ ಕೊಲಿಸುವನು ” ಎಂದು ದುರ್ಯೋಧನನಿಂದಲೇ ಹೇಳಿಸುತ್ತಾನೆ.

ಭೂಭಾರವಿಳಿಸಲು ಜನ್ಮವೆತ್ತಿ ಖಳರನ್ನೆಲ್ಲಾ ಸಂಹರಿಸಿ ತನ್ನ ಕಾರ್ಯವನ್ನು ಸಾಧಿಸುವ ಭಕ್ತಕುಟುಂಬಿ ಕೃಷ್ಣ ಎನ್ನುವುದನ್ನು ಕುಮಾರವ್ಯಾಸನು ಸ್ಪಷ್ಟಪಡಿಸಿರುತ್ತಾನೆ.

ದುರ್ಯೋಧನ :—ಕುಮಾರವ್ಯಾಸನು ದುರ್ಯೋಧನನ ಪಾತ್ರದಲ್ಲಿ ಕೆಲವು ಬದಲಾವಣೆಗಳನ್ನು ಮಾಡಿರುತ್ತಾನೆ.

ವ್ಯಾಸ ಮತ್ತು ಪಂಪ ಇವರಿಗಿಂತ ಕುಮಾರವ್ಯಾಸನು, ದುರ್ಯೋಧನನು ಶಠನೆನ್ನುವುದನ್ನು ಚೆನ್ನಾಗಿ ಚಿತ್ರಿಸಿರುತ್ತಾನೆ. ವ್ಯಾಸ ಮತ್ತು ಪಂಪಭಾರತಗಳೆರಡರಲ್ಲೂ ದುರ್ಯೋಧನನು ಹಸ್ತಿನಾವತಿಗೆ ಬಂದ

ಶ್ರೀ ಕೃಷ್ಣನಿಗೆ ಸತ್ಕಾರ ಮಾಡುತ್ತಾನೆ. ಇದು ಕುಮಾರವ್ಯಾಸನಿಗೆ ಸರಿ ತೋರಲಿಲ್ಲ. ಆದಕಾರಣ ಈತನು ಈ ಅಂಶವನ್ನು ತೇಲಿಸಿರುತ್ತಾನೆ. ಕೃಷ್ಣನೇ ತನ್ನ ಮನೆಗೆ ಬರುವನೆಂದು ಆತನ ಸತ್ಕಾರಕ್ಕೆ ಎಲ್ಲ ಸಲಕರಣೆಗಳನ್ನೂ ಕೌರವನು ಸಿದ್ಧಪಡಿಸುತ್ತಾನೆ. ಆದರೆ ಕೃಷ್ಣನು ಆತನ ಮನೆಗೆ ಹೋಗುವುದಿಲ್ಲ. ಅದಕ್ಕಾಗಿಯೇ ದುರ್ಯೋಧನನು ಸಭೆಗೆ ಬಂದ ಕೃಷ್ಣನನ್ನು ಸತ್ಕರಿಸುವ ಯೋಚನೆಯನ್ನೇ ಬಿಟ್ಟು ಆತನು ಬಂದರೂ, ತಾನು ಆಸನದಿಂದ ಕದಲದೆ ಕುಳಿತಿದ್ದುದು. ದುರ್ಯೋಧನನ ಶಠತ್ವವನ್ನು ಕಂಡ ಕೃಷ್ಣನು ಅದಕ್ಕೆ ತಕ್ಕ ಪ್ರಾಯಶ್ಚಿತ್ತಮಾಡಬೇಕೆಂದು ಆತನನ್ನು ಆಸನದಿಂದ ಉರುಳಿ ಬಂದು ತನ್ನ ಕಾಲಿನಮೇಲೆ ಬೀಳುವಂತೆ ಮಾಡುತ್ತಾನೆ.

ಈ ಸನ್ನಿವೇಶದಿಂದ ರಾಜನಾದ ದುರ್ಯೋಧನನ ಸ್ಥಾನಮಾನಗಳಿಗೆ ಕುಂದು ತೋರಿಬಂದರೂ, ಕವಿಯು ಕೃಷ್ಣಭಕ್ತನಾದ ಕಾರಣ ತನ್ನ ಒಡೆಯನಿಗೆ ವಿರೋಧಿಯಾದ ಈತನಿಗೆ ಅಪಮಾನಪಡಿಸಬೇಕೆಂಬ ಆವೇಶದಿಂದಲೋ, ಭಗವಂತನಾದ ಶ್ರೀಕೃಷ್ಣನ ಮಹಿಮೆಯನ್ನು ಎಲ್ಲರಿಗೂ ತೋರ್ಪಡಿಸುವುದಕ್ಕಾಗಿಯೋ ಈ ವಿಧವಾದ ಸನ್ನಿವೇಶವನ್ನು ಕುಮಾರವ್ಯಾಸನು ಸೇರಿಸಿರಬಹುದು.

ಶ್ರೀಕೃಷ್ಣನಿಗೆ ಮಣಿಯದ ದುರ್ಯೋಧನನು ಕವಿಯ ದೃಷ್ಟಿಗೆ ನಾಯಂತೆಯೂ ನರಿಯಂತೆಯೂ ಕಂಡಿದ್ದಾನೆ. ಅದಕ್ಕಾಗಿಯೇ ಕುಮಾರವ್ಯಾಸನು ದುರ್ಯೋಧನನಿಗೆ ನಾಯಿ, ನರಿ, ವಿಕಳ, ಖುಲ್ಲ, ಖಳ, ಪಾತಕಿ, ಮೂರ್ಖರಮೌಳಿ, ಕುಮತಿ, ಮರುಳ, ದುಷ್ಟ ಮೊದಲಾದ ವಿಶೇಷಣಗಳನ್ನೇ ಕೊಡುತ್ತಾನೆ.

ದುರ್ಯೋಧನನು ಕೃಷ್ಣನ ಶತ್ರುವಾಗಿದ್ದು ಕುಮಾರವ್ಯಾಸನು ಕೃಷ್ಣನ ಭಕ್ತನಾಗಿರುವುದೇ, ಈ ವಿಧವಾದ ಸನ್ನಿವೇಶಬದಲಾವಣೆಗೂ ಮತ್ತು ವಿಶೇಷಣಗಳನ್ನು ಕೊಡುವುದಕ್ಕೂ ಕಾರಣವೆನ್ನಬಹುದು.

ಅಲ್ಲದೆ "ಕೃಷ್ಣನು ಭಕ್ತಕುಟುಂಬಿ. ನಂಬಿದವರನ್ನು ಕಾಪಾಡುವುದೇ ಆತನ ಕೆಲಸ. ದುರ್ಯೋಧನನು ಕೃಷ್ಣನನ್ನು ಸತ್ಕರಿಸಿದರೆ, ಆತನೂ ಕೃಷ್ಣಭಕ್ತನೇ ಆಗುತ್ತಾನೆ. ಭಕ್ತನಾದ ಆತನನ್ನು ಉಳಿಸುವ ಪ್ರಯತ್ನವನ್ನೇ ಕೃಷ್ಣನು ಎಸಗಬೇಕಾಗುತ್ತದೆ." ಇದು ಕಥೆಗೆ ವಿರುದ್ಧವಾಗುತ್ತದೆ. ಅದಕ್ಕಾಗಿಯೇ ದುರ್ಯೋಧನನು ಕೃಷ್ಣನನ್ನು ಸತ್ಕರಿಸುವ ಸನ್ನಿವೇಶವನ್ನೇ ಕವಿಯು ಬಿಟ್ಟಿರುವುದು.

ಕವಿಯು, ದುರ್ಯೋಧನನು ಶಠನಂತೆ ವರ್ತಿಸಲು "ಕೃಷ್ಣನ ಕೆಣಕಿದಲ್ಲದೆ ವಹಿಲದಲಿ ಕೈವಲ್ಯವಿಲ್ಲೆಂದ" "ಛಲಕೆ ಮಣಿಯದೆ ರಾವಣಾದಿಗಳಳಿದರಿದಲಾ ಕೀರ್ತಿ ಕಾಯವಿದಳಿವುದಗ್ಗದ ಕೀರ್ತಿಯುಳಿವುದು ಅಂಜಲೇಕೆಂದ" ಎಂದು ಕಾರಣವನ್ನು ತಿಳಿಸುತ್ತಾನೆ.

ದುರ್ಯೋಧನನು ಸಾಮಾನ್ಯನಲ್ಲ, ಮತ್ತೊಬ್ಬರ ಹೃದಯವನ್ನರಿತು ಕೆಲಸಮಾಡುವುದರಲ್ಲಿ ಅಗ್ರಗಣ್ಯ. "ನನಗೆ ಕೃಷ್ಣನ ಹೃದಯ ತಿಳಿದಿದೆ; ನೀವು ಮೇಗರೆಯಱಿತದವರೀರಾವಣಾರಿಯ ಬಗೆಯನಱಿಯರಿ" ಎಂದು ಹೇಳುತ್ತಾನೆ. ಈತನಿಗೆ ಬೇಕಾಗಿರುವುದು ಗೌರವ ಕೀರ್ತಿಗಳು. ಎಲ್ಲರೂ ತಿಳಿದಿರುವಂತೆ ರಾಜ್ಯದಾಸೆಯಲ್ಲ. ಅದಕ್ಕಾಗಿಯೇ ತನಗೆ ಯುದ್ಧದಲ್ಲಿ ಸಾವು ಖಂಡಿತವೆಂದು ತಿಳಿದಿದ್ದರೂ ಸಂಧಿಗೆ ಒಪ್ಪದಿದ್ದುದು.

ದುರ್ಯೋಧನ ಮಾನ ಎನ್ನುವುದು ಲೋಕವಿದಿತವಾದುದು. ಅದನ್ನು ಕುಮಾರವ್ಯಾಸನು ಉದ್ಯೋಗಪರ್ವದಲ್ಲಿ ಸೂಕ್ಷ್ಮವಾಗಿ ಚಿತ್ರಿಸಿರುತ್ತಾನೆ.

"ಕೃಷ್ಣನನ್ನು ಸಹಾಯಕೇಳಲು ಹೋದ ದುರ್ಯೋಧನನು ನಿದ್ರಾಸಕ್ತನಾದ ಆತನ ತಲೆಯ ಬಳಿ ಕುಳಿತುಕೊಳ್ಳುತ್ತಾನೆ. ಎಚ್ಚರಗೊಂಡ ಕೃಷ್ಣನು ಮೊದಲು ತನ್ನನ್ನು ನೋಡದೆ ಅರ್ಜುನನ್ನು ನೋಡುತ್ತಾನೆ." ಆಗ ರಾಜನಾದ ದುರ್ಯೋಧನನಿಗೆ ತನ್ನ ಮಾನಕ್ಕೆ ಕುಂದುಂಟಾಯಿತೆಂಬ ಭಾವವನ್ನು "ವಿಕಾರದ ಇರವ" ಎಂದು ಕವಿಯು ಹೇಳಿರುರುತ್ತಾನೆ.

ದುರ್ಯೋಧನನು ಬಲು ಠೀವಿಕಾರ. ಅದನ್ನು ತೋರ್ಪಡಿಸುವುದಕ್ಕಾಗಿಯೇ ಕವಿಯು ಕೃಷ್ಣನನ್ನು ಸಭೆಗೆ ಕರೆಸುವುದಕ್ಕೆ ಮೊದಲು ಆಸ್ಥಾನವರ್ಣನೆಯನ್ನು ವಿಶದವಾಗಿ ಚಿತ್ರಿಸಿರುವನಲ್ಲದೆ "ರಾವಣಾರಿಯ ಕಾಣಿಕೆಗೆ ಬಲುಠೀವಿಯನು ತೋಱಿದನು" ಎಂದೂ ತಿಳಿಸಿರುತ್ತಾನೆ. ಮತ್ತು "ನಿಮಗೇಕೆ ರಾಯರ ಠೀವಿ" ಎಂದು ಕೃಷ್ಣನನ್ನೇ ಮೂದಲಿಸವಂತೆ ಹೇಳುತ್ತಾನೆ.

ದುರ್ಯೋಧನನು ರಾಜಕಾರ್ಯನಿಪುಣ. ಪಾಂಡವಪಕ್ಷಪಾತಿಯಾದ ಕೃಷ್ಣನನ್ನು ತನ್ನ ಕಡೆಗೆ ಮಾಡುವುದರಿಂದ ತನಗೆ ಗೆಲವು ನಿಶ್ಚಯವೆಂದು ಬಗೆದು ಅದಕ್ಕಾಗಿಯೇ ಕೃಷ್ಣನಲ್ಲಿಗೆ ಆತನು ಹೋಗುವುದು. ಪಾಂಡವರಿಗೆ ಸಹಾಯ ಮಾಡಲು ಹೊರಟ ಶಲ್ಯನನ್ನು ಉಪಾಯದಿಂದ ತನ್ನ ಕಡೆಗೆ ತಿರುಗಿಸಿದುದೂ ಈತನ ನೈಪುಣ್ಯವನ್ನು ಸ್ಪಷ್ಟಪಡಿಸುತ್ತದೆ.

ದುರ್ಯೋಧನನು ತಾನೊಬ್ಬನೇ, ಆತುರದಿಂದ ಮಂತ್ರಾಲೋಚನೆ ಇಲ್ಲದೆ ಕಾರ್ಯವನ್ನು ಮಾಡಲು ಪ್ರಯತ್ನಿಸಿದವನಲ್ಲ. ಎಲ್ಲರೊಡನೆಯೂ ಚರ್ಚಿಸಿ ಬಳಿಕ ತಾನು ನಿಶ್ಚಯಿಸಿ ಕೆಲಸಮಾಡಲು ಪ್ರಾರಂಭಿಸುತ್ತಾನೆ. ಆ ನಿಶ್ಚಯವನ್ನು ಯಾರೂ ಭೇದಿಸಲು ಸಮರ್ಥರಾಗುವುದಿಲ್ಲ ಎನ್ನುವುದನ್ನು "ನೆನೆದ ಮಂತ್ರವ ತನ್ನ ತಂದೆಯ ಮನದ ಮಚ್ಚದಲೊರೆದು ಕರ್ಣನ ನೆನಹಿನಲಿ ಪುಟವಿಟ್ಟು ಶಕುನಿಯ ನೀತಿಯಲಿ ನಿಗುಚಿ। ಅನುಜ ಮತದಲಿ ವಿಸ್ತರಿಸಿ ವೈದುನನ ಮತದಲಿ ಬಣ್ಣವಿಟ್ಟನು ಜನಪ", "ಚಪಳಕರ್ಣನ ಕೂಡೆ ನಿಶ್ಚೈಸಿದನು ಕಾಳಗವ" ಎಂದು ತಿಳಿಸಿರುತ್ತಾನೆ.

ಈ ಉದ್ಯೋಗಪರ್ವದಲ್ಲಿ ಧೃತರಾಷ್ಟ್ರ ಮತ್ತು ದುರ್ಯೋಧನರಿಗೆ ಉಪದೇಶಮಾಡುವ ವ್ಯಾಜದಲ್ಲಿ ಸಮಾಜನಿಯಮಗಳು, ರಾಜ್ಯಾಂಗ ವ್ಯವಸ್ಥೆ, ವ್ಯವಹಾರ, ಧರ್ಮ ಮೊದಲಾದ ವಿಷಯಗಳನ್ನು ಸಂಗ್ರಹವಾಗಿ ಕವಿಯು ತಿಳಿಸಿರುತ್ತಾನೆ.

ನಾರಣಪ್ಪನು ಗ್ರಂಥಾರಂಭದಲ್ಲಿ—

"ಅರುಸುಗಳಿಗಿದು ವೀರ ದ್ವಿಜರಿಗೆ
ಪರಮವೇದದ ಸಾರ ಯೋಗೀ
ಶ್ವರರ ತತ್ತ್ವವಿಚಾರ ಮಂತ್ರೀಜನಕೆ ಬುದ್ಧಿಗುಣ"

ಎಂದು ಹೇಳಿರುವ ಈ ಎಲ್ಲ ಅಂಶಗಳೂ ಭಾರತಸಾರವಾದ ಈ ಉದ್ಯೋಗ ಪರ್ವದಲ್ಲೇ ಅಡಕವಾಗಿವೆ ಎಂದರೆ ಉತ್ಪ್ರೇಕ್ಷೆಯಾಗಲಾರದು.

ಪರಿಷ್ಕರಣ

ಈ ಪರ್ವದ ಪರಿಷ್ಕರಣಕಾರ್ಯವನ್ನು ಒಟ್ಟು ೧೮ ಪ್ರತಿಗಳ ಸಹಾಯದಿಂದ ಮಾಡಿದೆ. ಮೊದಲನೆಯ ಮುದ್ರಣದಲ್ಲಿ ಕೆ. ೭೦ನೆಯ ನಂಬರಿನ ಪ್ರತಿಯನ್ನೇ (ಕಾಲ. ಶಾ.ಶ.೧೭೬೪) ಮುಖ್ಯವಾಗಿ ಅನುಸರಿಸಿರುತ್ತಾರೆ. ಅಲ್ಲದೆ ಅದರಲ್ಲಿ ನಮ್ಮಲ್ಲಿರುವ ಓಲೆ ಪ್ರತಿಗಳಲ್ಲಿ ದೊರೆಯದ ಕೆಲವು ಪಾಠಗಳೂ ಇರುವಂತೆ ತಿಳಿದುಬರುತ್ತದೆ. ಈ ಮುದ್ರಣದಲ್ಲಿ, ನಮ್ಮಲ್ಲಿರುವ ಭಾರತದ ಪ್ರತಿಗಳಲ್ಲಿ ಪ್ರಾಚೀನವಾದ ಕ್ರಿ. ಶ. 1554ರಲ್ಲಿ ಪ್ರತಿಯಾದ ಕೆ. ೨೦೫ನೇ ನಂಬರಿನ ಪ್ರತಿಯನ್ನೇ ಮುಖ್ಯಪ್ರತಿಯನ್ನಾಗಿ ಸ್ವೀಕರಿಸಿದೆ. ಈ ಪ್ರತಿಯಲ್ಲಿ ಕೆಲವು ಕಡೆ ಗ್ರಂಥಪಾತವಿದೆ. ಈ ಪ್ರತಿಯ ಪಾಠಕ್ಕೂ ಉಳಿದ ಪ್ರತಿಗಳ ಪಾಠಕ್ಕೂ ಅನೇಕ ಕಡೆಗಳಲ್ಲಿ ಬಹಳ ವ್ಯತ್ಯಾಸವಿದೆ. ಈ ಪ್ರತಿಯಲ್ಲಿ ಶಕಟರೇಫವಿದೆ. ಇದರ ಪ್ರಯೋಗವೂ ಸರಿಯಾಗಿದೆ. ಆದುದರಿಂದಲೇ ಪ್ರಾಚೀನವಾದ ಇದನ್ನೇ ಮೂಲಪ್ರತಿಯನ್ನಾಗಿ ಸ್ವೀಕರಿಸಿದೆ. ಈ ಪ್ರತಿಗೆ (ಕ) ಎಂದು ಅಂಕಿತಮಾಡಿದೆ.

'ಕ' ಪ್ರತಿಯ ವಿವರ

ಓಲೆಯ ಆಕಾರ :- -ಉದ್ದ ೧ ಅಡಿ, ಅಗಲ ೨ ಅಂಗುಲ.

ಪ್ರತಿ ಓಲೆಯಲ್ಲೂ ೧೬ ರಿಂದ ೧೯ರವರೆಗೆ ಪಙ್ಕ್ತಿಗಳಿವೆ. ಅಕ್ಷರಗಳು ಸಣ್ಣಗಿದ್ದರೂ ಸ್ಫುಟವಾಗಿವೆ. ಆರಂಭದಿಂದ ಕೊನೆಯವರೆಗೆ ಪುಟ

ಸಂಖ್ಯೆಯನ್ನು ಹಾಕದೆ ಪ್ರತಿಪರ್ವದ ಪುಟಸಂಖ್ಯೆಯೇ ಬೇರೆಬೇರೆಯಾಗಿದೆ. ಪರ್ವಾರಂಭ ಮತ್ತು ಪರ್ವಾಂತ್ಯಗಳಲ್ಲಿ ಕೆಲವು ಚಿತ್ರಗಳನ್ನು ಬರೆದಿದೆ. ಗ್ರಂಥವನ್ನು ಪ್ರತಿಮಾಡಲು ಆರಂಭಿಸಿದ ಕಾಲ ತಿಳಿದು ಬರುವುದಿಲ್ಲ. ಕೊನೆಯಲ್ಲಿರುವ ಒಂದು ಶಿಥಿಲವಾದ ಓಲೆಯಲ್ಲಿ ಗ್ರಂಥವನ್ನು ಪ್ರತಿಮಾಡಿ ಮುಗಿಸಿದ ಕಾಲ, ಪರ್ವಗಳ ಹೆಸರು, ಸಂಧಿ ಮತ್ತು ಪದ್ಯಗಳ ಸಂಖ್ಯೆ ಈ ವಿಷಯಗಳಿವೆ. ಅದರ ವಿವರವು ಈ ರೀತಿ ಇದೆ:

"ಅಂತು ಸಂಧಿ ೧೩ ಪದ ೬೨೧೧ ಕಂ ಗದಾಪರ್ವ ಸಮಾಪ್ತ ಮಂಗಳ ಮಹಾ ಶ್ರೀ॥ . . . . ತು ವರ್ತಮಾನ ಆನಂದ ಸಂವತ್ಸರದ ಶ್ರಾವಣ ಬ. ೩ ಸೌಮ್ಯವಾರದಲ್ಲೂ ಸಾಲಿಗ್ರಾಮದ ಚಿಕ್ಕದೇವರಸರ ಮಕ್ಕಳು ಬೋಧಾಯನ ಸೂತ್ರ ಶ್ರೀವತ್ಸಗೋತ್ರ . . . . ಹೆರಗಿನ ನಂಜಯ್ಯ . . . . | ಪರ್ವ ೧ಕೆ ಸಂಧಿ ೧೯ಕೆ ಪದ ೯೪೦, ಸಭಾಪರ್ವ ೧ಕಂ ಸಂಧಿ ೧೬ಕೆ ಪದಸಾ ೧೧೫೫, ಅರಣ್ಯಪರ್ವ ೧ಕಂ ಸಂಧಿ ೨೧ಕಂ ಪದಸಾ ೧೧೪೨, ವಿರಾಟಪರ್ವ . . . . | ಭೀಷ್ಮಪರ್ವ ೧ಕಂ ಸಂಧಿ ೧೦ಕೆ ಪದ ೫೪೦, ದ್ರೋಣಪರ್ವ ೧ಕೆ ಸಂಧಿ ೧೯ಕೆ ಪದ ೧೧೭೫ ಕಂ, ಕರ್ಣ ಪ ೧ಕೆ ಸಂಧಿ ೨೭ಕೆ ಪದ ೧೧೫೨, ಶಲ್ಯಪರ್ವವು ೧ಕೆ ಸಂಧಿ ೩ಕೆ . . . . ದಶಪರ್ವವು ೧ಕ್ಕೆ ಸಂಧಿ ೧೪೭ಕಂ ಪದಸಾ ೭೯೭೧ಕಂ ಶುಭಮಸ್ತು. ಶ್ರೀನಾರಾಯಣಾರ್ಪಿತಮಸ್ತು. ಮಂಗಳ ಮಹಾ ಶ್ರೀ . . . . ಬರದನೆಂದು ಬಯ್ಯಲ್ವೇಡಂ. ತಪ್ಪಕ್ಕು ಶುದ್ಧವಕ್ಕು ಪ್ರತಿಸಮಾನಂ ಬರದೆಂ ಬರೆದೆಂ" ಶ್ರೀ ಶ್ರೀ ಶ್ರೀ॥

ಇದು ಶಾ. ಶ ೧೪೭೬ರಲ್ಲಿ ಪ್ರತಿಯಾದುದು. ಕ್ರಿ. ಶ. 1554ನೇ ಆಗಸ್ಟ್‌ಮಾಹೆ 16ನೇ ತಾ॥ ಬುಧವಾರ ಇದರ ಬರವಣಿಗೆ ಮುಗಿದಿದೆ. ಓಲೆಗಳನ್ನು ಒಟ್ಟಿಗೆ ಸೇರಿಸಿ ಕಟ್ಟುವುದಕ್ಕಾಗಿ ಪ್ರತಿ ಓಲೆಯಲ್ಲೂ ಮಾಡಿರುವ ರಂಧ್ರಗಳಿಗೆ ಸಣ್ಣ ಸಣ್ಣ ಬೆಳ್ಳಿಯ ಕಟ್ಟುಗಳನ್ನು ಹಾಕಿದೆ. ಇದು ಈ ಪ್ರತಿಯನ್ನು ಶಿಥಿಲವಾಗದಂತೆ ಕಾಪಾಡಲು ಮಾಡಿರುವ ಒಂದು ವೈಶಿಷ್ಟ್ಯ. ಓಲೆಯನ್ನು ನೋಡಿದರೆ ಹೆಚ್ಚು ಬಳಸಿರುವಂತೆ ತಿಳಿದು ಬರುತ್ತದೆ. 'ಥ' ಅಕ್ಷರಕ್ಕೆ 'ಥ' ಒತ್ತನ್ನು (ಥ್ಥ) ಕೊಡುವುದಕ್ಕೆ ಪ್ರತಿಯಾಗಿ 'ಅ' ಎಂದು ಬರೆದಿರುವುದು (ಥ್ಅ), ಈ ಪ್ರತಿಯಲ್ಲಿ ಕಂಡುಬರುವ ಅಕ್ಷರವೈಚಿತ್ರ್ಯ. ಇದರಲ್ಲಿ ಹೆಚ್ಚು ಪದ್ಯಗಳಿಲ್ಲ.

ಒಟ್ಟು ೧೮ ಪ್ರತಿಗಳಲ್ಲಿ ಕೆ. ಎ. ೨೨೮ ನಂ. ಮಾತ್ರ ಕಾಗದದ ಪ್ರತಿ. ಉಳಿದ ಪ್ರತಿಗಳೆಲ್ಲಾ ಓಲೆಗಳೇ. ಇವುಗಳಲ್ಲಿ (ಬ. ಮ. ಯ. ರ.) ಈ ನಾಲ್ಕು ಪ್ರತಿಗಳು ಅರಮನೆ ಸರಸ್ವತೀ ಭಂಡಾರದಲ್ಲಿರುವುವು. ಉಳಿದ ಹದಿನಾಲ್ಕು ಪ್ರತಿಗಳು ನಮ್ಮ ಕೋಶಾಗಾರದಲ್ಲಿವೆ. ಪ್ರತಿಗಳ ಕೆಲವು ಮುಖ್ಯವಿಚಾರಗಳನ್ನು ಪಟ್ಟಿಮಾಡಿ ಮುಂದೆ ಕೊಟ್ಟಿದೆ.

ಪ್ರತಿಸಂಖ್ಯೆ	ನಂಬರು	ಹೆಸರು	ಕಾಲ	ಶಕಟರೇಫ	ಸಂಧಿ	ಒಟ್ಟು ಪದ್ಯಗಳು	ಸ್ಥಿತಿ
೧	ಕೆ. ೨೦೫	ಕ	ಕ್ರಿ. ಶ. ೧೫೫೪	ಇದೆ	೧೧	೬೪೨	ಸಾಮಾನ್ಯ
೨	ಕೆ. ೫೪೧	ಖ	ಕ್ರಿ. ಶ. ಸು. ೧೮೧೦	ಇಲ್ಲ	೧೧	೭೭೮	ಉತ್ತಮ
೩	ಕೆ. ೭೦	ಗ	ಕ್ರಿ. ಶ. ೧೮೪೧	,,	೧೨	೭೮೮	,,
೪	ಇಲ್ಲ	ಚ	ಕ್ರಿ. ಶ. ೧೮೪೨	,,	೧೨	೮೧೦	,,
೫	ಕೆ. ೨೬೬	ಜ	ಕ್ರಿ. ಶ. ಸು. ೧೮೭೬	,,	ಅಪೂರ್ಣ	?	,,
೬	ಕೆ. ೧೩೮	ಝ	ಕ್ರಿ. ಶ. ಸು. ೧೮೦೯	,,	೧೧	೬೨೧	ಶಿಥಿಲ
೭	ಕೆ. ೨೫೧	ಟ	ಕ್ರಿ. ಶ. ಸು. ೧೮೪೬	,,	೧೨	೬೭೪	ಉತ್ತಮ
೮	ಕೆ. ೩೭೫	ಠ	?	ಇದೆ	೧೧	೬೭೭	ಶಿಥಿಲ
೯	ಕೆ. ೫೪೦	ಡ	ಕ್ರಿ. ಶ. ಸು. ೧೮೨೦	ಇಲ್ಲ	೧೨	೭೪೫	ಉತ್ತಮ
೧೦	ಕೆ. ೩೦೫	ಣ	ಕ್ರಿ. ಶ. ಸು. ೧೭೬೭	,,	೧೩	೭೬೯	,,
೧೧	ಕೆ. ಎ. ೨೨೮	ತ	?	,,	೧೧	೬೪೭	,,
೧೨	ಕೆ. ೧೬೩	ದ	?	,,	೧೨	೬೪೪	,,
೧೩	ಕೆ. ೨	ನ	?	ಇದೆ	೧೨	೭೨೭	ಸಾಮಾನ್ಯ
೧೪	ಇಲ್ಲ	ಪ	?	ಇಲ್ಲ	೧೨	೭೪೪	ಉತ್ತಮ
೧೫	ಸ. ಭಂ. ೧೨೮೬	ಬ	?	ಇದೆ	೧೧	೬೫೩	,,
೧೬	ಸ. ಭಂ. ೪೬೬	ಮ	ಕ್ರಿ. ಶ. ಸು. ೧೮೦೦	ಇಲ್ಲ	೧೧	೬೪೨	,,
೧೭	ಸ. ಭಂ. ೧೬೮೯	ಯ	ಕ್ರಿ. ಶ. ೧೮೧೭–೩೦	,,	೧೨	೭೬೦	,,
೧೮	ಸ. ಭಂ. ೧೬೯೦	ರ	ಕ್ರಿ. ಶ. ೧೭೨೮	,,	೧೨	೬೯೭	,,

ಪ್ರತಿಗಳ ವಿಶೇಷ ವಿಚಾರ

ಖ:—ಗ್ರಂಥವು ಪೂರ್ಣವಾಗಿದೆ. ಇದನ್ನು ಸೋಮನಪಲ್ಲಿ ನಾರಣಪ್ಪನು ಘೋರಬಲಿ ಕಾಳಯ್ಯನಾಯ್ಯರ್‌ಗೆ ಬರೆದುಕೊಟ್ಟಿರುತ್ತಾನೆ. ಈ ಪ್ರತಿಕಾರನು 'ನಕುಲ' ಎನ್ನುವುದಕ್ಕೆ 'ಲಕುಳ' ಎಂದೂ, 'ದವು' ಎನ್ನುವುದಕ್ಕೆ 'ದೂ' ಎಂದೂ, 'ಯ' ಕಾರಕ್ಕೆ ಒತ್ತಕ್ಷರವನ್ನು ಬರೆಯುವುದಕ್ಕೆ ಪ್ರತಿಯಾಗಿ ಅದರ ಹಿಂದಿರುವ ಅಕ್ಷರಕ್ಕೆ 'ೃ' ಒತ್ತನ್ನುಕೊಟ್ಟು ಒತ್ತಕ್ಷರವನ್ನು ಪೂರ್ಣಾಕ್ಷರವನ್ನಾಗಿಯೂ ಬರೆದಿರುತ್ತಾನೆ. ಈ ಪ್ರತಿಯಲ್ಲಿ ಸಾಮಾನ್ಯವಾಗಿ ಶುದ್ಧಪಾಠಗಳೇ ದೊರೆಯುತ್ತವೆ.

ಗ:—ಗ್ರಂಥವು ಪೂರ್ಣವಾಗಿದೆ. ಇದನ್ನು ಪ್ರತಿಮಾಡಲು ಪ್ರಾರಂಭಿಸಿದುದು ಶಾಲಿವಾಹನಶಕವರ್ಷಗಳು ೧೭೬೩ನೇ ಸಂದ ವರ್ತಮಾನ ಶಾರ್ವರಿ ಸಂವತ್ಸರದ ಪುಷ್ಯ ಶುದ್ಧ ತೃತೀಯಾ. ಮುಗಿಸಿದ ಕಾಲ–ಶುಭಕೃತ್‌ಸಂವತ್ಸರದ ಕಾರ್ತಿಕ ಶುದ್ಧ ಪ್ರಥಮಾ ಶುಕ್ರವಾರ. ಪುಷ್ಪಾಲ ವೆಂಕಟರಾಜುವಿನ ಮಗ ವೈಯ್ಯರು ವೆಂಕಟರಾಜುವು ಹೊನ್ನಶೆಟ್ಟಿಮಗ ಕಟ್ಟಿಗೆ ಸೇರುಗಾರ ತಿಮ್ಮಪ್ಪನವರ ಅಳಿಯ ಕಟ್ಟಿಗೆ ಲಕ್ಷುಮೈಯನಿಗಾಗಿ ಬರೆದಿರುತ್ತಾನೆ. ಪ್ರತಿಕಾರನು 'ಹ' ಎಂದು ಬರೆಯುವ ಕಡೆಯಲ್ಲೆಲ್ಲಾ 'ಅ' ಎಂದೇ ಬರೆದಿರುತ್ತಾನೆ. ಉದ್ಯೋಗಪರ್ವದ ೩ನೇ ಸಂಧಿಯಲ್ಲಿ ೧೧ ಪದ್ಯಗಳಿಗೆ ಮೂಲಭೂತವಾದ ೧೧ ಸಂಸ್ಕೃತ ಶ್ಲೋಕಗಳನ್ನೂ, ಅಂತೆಯೇ ನಾಲ್ಕನೇ ಸಂಧಿಯಲ್ಲಿ ೧೩ ಶ್ಲೋಕಗಳು ಹೀಗೆ ಒಟ್ಟು ೨೪ ಶ್ಲೋಕಗಳನ್ನು ಆಯಾ ಪದ್ಯಗಳಿಗೆ ಮೊದಲಿನಲ್ಲಿ ಬರೆದಿರುತ್ತಾನೆ. ಶ್ಲೋಕಗಳು ಸರಿಯಾಗಿಲ್ಲ. ಈ ಪ್ರತಿಯಲ್ಲಿ ಹೆಚ್ಚು ಪದ್ಯಗಳಿವೆ. ಹೆಚ್ಚು ಪ್ರತಿಗಳ ಪಾಠಗಳು ಈ ಪ್ರತಿಯನ್ನು ಹೋಲುತ್ತವೆ.

ಚ:—ಈ ಪ್ರತಿಯಲ್ಲಿ ಆರಂಭದಿಂದ ೧೪೯ ಓಲೆಗಳಿಲ್ಲ. ೧೯೦ನೇ ಓಲೆಯಿಂದ ಗ್ರಂಥವು ಪ್ರಾರಂಭವಾಗಿದೆ. ಉದ್ಯೋಗಪರ್ವದಿಂದ ಗದಾಪರ್ವಪೂರ್ತಿ ಗ್ರಂಥವಿದೆ. ಓದಲು ಸೌಕರ್ಯಕ್ಕಾಗಿ ಆದಿಪರ್ವದಿಂದ ವಿರಾಟಪರ್ವಪೂರ್ತಿ ನಾಲ್ಕು ಪರ್ವಗಳನ್ನು ಬೇರೆ ಪ್ರತಿಯನ್ನಾಗಿ ವಿಭಾಗಿಸಿರುವಂತೆ ತಿಳಿದುಬರುತ್ತದೆ. ಈ ಓಲೆಯನ್ನು "ಮಹಿಶೂರಲ್ಲಿ ಇರುವ ಶ್ರೀಮತ್ ಚೌಬೀನೆ ಚಿಕ್ಕಣ್ಣನವರಿಗಾಗಿ ಮಹಿಶೂರಲ್ಲಿ ಇರುವ ಶ್ರೀಮತ್ ಪುಸ್ತಕ ನಾರಣಪ್ಪನವರು ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನಶಕಾಬ್ದಾಃ ೧೭೬೪ ಸಂದು ವರ್ತಮಾನವಾದ ಶುಭಕೃತ್ ಸಂವತ್ಸರದ ವೈಶಾಖ ಶುದ್ಧ ೧೦ ಗುರುವಾರ ಉತ್ತರಾ ನಕ್ಷತ್ರ ೩೪॥ ಶುಭಯೋಗ, ಈ ಶುಭದಿವಸ ಸೂರ್ಯೋದಯವಾದ ೬ ಘಳಿಗೆಗೆ ಸಲ್ಲುವ

ವೃಷಭಲಗ್ನದಲ್ಲಿ'' ಪ್ರತಿಮಾಡಿ ಮುಗಿಸಿರುತ್ತಾರೆ. ಈ ಪ್ರತಿಯಲ್ಲಿ ಹೆಚ್ಚು ಪಾಠಾಂತರಗಳಿವೆ.

ಜ:—ಈ ಪ್ರತಿಯಲ್ಲಿ ಗ್ರಂಥವು ಪೂರ್ಣವಾಗಿಲ್ಲ. ಪ್ರಾರಂಭದಿಂದ ಉದ್ಯೋಗಪರ್ವ ಸಂಧಿ ೪ರಲ್ಲಿ ೪೩ ಪದ್ಯಗಳಿವೆ. ಈ ಪ್ರತಿಯನ್ನು ಮುದ್ದುಮಲ್ಲನವರಿಗಾಗಿ ಗುರುಕಾರ ಬಸವಲಿಂಗಪ್ಪನ ಭಾವಮೈದ ನಂಜಪ್ಪನು ಧಾತುನಾಮ ಸಂವತ್ಸರದ ಭಾದ್ರಪದ ಬಹುಳ ತೃತೀಯಾ ಬುಧವಾರ ಬರೆಯಲು ಪ್ರಾರಂಭಿಸಿರುತ್ತಾನೆ.

ಝ:—ಈ ಪ್ರತಿಯಲ್ಲಿ ಉದ್ಯೋಗಪರ್ವ ಮಾತ್ರ ಇದೆ. ಪ್ರತಿಮಾಡಿ ಮುಗಿಸಿದ ಕಾಲ ವಿಭವನಾಮ ಸಂವತ್ಸರದ ಫಾಲ್ಗುಣ ಬಹುಳ ೧೦ ಸ್ಥಿರ ವಾರ. ಪ್ರತಿಕಾರನ ವಿಚಾರವಾಗಿ ಏನೂ ತಿಳಿದುಬರುವುದಿಲ್ಲ. ಇದರಲ್ಲಿ ಮಧ್ಯೆಮಧ್ಯೆ ಗ್ರಂಥಪಾತವಿದೆ. ಅಶುದ್ಧ ಹೆಚ್ಚು.

ಟ:—ಈ ಪ್ರತಿಯಲ್ಲಿ ಉದ್ಯೋಗಪರ್ವದಿಂದ ಗದಾಪರ್ವ ಪೂರ್ತಿ ಗ್ರಂಥವಿದೆ. ಪ್ರತಿಕಾರನು ಇದನ್ನು ಪರಾಭವಸಂವತ್ಸರದ ಚೈತ್ರ ಶುದ್ಧ ಪೂರ್ಣಿಮಾ ಶನಿವಾರ ಬರೆದು ಮುಗಿಸಿರುತ್ತಾನೆ. ಪ್ರತಿ ಕಾರನ ವಿಚಾರವೇನೂ ತಿಳಿದುಬರುವುದಿಲ್ಲ. 'ಚ್ಚ' ಎಂದು ಬರೆಯುವ ಕಡೆಗಳ ಲ್ಲೆಲ್ಲಾ 'ತ್ಸ' ಎಂದು ಬರೆದಿರುವುದನ್ನು ಈ ಪ್ರತಿಯಲ್ಲಿ ಕಾಣಬಹುದು.

ದ:—ಈ ಪ್ರತಿಯು ವಿರಾಟಪರ್ವದಿಂದ ಆರಂಭವಾಗಿ ಗದಾಪರ್ವ ಪೂರ್ತಿ ಇದೆ. ಪ್ರತಿಮಾಡಿದ ಕಾಲವಾಗಲೀ ಪ್ರತಿಕಾರನ ವಿಚಾರವಾಗಲೀ ಏನೂ ತಿಳಿದು ಬರುವುದಿಲ್ಲ.

ಠ:—ಈ ಪ್ರತಿಯು ಹುಳುಹಿಡಿದು ಅತ್ಯಂತ ಶಿಥಿಲವಾಗಿದೆ. ಉದ್ಯೋಗ ಪರ್ವದಿಂದ ಗ್ರಂಥವು ಪ್ರಾರಂಭವಾಗಿ ಕರ್ಣಪರ್ವ ೨೫ನೇ ಸಂಧಿ ೧೫ನೇ ಪದ್ಯ ಪೂರ್ತಿ ಇದೆ. ಪ್ರತಿಮಾಡಿದ ಕಾಲವಾಗಲೀ ಪ್ರತಿಕಾರನ ವಿಚಾರವಾಗಲೀ ಏನೂ ತಿಳಿದು ಬರುವುದಿಲ್ಲ. ಈ ಪ್ರತಿಯಲ್ಲಿ ಶಕಟರೇಫ ಪ್ರಯೋಗವಿದ್ದರೂ ಸರಿಯಾಗಿಲ್ಲ.

ಡ:—ಈ ಪ್ರತಿಯಲ್ಲಿ ಆದಿಪರ್ವದಿಂದ ಉದ್ಯೋಗಪರ್ವ ಪೂರ್ತಿ ಗ್ರಂಥವಿದೆ. ಪ್ರತಿಕಾರನ ಹೆಸರು ಹುಲುಕೋಡ ಮಂಜಯ್ಯ. ಪ್ರತಿಮಾಡಲು ಪ್ರಾರಂಭಿಸಿದುದು ವಿಕ್ರಮ ಸಂವತ್ಸರದ ಕಾರ್ತಿಕ ಶುದ್ಧ ತೃತೀಯಾ ಬುಧವಾರ. ಮುಗಿಸಿದುದು ವಿಷು ಸಂವತ್ಸರದ ಆಷಾಢ ಶುದ್ಧ ದ್ವಾದಶೀ. ಬರವಣಿಗೆಯು ಸ್ಫುಟವಾಗಿದೆ.

ಣ:—ಈ ಪ್ರತಿಯಲ್ಲಿ ಆದಿಪರ್ವದಿಂದ ಉದ್ಯೋಗಪರ್ವ ಪೂರ್ತಿ ಗ್ರಂಥವಿದೆ. ಇದನ್ನು ಕಮುರವಾಡಿ ದೇವಣಪ್ಪೈಯನ ಮಗ ಹೊಸ್ಕೈಯನು ಬರೆದು ಮಂಗಲದ ನಂಜಯ್ಯನವರ ಕುಮಾರ್ರು ದೇವೈಯ್ಯನವರಿಗೆ ಕೊಟ್ಟಿರುತ್ತಾನೆ. ಪ್ರತಿಕಾರನು ಸರ್ವಜಿತ್ ಸಂವತ್ಸರದ ಚೈತ್ರಶುದ್ಧ ೧೪ ಚಂದ್ರವಾರ ಹಸ್ತನಕ್ಷತ್ರ ಕರ್ಕಾಟಕಲಗ್ನದಲ್ಲಿ ಇದನ್ನು ಬರೆದು ಮುಗಿಸಿರುತ್ತಾನೆ. ಅಕ್ಷರಗಳು ಗುಂಡಗಿದ್ದು ಬರವಣಿಗೆಯು ಸ್ಫುಟ ವಾಗಿದೆ.

ತ:—ಈ ಪ್ರತಿಯಲ್ಲಿ ಆದಿಪರ್ವದಿಂದ ಕರ್ಣಪರ್ವ ೮ ಸಂಧಿ ಪೂರ್ತಿ ಗ್ರಂಥವಿದೆ. ಅಕ್ಷರಗಳು ಸ್ಫುಟವಾಗಿವೆ. ಇದನ್ನು ಬರೆದ ಕಾಲವು ತಿಳಿದುಬರುವುದಿಲ್ಲ. ಇದನ್ನು ಬಳ್ಳಾರಿಯಲ್ಲಿದ್ದ ಪ್ರತಿಯಿಂದ ಬರೆದಿರು ತ್ತಾರೆ. ಈ ಬಳ್ಳಾರಿ ಪ್ರತಿಯನ್ನು ಕ್ರಿ. ಶ. 1820ನೇ ಅಕ್ಟೋಬರ್ ಮಾಹೆ 17ನೇ ತಾ॥ ಬರೆದು ಮುಗಿಸಿರುವಂತೆ ನಮ್ಮಲ್ಲಿರುವ ಪ್ರತಿಯ ಆರಂಭದಲ್ಲಿ ಬರೆದಿರುತ್ತಾರೆ.

ದ:—ಈಪ್ರತಿಯಲ್ಲಿ ವಿರಾಟಪರ್ವದಿಂದ ಪ್ರಾರಂಭವಾಗಿ ಗದಾಪರ್ವ ಪೂರ್ತಿ ಗ್ರಂಥವಿದೆ. ಅಕ್ಷರಗಳು ವಿರಳವಾಗಿಯೂ ಸ್ಫುಟವಾಗಿಯೂ ಇವೆ. ಇದನ್ನು ಪ್ರತಿಮಾಡಿದ ಕಾಲವಾಗಲೀ, ಪ್ರತಿಕಾರನ ವಿಚಾರವಾಗಲೀ ತಿಳಿದುಬರುವುದಿಲ್ಲ.

ನ:—ಈ ಪ್ರತಿಯಲ್ಲಿ ಆದಿಪರ್ವದಿಂದ ಗದಾಪರ್ವ ೯ನೇ ಸಂಧಿ ೪೧ನೇ ಪದ್ಯ ಪೂರ್ತಿ ಗ್ರಂಥವಿದೆ. ಓಲೆಯು ಪ್ರಾಚೀನವಾಗಿ ಕಂಡುಬರು ತ್ತದೆ. ಕೆಲವುಕಡೆ ಗ್ರಂಥಪಾತವಿದೆ. ಆದಿಪರ್ವ ಪೂರ್ತಿ ಪ್ರತಿಸಂಧಿಯ ಆರಂಭದಲ್ಲೂ ಈ ಪದ್ಯಗಳನ್ನು ಹಾಡಲು ರಾಗಗಳನ್ನು ಬರೆದಿರುವುದು ಈ ಪ್ರತಿಯ ಒಂದು ವೈಶಿಷ್ಟ್ಯ. ಪ್ರತಿಮಾಡಿದ ಕಾಲವಾಗಲೀ, ಪ್ರತಿ ಕಾರನ ವಿಚಾರವಾಗಲೀ ತಿಳಿದುಬರುವುದಿಲ್ಲ. ಪರ್ವಾರಂಭದಲ್ಲಿ 'ಶ್ರೀಮತೇ ರಾಮಾನುಜಾಯ ನಮಃ' ಎಂದು ಬರೆದಿರುವುದರಿಂದ ಈ ಪ್ರತಿಕಾರನು ಶ್ರೀವೈಷ್ಣವ ಮತದವನಿರಬಹುದು. ಶಕಟರೇಫವನ್ನು ಬರೆದಿದ್ದರೂ ಪ್ರಯೋಗವು ಸರಿಯಾಗಿಲ್ಲ. ಅಕ್ಷರಗಳು ಅತ್ಯಂತ ಸಣ್ಣಗೂ ಸ್ಫುಟ ವಾಗಿಯೂ ಇವೆ.

ಪ:—ಈ ಪ್ರತಿಯಲ್ಲಿ ಆದಿಪರ್ವದಿಂದ ಕರ್ಣಪರ್ವ ೨ನೇ ಸಂಧಿ ಪೂರ್ತಿ ಗ್ರಂಥವಿದೆ. ಪ್ರತಿಮಾಡಿದ ಕಾಲವಾಗಲೀ, ಪ್ರತಿಕಾರನ ವಿಚಾರ ವಾಗಲೀ ತಿಳಿದುಬರುವುದಿಲ್ಲ. ಪ್ರತಿಪರ್ವದ ಕೊನೆಯಲ್ಲೂ 'ಪ್ರತಿಸಮಾನಂ

ಬರೆದೆಂ' ಎಂದಿರುವುದರಿಂದ ಇದನ್ನು ಪ್ರತಿಕಾರನು ಮತ್ತೊಂದು ಪ್ರತಿಯಲ್ಲಿರುವಂತೆ ಬರೆದಿರುತ್ತಾನೆ.

ಬ:—ಈ ಪ್ರತಿಯು ಪ್ರಾರಂಭದಲ್ಲಿ ೨ ಓಲೆಗಳಿಲ್ಲ. ಆದಿಪರ್ವದಿಂದ ದ್ರೋಣಪರ್ವ ೨೪ ಸಂಧಿ ಪೂರ್ತಿ ಗ್ರಂಥವಿದೆ. ಅಕ್ಷರಗಳು ಸ್ಫುಟವಾಗಿದ್ದು ಓದಲು ಅನುಕೂಲವಾಗಿದೆ. ಪ್ರತಿಯನ್ನು ನೋಡಿದರೆ ಪ್ರಾಚೀನವೆಂದೇ ಹೇಳಬಹುದು. ಇದರಲ್ಲಿ ಶಕಟರೇಫವನ್ನು ಬಳಸಿರುತ್ತಾರೆ. ಪ್ರತಿಯನ್ನು ಬರೆದ ಕಾಲವಾಗಲೀ ಪ್ರತಿಕಾರನ ವಿಚಾರವಾಗಲೀ ತಿಳಿದು ಬರುವುದಿಲ್ಲ.

ಮ:—ಈ ಪ್ರತಿಯಲ್ಲಿ ಆದಿಪರ್ವದಿಂದ ಕರ್ಣಪರ್ವದಲ್ಲಿ ೨೪ನೇ ಸಂಧಿ ಪೂರ್ತಿ ಗ್ರಂಥವಿದೆ. ಇದನ್ನು ಪ್ರತಿಮಾಡಿ ಮುಗಿಸಿದುದು ರೌದ್ರಿನಾಮ ಸಂವತ್ಸರದ ಆಷಾಢ ಬಹುಳ ೪ ಗುರುವಾರ. ಪ್ರತಿಮಾಡಿದವರು ನಾಗಮಂಗಲದ ಅಗ್ರಹಾರದ ತಿಮ್ಮಪ್ಪಣ್ಣನವರ ಪೌತ್ರರಾದ ವೆಂಗಟಾಚಾರ್ಯರ ಪುತ್ರರಾದ ನಾಗಮಂಗಲದ ದೀಕ್ಷಿತ ತಿರುಮಲೆಂಗಾರರು. ಅಕ್ಷರಗಳು ಸ್ಫುಟವಾಗಿದ್ದರೂ ಸಣ್ಣಗಿರುವುದರಿಂದ ಓದುವುದು ಕಷ್ಟ. ಇದು 'ಕ' ಪ್ರತಿಯನ್ನು ಅಕ್ಷರಶಃ ಹೋಲುತ್ತದೆ. ಆದರೆ 'ಕ' ಪ್ರತಿಯಲ್ಲಿರುವಂತೆ ಇದರಲ್ಲಿ ಶಕಟರೇಫವಿಲ್ಲ.

ಯ:—ಗ್ರಂಥವು ಪೂರ್ಣವಾಗಿದೆ. ಅಕ್ಷರಗಳು ಸ್ಫುಟವಾಗಿವೆ. ವಿಕೃತಿನಾಮ ಸಂವತ್ಸರದ ಭಾದ್ರಪದ ಶುದ್ಧ ೨ ಶುಕ್ರವಾರ ಇದನ್ನು ಬರೆದು ಮುಗಿಸಿರುತ್ತಾರೆ. ಪ್ರತಿಕಾರನ ಹೆಸರು ತಿಳಿದುಬರುವುದಿಲ್ಲ. ಪ್ರತಿಮಾಡಿಸಿದವರು ಅರಕಲಗೂಡು ಸುಬೇದಾರು ಚನ್ನಬಸವಯ್ಯನವರು.

ರ:—ಗ್ರಂಥವು ಪೂರ್ಣವಾಗಿದೆ. ಅಕ್ಷರಗಳು ಸ್ಫುಟವಾಗಿವೆ. ಶಕಟರೇಫವನ್ನು ಬಳಸಿದೆ. ಇದನ್ನು ಪ್ರತಿಮಾಡಿದವನು ಹಿರಿಸಾವೆ ಸ್ಥಳದ ಭೈರಾಪುರದ ಲಕ್ಷುಮೈನವರ ಕೊಮಾರ ವೆಂಕಣ್ಣನವರ ಮಗ ಲಕ್ಷೀರಮಣಯ್ಯ. ಈತನು ಈ ಪ್ರತಿಯನ್ನು ಬರೆದು ತಿಮ್ಮಪ್ಪನಾಯಕನ ಕುಮಾರ ತಿರುಮಲನಾಯಕನಿಗೆ ಕೊಟ್ಟಿರುತ್ತಾನೆ. ಗ್ರಂಥವನ್ನು ಪ್ರತಿಮಾಡಿ ಮುಗಿಸಿದ ಕಾಲ—ಕೀಲಕ ಸಂವತ್ಸರದ ನಿಜವೈಶಾಖ ಶುದ್ಧ ೭ ಭಾನುವಾರ.

ಈ ೧೮ ಪ್ರತಿಗಳಲ್ಲಿ "ಕ,ಖ,ಚ,ಝ,ಠ,ಣ,ತ,ನ,ಬ,ಮ" ಪ್ರತಿಗಳನ್ನು ಬಿಟ್ಟು ಉಳಿದ ಪ್ರತಿಗಳ ಪಾಠಗಳು 'ಗ' ಪ್ರತಿಯನ್ನೇ ಸಾಮಾನ್ಯವಾಗಿ ಹೋಲುತ್ತವೆ. ಈ ಎಲ್ಲ ಪ್ರತಿಗಳಲ್ಲೂ ಕಂಡುಬರುವ ಪಾಠಕ್ಕೆ 'ಗಾ' ಎಂದು ಸಂಕೇತ ಕೊಟ್ಟಿದೆ. 'ಗಾ' ಸಂಕೇತದ ಪ್ರತಿಗಳ ಗುಂಪಿನಲ್ಲಿ, ಯಾವ ಪ್ರತಿಯ ಪಾಠವು ಬೇರೆಯಾದರೂ 'ಗಾ' ಎಂದು ಬರೆದು

ಅನಂತರ ಆ ಪ್ರತಿಯ ಅಕ್ಷರವನ್ನೂ ಪ್ರತ್ಯೇಕವಾಗಿ ಕೊಟ್ಟಿದೆ. ನಮ್ಮ ಸಂಸ್ಥೆಯಿಂದಲೇ ಹಿಂದೆ ಪ್ರಕಟಿತವಾಗಿರುವ ಉದ್ಯೋಗಪರ್ವದ ಕೆಲವು ಕಡೆಗಳಲ್ಲಿ ಮುದ್ರಿತವಾಗಿರುವ ಪಾಠಗಳು ನಮ್ಮಲ್ಲಿರುವ ಓಲೆ ಪ್ರತಿಗಳಲ್ಲಿಲ್ಲ. ಆದುದರಿಂದ ಆ ಪಾಠವನ್ನು 'ಮುದ್ರಿತಪಾಠ' ಎಂದು ಕೆಳಗಡೆ ಟಿಪ್ಪಣಿಯಲ್ಲಿ ಕೊಟ್ಟಿದೆ.

ಹೆಚ್ಚು ಪದ್ಯಗಳು

ಗಾ, ಚ ಪ್ರತಿಗಳಲ್ಲಿ ಹೆಚ್ಚು ಪದ್ಯಗಳಿವೆ. 'ಗ' ಪ್ರತಿಯನ್ನು ಹೋಲುವ ಕೆಲವು ಪ್ರತಿಗಳಲ್ಲಿ 'ಗ' ಪ್ರತಿಯಲ್ಲಿರುವ ಎಲ್ಲ ಹೆಚ್ಚು ಪದ್ಯಗಳೂ ಇಲ್ಲ. ಸಾಮಾನ್ಯವಾಗಿ ಹೆಚ್ಚು ಪದ್ಯಗಳನ್ನು ಮೂರನೆಯ ಸಂಧಿ, ನಾಲ್ಕನೆಯ ಸಂಧಿ, ಕೌರವನ ಆಸ್ಥಾನ ವರ್ಣನೆ, ಕೌರವನ ಸಭೆಗೆ ಕೃಷ್ಣನ ಆಗಮನ, ಕುಂತೀಕರ್ಣರ ಸಂಭಾಷಣೆ, ಮತ್ತು ಯುದ್ಧಸನ್ನಾಹ ಈ ಸನ್ನಿವೇಶಗಳಲ್ಲಿ ಸೇರಿಸಿರುತ್ತಾರೆ. ನೀತಿಪ್ರಧಾನವಾದ ೩ ಮತ್ತು ೪ನೇ ಸಂಧಿಗಳಲ್ಲಿ ಹೆಚ್ಚು ಪದ್ಯಗಳನ್ನು ಸೇರಿಸಲು ಅವಕಾಶವು ಬಹುಮಟ್ಟಿಗೆ ಇದೆ. ಈ ಸಂದರ್ಭಗಳಲ್ಲಿ ಹೊಸಪದ್ಯಗಳನ್ನು ಸೇರಿಸುವುದರಿಂದ ಕಥೆಗೆ ಯಾವ ವಿಚ್ಛೇದವೂ ಉಂಟಾಗುವುದಿಲ್ಲ. ಆದುದರಿಂದ ಕೆಲವು ಪ್ರತಿಕಾರರು ತಮತಮಗೆ ತಿಳಿದ ಪ್ರಸಿದ್ಧವಾದ ಕೆಲವು ನೀತಿಗಳನ್ನು ಇಲ್ಲಿ ಸೇರಿಸಿರುತ್ತಾರೆ. ಮತ್ತೆ ಕೆಲವರು ಸಂಸ್ಕೃತ ಭಾರತದಲ್ಲೇ ಈ ಪ್ರಕರಣದಲ್ಲಿ ವಿಸ್ತೃತವಾಗಿರುವ ನೀತಿಯ ಕೆಲವು ಭಾಗಗಳನ್ನು ಸಂಗ್ರಹಿಸಿ ಇಲ್ಲಿ ಸೇರಿಸಿರುತ್ತಾರೆ. ಹೀಗೆಯೇ ಉಳಿದ ಸನ್ನಿವೇಶಗಳಲ್ಲೂ ಕಥೆಗೆ ಯಾವ ಮಾರ್ಪಾಡೂ ಆಗದಂತೆ ಪ್ರತಿಕಾರರು ತಮತಮಗೆ ತೋರಿದ ವಿಷಯಗಳನ್ನು ಸೇರಿಸಿರುತ್ತಾರೆ. ಈ ಹೆಚ್ಚು ಪದ್ಯಗಳನ್ನು ಕುಮಾರವ್ಯಾಸಕೃತವೆಂದೇ ಹೇಳುವುದಾದರೆ ಈ ಪದ್ಯಗಳ ಶೈಲಿ ಉಳಿದ ತತ್ಕರ್ತೃಕ ಪದ್ಯಗಳಂತೆ ಇಲ್ಲ. ಅಲ್ಲದೆ ಕೆಲವೇ ಪ್ರತಿಕಾರರು ಈ ಪದ್ಯಗಳನ್ನು ಬರೆಯುವ ಕಾರಣವೂ ಇಲ್ಲ. ಈ ರೀತಿ ಹೆಚ್ಚೆಂದು ತಿಳಿದುಬಂದ ಪದ್ಯಗಳನ್ನು ಪರಿಶಿಷ್ಟ ೧ರಲ್ಲಿ ಸಂಗ್ರಹಿಸಿಕೊಟ್ಟಿದೆ.

ಸಂಧಿವಿಚಾರ

ಉದ್ಯೋಗಪರ್ವದಲ್ಲಿ ಕಂಡುಬರುವ ಸಂಧಿಸಂಖ್ಯಾದೃಷ್ಟಿಯಿಂದ ಪ್ರತಿಗಳನ್ನು ಮೂರು ಗುಂಪಾಗಿ ವಿಭಾಗಿಸಬಹುದು. ೧. ಹನ್ನೊಂದು ಸಂಧಿಗಳಿರುವ ಪ್ರತಿಗಳು. ೨. ಹನ್ನೆರಡು ಸಂಧಿಗಳಿರುವ ಪ್ರತಿಗಳು. ೩. ಹದಿಮೂರು ಸಂಧಿಗಳಿರುವ ಪ್ರತಿ. 'ಕ.ಖ.ಝ.ಠ.ತ.ಬ.ಮ' ಪ್ರತಿ

ಗಳಲ್ಲಿ ೧೧ ಸಂಧಿಗಳಿವೆ. 'ಜ.ಣ' ಪ್ರತಿಗಳನ್ನು ಬಿಟ್ಟು ಉಳಿದ ಪ್ರತಿಗಳಲ್ಲಿ ೧೨ ಸಂಧಿಗಳೂ 'ಣ' ಪ್ರತಿಯಲ್ಲಿ ೧೩ ಸಂಧಿಗಳೂ ಇವೆ. ಮೊದಲನೆಯ ಮುದ್ರಣದಲ್ಲಿ ಈ ಪರ್ವವನ್ನು ೧೨ ಸಂಧಿಗಳನ್ನಾಗಿಯೇ ವಿಭಾಗಮಾಡಿ ಮುದ್ರಿಸಿರುತ್ತಾರೆ. ಈ ಮುದ್ರಣದಲ್ಲಿರುವ ಸಂಧಿ ಸಂಖ್ಯೆ ೧೧.

ಸಂಧಿಸಂಖ್ಯೆಯನ್ನು ಹೆಚ್ಚುಮಾಡಲು ಕಾರಣಗಳು

೧. ಈ ಕನ್ನಡ ಭಾರತಕ್ಕೆ ಮೂಲವಾದ ಸಂಸ್ಕೃತ ಭಾರತದ ಉದ್ಯೋಗಪರ್ವವನ್ನು ೧೨ ಪರ್ವಗಳನ್ನಾಗಿ ವಿಭಾಗಿಸಿರುವುದು.

೨. ಹನ್ನೊಂದು ವ್ಯವಹಾರದಲ್ಲಿ ಅಶುಭಸಂಖ್ಯೆಯಾಗಿರುವುದು.

೩. '೯'ನೆಯ ಸಂಧಿಯ ಸೂಚನೆ ಪದ್ಯದಲ್ಲಿ 'ಅಸುರಾರಿ ದುರ್ಯೋಧನನ ಜರೆದ' ಎಂದು ಜರೆಯುವ ವಿಚಾರ ಮಾತ್ರವಿದ್ದು ಕೃಷ್ಣನು ವಿಶ್ವರೂಪವನ್ನು ತೋರಿಸುವ ಕಥಾಭಾಗವು ಸೂಚಿತವಾಗದಿರುವುದು.

ಈ ಮೂರು ಕಾರಣಗಳಲ್ಲಿ ಕೊನೆಯದಾದ ಸೂಚನೆಪದ್ಯದ ಅಪೂರ್ಣತೆಯು ವಿಚಾರಾರ್ಹವಾದುದು. ಸಂಧಿಯಲ್ಲಿ ಬರುವ ಎಲ್ಲ ಕಥಾಭಾಗವನ್ನೂ ತಿಳಿಸುವಂತೆ ಸೂಚನೆಪದ್ಯವನ್ನು ರಚಿಸಲು ಸಾಧ್ಯವಾಗುವುದಿಲ್ಲ. ಅದು ಕೆಲವನ್ನು ಮಾತ್ರ ಸೂಚಿಸುತ್ತದೆ. ಪ್ರಕೃತ ಸೂಚನೆ ಪದ್ಯದಲ್ಲಿ ಜರೆದನೆಂದು ಇದ್ದು ಈ ಸಂಧಿಯಲ್ಲಿ ಕೃಷ್ಣನು ದುರ್ಯೋಧನನನ್ನು ವಾಚ್ಯವಾಗಿ ಜರೆಯುವ ಪದ್ಯಗಳಿಲ್ಲದಿರುವ ಅಂಶವನ್ನು ತಿಳಿದು ಈ ಸಂದರ್ಭದಲ್ಲಿ, ಕೃಷ್ಣನು ದುರ್ಯೋಧನನನ್ನು ವಾಚ್ಯವಾಗಿ ಜರೆಯುವ ಕೆಲವು ಹೊಸ ಪದ್ಯಗಳನ್ನು ಮಾಡಿ ಕೆಲವು ಪ್ರತಿಕಾರರು ಸೇರಿಸಿರುವರಲ್ಲದೆ, ಕೃಷ್ಣನು ವಿಶ್ವರೂಪವನ್ನು ತೋರಿಸುವ ಕಥಾಭಾಗವನ್ನೂ ಬೇರೆ ಸಂಧಿಯನ್ನಾಗಿ ವಿಭಾಗಮಾಡಿರುತ್ತಾರೆ.

ಈ ರೀತಿ ಪ್ರತಿಕಾರರು ಕಥಾಭಾಗದಲ್ಲಿ ತಮಗೆ ತೋರಿಬಂದ ನ್ಯೂನತೆಗಳನ್ನು ಸರಿಪಡಿಸಲು ಹೊಸದಾಗಿ ಪದ್ಯಗಳನ್ನು ಸೇರಿಸಿರುವುದು ಅನೇಕ ಸಂದರ್ಭಗಳಲ್ಲಿದೆ. ಇಲ್ಲಿ ಜರೆಯುವುದೆಂದರೆ ವಾಚ್ಯವಾಗಿಯೇ ಜರೆಯಬೇಕೆಂದು ನಿಯಮವಿಲ್ಲ. ಕಾರ್ಯತಃ ಅದನ್ನು ತೋರಿಸಬಹುದು. ಕೃಷ್ಣನು, ತಾನು ಭಗವತ್ಸ್ವರೂಪನು ಎಂದು ತೋರಿಸುವುದರಿಂದಲೇ ತನ್ನ ಮಾತಿಗೆ ಬೆಲೆಕೊಡಬೇಕೆಂದೂ, ಬೆಲೆಕೊಡದೆ ಉಲ್ಲಂಘಿಸಿದರೆ ದುರ್ಯೋಧನನಿಗೆ ಕೇಡು ಖಂಡಿತವೆಂದೂ ತಿಳಿಸುವುದರ ಮೂಲಕ ದುರ್ಯೋಧನನ ಪರಾಕ್ರಮವು ಏತಕ್ಕೂ ಬಾರದು (ಪ್ರಯೋಜನಕಾರಿಯಲ್ಲ) ಎಂದು ತೋರ್ಪಡಿಸುವುದರಿಂದ ಆತನನ್ನು ಜರೆದಂತಾಗಲಿಲ್ಲವೇ? ಕೃಷ್ಣನನ್ನು ಕಟ್ಟಲು ಪ್ರಯತ್ನಪಟ್ಟಾಗ, ಕೃಷ್ಣನು ಕಟ್ಟಲು ಬಂದವರಿಗೆ ಸಿಕ್ಕದಿದ್ದುದು ಮತ್ತು ವಿಶ್ವರೂಪವನ್ನು ಎಲ್ಲರಿಗೂ ತೋರಿಸಿ

ಕೌರವನಿಗೆ ಮಾತ್ರ ಕಾಣಿಸದಂತೆ ಮಾಡಿದುದು ಆತನನ್ನು ಜರೆದಂತಾಗ ಲಿಲ್ಲವೇ? ಕೃಷ್ಣನು ಸಭೆಯಲ್ಲಿ ವಿಶ್ವರೂಪವನ್ನು ತೋರಿಸಿದುದು ದುರ್ಯೋಧನನನ್ನು ಜರೆಯುವುದಕ್ಕಾಗಿಯೇ. ಹೀಗಿರುವಾಗ ಇಲ್ಲಿ ಹೆಚ್ಚು ಪದ್ಯಗಳ ಆವಶ್ಯಕತೆಯಾಗಲೀ ವಿಶ್ವರೂಪವನ್ನು ತೋರಿಸುವ ಕಥಾಭಾಗಕ್ಕಾಗಿ ಬೇರೆಸಂಧಿಯು ಆವಶ್ಯಕತೆಯಾಗಲೀ ಇರುವುದಿಲ್ಲ. ಕುಮಾರವ್ಯಾಸನೇ ಉದ್ಯೋಗಪರ್ವವನ್ನು ೧೨ ಸಂಧಿಗಳನ್ನಾಗಿ ವಿಭಾಗ ಮಾಡಿದ್ದ ಪಕ್ಷಕ್ಕೆ ಪ್ರಾಚೀನಪ್ರತಿಗಳಲ್ಲಿ ೧೧ ಸಂಧಿ ಇದ್ದು ಉಳಿದ ಪ್ರತಿಗಳಲ್ಲಿ ೧೨ ಸಂಧಿ ಗಳಿರಲು ಕಾರಣವೇನು? ಈ ರೀತಿ ಸಂಧಿಯನ್ನು ಹೆಚ್ಚಿಸಿದುದರಿಂದ ಕಥೆಗೆ ಯಾವ ಪುಷ್ಟಿಯೂ ದೊರೆತಂತಾಗುವುದಿಲ್ಲ. ಹನ್ನೊಂದು ಸಂಧಿ ಇರುವುದರಿಂದ ಯಾವ ಕೊರತೆಯೂ ಇಲ್ಲ.

ಈ ಸೂಚನೆಪದ್ಯದ ಅಪೂರ್ಣತೆಯನ್ನೇ ಕಾರಣವನ್ನಾಗಿಟ್ಟು ಕೊಂಡು ಒಬ್ಬ ಪ್ರತಿಕಾರನು ೧೧ನೆಯ ಸಂಧಿಯನ್ನೂ ಎರಡು ಸಂಧಿ ಗಳನ್ನಾಗಿ ವಿಭಾಗಮಾಡಿರುತ್ತಾನೆ. ಹನ್ನೊಂದನೇ ಸಂಧಿಯು ಸೂಚನೆ ಪದ್ಯದಲ್ಲಿ ದ್ರುಪದಸುತನನ್ನು ಸೇನಾನಾಯಕನನ್ನಾಗಿ ಮಾಡಿದ ಕಥಾ ಭಾಗವು ಸೂಚಿತವಾಗಿಲ್ಲ. ಇದು ಮುಖ್ಯವಾಗಿ ಸೂಚನೆಪದ್ಯದಲ್ಲಿ ಸೂಚಿತ ವಾಗಬೇಕೆಂದು ತಿಳಿದು ಆ ಪ್ರತಿಕಾರನು

"ರಾಯ ದ್ರುಪದನಸುತನ ಸೇನಾನಾಯಕನ ಮಾಡಿದರು ಪಾಂಡವ
ರಾಯತಿಕೆಯಲಿ ಬಂದು ಬಿಟ್ಟರು ಸಮರಭೂಮಿಯಲಿ ॥"

ಎಂದು ಒಂದು ಸೂಚನೆಪದ್ಯವನ್ನು ಹೊಸದಾಗಿ ಸೇರಿಸಿ ಆ ಕಥಾ ಭಾಗವನ್ನೇ ಬೇರೆ ಸಂಧಿಯನ್ನಾಗಿ ವಿಭಾಗಮಾಡಿರುತ್ತಾನೆ. ಈ ಸೂಚನೆ ಪದ್ಯದ ಅಪೂರ್ಣತೆಯನ್ನೇ ಕಾರಣವನ್ನಾಗಿಟ್ಟುಕೊಂಡು ಐದನೆಯ ಸಂಧಿಗೆ ಬೇರೆ ಬೇರೆ ಸೂಚನೆಪದ್ಯವನ್ನು ಪ್ರತಿಕಾರರು ಬರೆದಿರುತ್ತಾರೆ. ಐದನೆಯ ಸಂಧಿಗೆ ೬ ಸೂಚನೆಪದ್ಯಗಳಿವೆ. ಇದರಿಂದ ಪ್ರತಿಕಾರರು ಯಾವರೀತಿ ಸೂಚನೆಪದ್ಯಗಳನ್ನು ಬದಲಾಯಿಸುತ್ತಾರೆ ಎನ್ನುವ ವಿಚಾರವು ಸ್ಪಷ್ಟ ಪಡುತ್ತದೆ.

ಈ ಮುದ್ರಣದಲ್ಲಿ ಉದ್ಯೋಗಪರ್ವವನ್ನು (ಕ, ಖ, ಝ, ಠ, ತ, ಬ, ಮ) ಪ್ರತಿಗಳಲ್ಲಿರುವಂತೆ ೧೧ ಸಂಧಿಗಳನ್ನಾಗಿ ವಿಭಾಗಮಾಡಿದೆ.

ಪ್ರತಿಕಾರರು ಮೇಲೆ ತಿಳಿಸಿರುವಂತೆ ಬದಲಾವಣೆಗಳನ್ನು ಮಾತ್ರ ವಲ್ಲದೆ ಹೊಸ ಕಥಾಭಾಗಗಳನ್ನೂ ಸೇರಿಸಿರುತ್ತಾರೆ. ಈ ವಿಧವಾದ ಪ್ರಕ್ಷಿಪ್ತಗಳನ್ನು ಸಂಸ್ಕೃತ ಭಾರತದಲ್ಲೂ ಕಾಣಬಹುದು. ಆದರೆ ಈ ಕಥಾಮಂಜರಿಯಲ್ಲಿ ಸಂಸ್ಕೃತಭಾರತದಲ್ಲೂ ಇಲ್ಲದ ಕಥಾಭಾಗಗಳನ್ನು ಸೇರಿಸಿರುವುದು ಕಂಡುಬರುತ್ತದೆ. ಈ ವಿಧವಾದ ಕಥಾಭಾಗಗಳಲ್ಲಿ ಐರಾವತಕಥೆಯೂ ಒಂದು. ಐರಾವತಕಥೆಯು ಸಂಸ್ಕೃತ ಭಾರತದಲ್ಲಿ

ಇರುವಂತೆ ತಿಳಿದು ಬರುವುದಿಲ್ಲ. ಭಾರತದಂತೆ ಪುರಾಣಗಳೂ ಅನೇಕ ಕಥೆಗಳು ಮತ್ತು ವ್ರತಗಳಿಗೆ ಆಕರವಾಗಿದೆ. ಪುರಾಣಗಳಲ್ಲಿ ದೊರೆಯದ ವಿಷಯಗಳಿಲ್ಲ. ಐರಾವತಕಥೆಯು ಭವಿಷ್ಯತ್ಪುರಾಣ ಮತ್ತು ಸ್ಕಾಂದೋಪಪುರಾಣಗಳಲ್ಲಿದೆ. ಸ್ಕಾಂದೋಪಪುರಾಣಾಂತರ್ಗತ ಸನತ್ಕುಮಾರ ಸಂಹಿತೆಯಲ್ಲಿ ೧೫ನೆಯದು ಗೌರೀಖಂಡ. ಈ ಗೌರೀಖಂಡದಲ್ಲಿರುವ ಗಜಗೌರೀವ್ರತದ ಕಥಾಭಾಗವು ಕನ್ನಡದಲ್ಲಿ ಐರಾವತ ಎಂಬ ಅಂಕಿತದಲ್ಲಿ ರಚಿತವಾಗಿದೆ. ನಮ್ಮ ಸಂಸ್ಥೆಯಲ್ಲಿ ಈ ಕೃತಿಯು ಒಂದು ಓಲೆ ಪ್ರತಿ ಇದೆ. ಇದರಲ್ಲಿ ೮ ಸಂಧಿಗಳಿವೆ. ಒಟ್ಟು ೪೧೩ ಪದ್ಯಗಳಿವೆ. ಧಾರವಾಡ ಕನ್ನಡ ಸಂಶೋಧನ ಸಂಸ್ಥೆಯವರು ಈ ಐರಾವತ ಗ್ರಂಥವನ್ನು ಮುದ್ರಿಸಿ ಪ್ರಕಟಿಸಿರುತ್ತಾರೆ. ಇದರಲ್ಲಿ ೩೭೫ ಪದ್ಯಗಳು ಮಾತ್ರ ಇವೆ. ನಮ್ಮ ಸಂಸ್ಥೆಯಲ್ಲಿರುವ ಪ್ರತಿಗೂ ಇದಕ್ಕೂ ಹೆಚ್ಚು ಪಾಠಾಂತರಗಳಿವೆ. ಈ ಗ್ರಂಥದ ಕೊನೆಯ ಪದ್ಯದಲ್ಲಿ *'ಗದುಗಿನ ವೀರನಾರಾಯಣ'ಎಂಬ ಅಂಕಿತ ವಿರುವುದರಿಂದ ಈ ಕೃತಿಯನ್ನು ಕುಮಾರವ್ಯಾಸಕೃತವೆಂದೇ ಕವಿಚರಿತೆಕಾರರು ಊಹಿಸಿರುತ್ತಾರೆ. ಆದರೆ ಈ ಒಂದೇ ಕಾರಣದಿಂದ ಈರೀತಿ ಸಿದ್ಧಾಂತ ಮಾಡಲು ಸಾಧ್ಯವಾಗುವುದಿಲ್ಲ. ಈ ವ್ರತಾನುಷ್ಠಾನಮಾಡುವ ಕನ್ನಡಿಗರಲ್ಲಾರೋ ಈ ಕೃತಿಯನ್ನು ರಚಿಸಿ ಭಾರತಕ್ಕೆ ಸಂಬಂಧಪಟ್ಟ ಕಥೆಯಾದುದರಿಂದ ಕನ್ನಡ ಭಾರತವನ್ನು ರಚಿಸಿರುವ ಕುಮಾರವ್ಯಾಸನೇ ಇದರ ಕರ್ತೃವೆಂದು ತಿಳಿಸುವುದಕ್ಕಾಗಿ ಭಾರತದಲ್ಲಿರುವಂತೆ ಈ ಕಥೆಯ ಕೊನೆಯಲ್ಲೂ 'ಗದುಗಿನ ವೀರನಾರಯಣ' ಎಂದು ಸೇರಿಸಿರಬಹುದು. ಕುಮಾರವ್ಯಾಸಭಾರತದಂತೆ ಈ ಕೃತಿಯೂ ಪ್ರಸಿದ್ಧಿಗೆ ಬರಲೆಂಬ ಆಶಯದಿಂದ ಗ್ರಂಥಕರ್ತೃವು ಈರೀತಿ ಮಾಡಿರಬಹುದು. ಕಾಲಕ್ರಮದಲ್ಲಿ ಈ ಕಥೆಯನ್ನೇ ಸಂಗ್ರಹಿಸಿ ಒಂದು ಸಂಧಿಯನ್ನಾಗಿ ಕನ್ನಡಭಾರತದ ಆದಿ

---

*ನಮ್ಮ ಸಂಸ್ಥೆಯಲ್ಲಿ "ಭವನ ಭಿಕ್ಷಾಟನ"ವೆಂಬ ಕಾವ್ಯದ (ನಂ. K 543) ಒಂದು ಓಲೆ ಪ್ರತಿ ಇದೆ. ಇದರಲ್ಲಿ ಮೂರು ಸಂಧಿಗಳಿವೆ. ಮೂರನೇ ಸಂಧಿಯ ಕೊನೆಯ ಪದ್ಯ ಈ ರೀತಿ ಇದೆ :—

"ಕರಿಗೊರಳ ಶಶಿಯೆಸೆವ ಜೂಟದ
ವರಭಸಿತ ಧೃತಧವಳಕಾಯನ
ಪರಮಪಾವನ ಹರನ ಭಿಕ್ಷಾಟನದ ವಿವರವನು।
ವಿರಚಿಸಿದೆನೆಂತೆನಲು ದುರಿತಾ
ಕ್ಷರವ ಕೆಡಿಸುವ ಕಾರುಣಿಕ ಸಿರಿ
ವರನು ಗದುಗಿನ ವೀರನಾರಾಯಣನ ಕರುಣದಲಿ॥"

ಈ ಪದ್ಯದಲ್ಲೂ ವೀರನಾರಾಯಣನ ಅಂಕಿತವಿರುವುದರಿಂದ ಇದನ್ನೂ ಕುಮಾರವ್ಯಾಸಕೃತವೆಂದು ಹೇಳಬೇಕಾಗುತ್ತದೆ. ಆದರೆ ಕಾವ್ಯಪರಿಶೀಲನೆಯಿಂದ ಇದು ಕುಮಾರವ್ಯಾಸಕೃತಿಯಲ್ಲವೆಂದು ತೋರುತ್ತದೆ.

ಪರ್ವದಲ್ಲಿ ಕೆಲವು ಪ್ರತಿಕಾರರು ಸೇರಿಸಿರುತ್ತಾರೆ. ಈ ಕಥಾಭಾಗವು ಕನ್ನಡಭಾರತದ ಎಲ್ಲ ಓಲೆಪ್ರತಿಗಳಲ್ಲೂ ದೊರೆಯುವುದಿಲ್ಲ. ಕಥೆ ಇರುವ ಎಲ್ಲ ಪ್ರತಿಗಳಲ್ಲೂ ಒಂದೇ ಕ್ರಮದಲ್ಲಿಲ್ಲ. ಪದ್ಯಸಂಖ್ಯೆಗಳೂ ಒಂದೇ ಸಮನಾಗಿಲ್ಲ. ಈ ಕಥೆಯಿರುವ ಪ್ರತಿಯ ಹೆಸರು ಸಂಧಿ ಮತ್ತು ಪದ್ಯ ಸಂಖ್ಯೆ ಇವುಗಳನ್ನು ಪಟ್ಟಿಮಾಡಿ ಕೆಳಗೆ ಕೊಟ್ಟಿದೆ:--

ಪ್ರತಿಯ ಹೆಸರು	ಆದಿಪರ್ವದಲ್ಲಿ ಸಂಧಿಸಂಖ್ಯೆ	ಪದ್ಯಸಂಖ್ಯೆ	ಪ್ರತಿಯ ನಂಬರು	ಆದಿಪರ್ವದಲ್ಲಿ ಸಂಧಿಸಂಖ್ಯೆ	ಪದ್ಯಸಂಖ್ಯೆ
ಖ	೮	೧೩೧	ಕೆ. ೨೫೦	೭	೧೪೫
ಗ	೩೮	೧೪೬	ಕೆ. ೨೧೮	೨೪	೧೯೦
ಙ	೮	೧೪೩	ಕೆ. ಎ. ೨೨೭	೨೧	೪೭
ನ	೨೧	೪೭	...	...	...
ನ	೨೩	೧೨೧	...	...	...
ಪ	೭	೧೪೫	...	...	...
ಮ	ಪರ್ವಾರಂಭಕ್ಕೆ ಮೊದಲು	೧೫೬	...	...	...
ಯ	೮	೧೪೪	...	...	...
ರ	೮	೧೫೧	...	...	...

'ನ' ಪ್ರತಿಯಲ್ಲಿ ಈ ಕಥೆಯು ಎರಡು ಕಡೆ ಇದೆ. ಇದರಲ್ಲಿ ೨೧ನೇ ಸಂಧಿಯಲ್ಲಿರುವ ಪದ್ಯಗಳೇ ಕೆ. ಎ. ೨೨೭ನೇ ನಂ. ಪ್ರತಿಯಲ್ಲಿಯೂ ಇವೆ. ಆದರೆ ಈ ಪದ್ಯಗಳು ಉಳಿದ ಪ್ರತಿಗಳಲ್ಲಾಗಲೀ ಐರಾವತಕೃತಿಯಲ್ಲಾಗಲೀ ಇಲ್ಲ. ಈ ಕಥೆಯಲ್ಲೂ ವ್ಯತ್ಯಾಸವಿದೆ. ಪುನಃ 'ನ'ಪ್ರತಿಯಲ್ಲಿ ೨೩ನೇ ಸಂಧಿಯಲ್ಲಿ ಈ ಕಥೆಯಿದೆ. ಇದು ಉಳಿದ ಪ್ರತಿಗಳಲ್ಲಿದೆ. ಈ ಕಥಾಭಾಗವು ಐರಾವತಕೃತಿಯ ಸಂಗ್ರಹ. 'ನ' ಪ್ರತಿಯ ೨೧ನೆಯ ಸಂಧಿ ಮತ್ತು ಕೆ. ಎ. ೨೨೭ನೆಯ ನಂ. ಪ್ರತಿಯಲ್ಲಿರುವ ಕಥೆಯು, ಸಂಸ್ಕೃತದಲ್ಲಿ 'ವ್ರತ ರಾಜ' ಎಂಬ ವ್ರತಗ್ರಂಥದಲ್ಲಿ ತಿಳಿಸಿರುವಂತೆ ಭವಿಷ್ಯತ್ಪುರಾಣದಲ್ಲಿರುವ ಗಜಗೌರೀವ್ರತದ ಕಥೆಯನ್ನು ಹೋಲುತ್ತದೆ. ಈ ಕನ್ನಡ ಅನುವಾದದ ಕೊನೆಯ ಪದ್ಯದಲ್ಲಿ,

> "ಎಲೆ ಮಹೀಪತಿ ಕೇಳು ನಿಮ್ಮಯ ಕುಲಪಿತಾಮಹರವರನೆಲ್ಲರ
> ನೊಲಿದು ಪಾಲಿಸುತಿರ್ದ ಗದುಗಿನ ವೀರನಾರಯಣ" ಎಂದಿದೆ.

ಐರಾವತ ಕೃತಿಯ ಕೊನೆಯಲ್ಲಿ 'ಗದುಗಿನ ವೀರನಾರಾಯಣ' ಎಂದಿರುವಂತೆ ಈ ಕಥಾಭಾಗದ ಕೊನೆಯಲ್ಲೂ ಗದುಗಿನ ವೀರನಾರ ಯಣ' ಎಂದಿರುವುದರಿಂದ ಇದನ್ನು ಐರಾವತ ಕೃತಿಯಂತೆ ಕುಮಾರ

ವ್ಯಾಸಕೃತವೆಂದೇ ಹೇಳಬೇಕಾಗುತ್ತದೆ. ಆದರೆ ಕುಮಾರವ್ಯಾಸನೇ ಒಂದು ಕೃತಿಯನ್ನು ಎರಡುವಿಧವಾಗಿ ರಚಿಸಿರುವನೆಂದು ಹೇಳುವುದು ಯುಕ್ತಿಯುಕ್ತವಾದುದಲ್ಲ. ಇದರಿಂದ ಈ ಕಥಾಭಾಗವು ಪ್ರಕ್ಷಿಪ್ತವೆಂದು ತಿಳಿಯುವುದೇ ಸಾಧುವಾಗಿ ತೋರುತ್ತದೆ. ಈ ವಿಧವಾಗಿ ಹೊಸಕಥಾಭಾಗವನ್ನೇ ರಚಿಸಿ ಒಂದು ಸಂಧಿಯನ್ನಾಗಿ ಪ್ರತಿಕಾರರು ಸೇರಿಸಿರುವ ಈ ಸನ್ನಿವೇಶವನ್ನು ನೋಡಿದರೆ, ಕೆಲವು ಪದ್ಯಗಳನ್ನು ಹೊಸದಾಗಿ ಸೇರಿಸಿ, ಒಂದೇ ಸಂಧಿಯನ್ನು ಎರಡಾಗಿ ವಿಭಾಗಿಸಿರುವುದು ಅತಿಶಯವಾಗಲಾರದು. ಹೀಗೆಯೇ ಪ್ರತಿಕಾರರು ತಮತಮಗೆ ತೋರಿದಂತೆ ಅನೇಕ ಕಡೆಗಳಲ್ಲಿ ಹೊಸಪದ್ಯಗಳನ್ನು ಸೇರಿಸಿರುತ್ತಾರೆ. ಇದನ್ನು ಸ್ಪಷ್ಟಪಡಿಸುವುದಕ್ಕಾಗಿಯೇ 'ಐರಾವತ' ಕಥೆಯ ಪ್ರಕ್ಷಿಪ್ತವಿಚಾರವನ್ನು ಇಲ್ಲಿ ವಿಮರ್ಶಿಸಿದೆ.

ಪರಿಶಿಷ್ಟ ೨ರಲ್ಲಿ ಭಾರತನಿಘಂಟನ್ನು ಕೊಟ್ಟಿದೆ. ಇದನ್ನು ನಮ್ಮಲ್ಲಿರುವ ಮೂರುಪ್ರತಿಗಳು ಮತ್ತು ರೆ. ಕಿಟ್ಟಲ್ ಅವರ ನಿಘಂಟುವಿನ ಆಧಾರದ ಮೇಲೆ ಸಿದ್ಧಗೊಳಿಸಿದೆ.*

ಇದರಲ್ಲಿ ೬೭ ಕಂದಪದ್ಯಗಳಿವೆ. ಇದರ ಕರ್ತೃವಿಚಾರವಾಗಲೀ, ಗ್ರಂಥದ ಕಾಲವಿಚಾರವಾಗಲೀ ಏನೂ ತಿಳಿದುಬರುವುದಿಲ್ಲ. ಈ ನಿಘಂಟಿನಲ್ಲಿ ಬರುವ ಪದಗಳನ್ನು ಸುಲಭವಾಗಿ ತಿಳಿದುಕೊಳ್ಳುವಂತೆ ಪದಗಳ ಅಕಾರಾದಿ ಮತ್ತು ಅರ್ಥವನ್ನೂ ಕೊಟ್ಟಿದೆ.

ಕುಮಾರವ್ಯಾಸ ಭಾರತವನ್ನು ಓದುವವರಿಗೆ ಅನುಕೂಲವಾಗಲೆಂಬ ಉದ್ದೇಶದಿಂದ ಈ ನಿಘಂಟನ್ನು ಇದರೊಡನೆ ಮುದ್ರಿಸಿದೆ.

ಎಸ್. ಎನ್. ಕೃಷ್ಣಜೋಯಿಸ್

---

*೧. ಕೆ. ೩೬೬ (ಕ). ೨. ಕೆ. ಎ. ೨೫೩ (ಖ). ೩. ಕೆ. ಬಿ. ೨೯೦ (ಗ). ೪. ಕಿಟಲ್ ನಿಘಂಟು (ಚ).